

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜೂನ್ 26 ಬುಧವಾರ 2024
45
ಸಂಪುಟ: 45 | ಸಂಚಿಕೆ: 71 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಹಾಲಿನ ದರ ಪ್ರತಿ ಲೀಟರ್‌ಗೆ 2 ರೂ. ಹೆಚ್ಚಳ

● ಇಂದಿನಿಂದಲೇ ಹೊಸ ದರ ಜಾರಿಗೆ ● ಇದು ದರ ಹೆಚ್ಚಳವಲ್ಲ, ಹೆಚ್ಚುವರಿ ಹಾಲಿನ ದರ: ಕೆಎಂಎಫ್ ಸಮರ್ಥನೆ



ವಿವಿಧ ಶ್ರೇಣಿಯ ಹಾಲಿನ ಹೊಸ ದರಗಳು ಹೀಗಿವೆ

ನೀಲಿ ಪ್ಯಾಕೆಟ್ ಹಾಲು 42 ರಿಂದ 44 ರೂ., ನೀಲಿ ಪ್ಯಾಕೆಟ್ (ಟೋನ್ಡ್ ಹಾಲು) 43 ರಿಂದ 45ರೂ., ಆರೆಂಜ್ ಪ್ಯಾಕೆಟ್ ಹಾಲು 46ರಿಂದ 48 ರೂ., ಆರೆಂಜ್ ಸ್ಪೆಷಲ್ ಹಾಲು 48 ರಿಂದ 50 ರೂ., ಶುಭಂ ಹಾಲು 48ರಿಂದ 50 ರೂ., ಸಮೃದ್ಧಿ ಹಾಲು 51ರಿಂದ 53ರೂ., ಶುಭಂ (ಟೋನ್ಡ್ ಹಾಲು) 49ರಿಂದ 51ರೂ., ಸಂತೃಪ್ತಿ ಹಾಲು 55 ರಿಂದ 57 ರೂ., ಶುಭಂ ಗೋಲ್ಡ್ ಹಾಲು 49ರಿಂದ 51ರೂ., ಶುಭಂ ಡಬಲ್ ಟೋನ್ಡ್ ಹಾಲು 41 ರಿಂದ 43 ರೂ.ಗೆ ಏರಿಕೆ.

ಬೆಂಗಳೂರು, ಜೂ.25(ಕೆಎಂಶಿ)– ಇತ್ತೀಚೆಗಷ್ಟೇ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ಮೇಲೆ ಕ್ರಮವಾಗಿ ಮೂರು, ಮೂರೂವರೆ ರೂ. ಹೆಚ್ಚಳ ಮಾಡಿದ್ದ ಕಾಂಗ್ರೆಸ್ ಸರ್ಕಾರ ಇದೀಗ ಮಕ್ಕಳು ಕುಡಿಯುವ ನಂದಿನಿ ಹಾಲಿನ ದರವನ್ನೂ ಪ್ರತಿ ಲೀಟರ್‌ಗೆ ಎರಡು ರೂ.ನಂತೆ ಏರಿಕೆ ಮಾಡಿದೆ.

> ❝ ನಂದಿನಿ ಹಾಲಿನ ಪ್ಯಾಕೇಟ್‌ಗಳಲ್ಲಿ ಹಾಲಿನ ಪ್ರಮಾಣವನ್ನು 50 ಎಂಎಲ್‌ನಷ್ಟು ಹೆಚ್ಚಳ ಮಾಡಿ, ಹೆಚ್ಚುವರಿ ಹಾಲಿಗೆ 2 ರೂ. ದರ ನಿಗದಿಪಡಿಸಿ ಗ್ರಾಹಕರಿಂದ ಸಂಗ್ರಹಿಸಲಾಗುತ್ತಿದೆಯೇ ವಿನಃ ಹಾಲಿನ ಬೆಲೆಯಲ್ಲಿ ಏರಿಕೆ ಮಾಡಿಲ್ಲ.
> – ಸಿದ್ದರಾಮಯ್ಯ, ಮುಖ್ಯಮಂತ್ರಿ

ಕರ್ನಾಟಕದಲ್ಲಿ ಹಾಲು ಉತ್ಪಾದನೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಎಲ್ಲಾ ಶ್ರೇಣಿಯ ಹಾಲಿನ ದರದಲ್ಲಿ ಪ್ರತಿ ಲೀಟರ್‌ಗೆ ಎರಡು ರೂ. ಹೆಚ್ಚಳ ಮಾಡಿದ್ದು, ಇದು ತಕ್ಷಣದಿಂದಲೇ (ಜೂನ್ 26ರಿಂದ) ಜಾರಿಗೆ ಬಂದಿದೆ. ಇನ್ನು ಮುಂದೆ ಅರ್ಧ ಲೀಟರ್ ಹಾಲು ಖರೀದಿಗೂ ಎರಡು ರೂ. ಹೆಚ್ಚಿನ ದರ ನೀಡಬೇಕು, ಒಂದು ಲೀಟರ್ ಖರೀದಿಸಿದರೂ ಎರಡು ರೂ. ನೀಡಬೇಕು.

ಸಾಮಾನ್ಯವಾಗಿ ಜನರು ಹೆಚ್ಚು ಬಳಕೆ ಮಾಡುವ ಟೋನ್ಡ್ ಹಾಲಿನ ಬೆಲೆ ಪ್ರಸ್ತುತ ಲೀಟರ್ 42 ರೂ.ನಿಂದ 44 ರೂ.ಗೆ ಹೆಚ್ಚಳ ಮಾಡಲಾಗಿದೆ. ● 9ನೇ ಪುಟಕ್ಕೆ

ಡಿ.20, 21, 22ರಂದು ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಭೆಯಲ್ಲಿ ನಿರ್ಧಾರ

ಬೆಂಗಳೂರು/ಮಂಡ್ಯ, ಜೂ.25 (ಮೋಹನ್‌ರಾಜ್)– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ಈ ವರ್ಷದ ಡಿ.20, 21, 22ರಂದು ನಡೆಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಮಂಗಳವಾರ ನಗರದ ಗೃಹ ಕಚೇರಿ ಕೃಷ್ಣಾದಲ್ಲಿ ಸಾಹಿತ್ಯ ಸಮ್ಮೇಳನದ ಪೂರ್ವಭಾವಿಯಾಗಿ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವ, ಶಾಸಕರೊಂದಿಗೆ ಸಭೆ ನಡೆಸಿದ ನಂತರ ಮಾಧ್ಯಮದವರಿಗೆ ಮಾಹಿತಿ ನೀಡಿದ ಅವರು, ಈ ಹಿಂದೆ ಜೂನ್ ತಿಂಗಳಲ್ಲಿ ಸಮ್ಮೇಳನ ಆಯೋಜಿಸಲು ತೀರ್ಮಾನಿಸಲಾಗಿತ್ತು. ಆದರೆ ಚುನಾವಣಾ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು. ಇದೀಗ ಡಿಸೆಂಬರ್ ತಿಂಗಳಲ್ಲಿ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ ಎಂದರು.

ಸಮ್ಮೇಳನದಲ್ಲಿ ರಾಜ್ಯ, ಹೊರರಾಜ್ಯ ಹಾಗೂ ವಿದೇಶದ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡುವುದಾಗಿ ಅವರು ತಿಳಿಸಿದರು. ಸರ್ಕಾರ, ಜಿಲ್ಲಾಡಳಿತ ಮತ್ತು ಸಾಹಿತ್ಯ ಪರಿಷತ್ತಿಗೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು, ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ● 9ನೇ ಪುಟಕ್ಕೆ



ಮಂಗಳವಾರ ನಗರದ ಗೃಹ ಕಚೇರಿ ಕೃಷ್ಣಾದಲ್ಲಿ ಸಾಹಿತ್ಯ ಸಮ್ಮೇಳನದ ಪೂರ್ವಭಾವಿಯಾಗಿ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವ, ಶಾಸಕರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

ಮಹೇಶ್ ಜೋಶಿ ನೇತೃತ್ವದಲ್ಲೇ ಸಮ್ಮೇಳನ



ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ರವಿಕುಮಾರ್ ಚಾಮಲಾಪುರ ಅಕಾಲಿಕ ನಿಧನರಾಗಿರುವ ಹಿನ್ನೆಲೆಯಲ್ಲಿ ಸಮ್ಮೇಳನದ ಉಸ್ತುವಾರಿಯನ್ನು ಕೇಂದ್ರ ಕಸಾಪ ಅಧ್ಯಕ್ಷ ಡಾ.ಮಹೇಶ್ ಜೋಶಿ ಹೊರಲಿದ್ದು, ಅವರ ನೇತೃತ್ವದಲ್ಲೇ ಸಮ್ಮೇಳನ ನಡೆಯಲಿದೆ.

ಸಮ್ಮೇಳನದ ಸ್ವಾಗತ ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಜಿಲ್ಲಾಧಿಕಾರಿ ಡಾ.ಕುಮಾರ, ಎಡಿಸಿ ಡಾ.ನಾಗರಾಜು ಜೊತೆಯಲ್ಲಿ ಮಹೇಶ್ ಜೋಶಿ ನೇತೃತ್ವ ವಹಿಸಿಕೊಳ್ಳಲಿದ್ದು, ಇವರೊಂದಿಗೆ ಜೋಶಿ ಅಧ್ಯಕ್ಷತೆಯಲ್ಲಿ ನಿರ್ವಹಣಾ ಹಾಗೂ ಸಲಹಾ ಸಮಿತಿ ಸಹ ರಚನೆಯಾಗಲಿದೆ.

ರವಿ ಚಾಮಲಾಪುರ ನಿಧನದ ಹಿನ್ನೆಲೆಯಲ್ಲಿ ರವಿಕುಮಾರ್ ನೇಮಿಸಿದ್ದ ಕೆಲ ಪದಾಧಿಕಾರಿಗಳು ತಮ್ಮ ನೇತೃತ್ವದಲ್ಲಿ ಸಮ್ಮೇಳನ ನಡೆಯಲಿದೆ ಎಂದು ಕೆಲವೆಡೆ ಪ್ರಚಾರ ಮಾಡಿದ್ದ ಹಿನ್ನೆಲೆಯಲ್ಲಿ ಎಚ್ಚೆತ್ತ ರಾಜ್ಯಾಧ್ಯಕ್ಷರು ಜನರಿಂದ ● 2ನೇ ಪುಟಕ್ಕೆ

ಹಾಸನ ಪೆನ್‌ಡ್ರೈವ್, ವಿಡಿಯೋ ಹಂಚಿಕೆ ಪ್ರಕರಣ

ಮಾಜಿ ಶಾಸಕ ಪ್ರೀತಂಗೌಡ ವಿರುದ್ಧ ಎಸ್‌ಐಟಿ FIR

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಪ್ರಕರಣ ದಾಖಲು



ಪ್ರೀತಂಗೌಡ


ಪ್ರಜ್ವಲ್

ಬೆಂಗಳೂರು, ಜೂ.25(ಕೆಎಂಶಿ)– ಹಾಸನ ಪೆನ್‌ಡ್ರೈವ್ ಹಾಗೂ ವಿಡಿಯೊ ಹಂಚಿಕೆ ಆರೋಪಿ, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂಗೌಡ ವಿರುದ್ಧ ಎಸ್‌ಐಟಿ ಪೊಲೀಸರು ಎಫ್‌ಐಆರ್ ದಾಖಲು ಮಾಡಿದ್ದಾರೆ.

ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದನ್ನು ವಿಡಿಯೊ ಮಾಡಿ ವೈರಲ್ ಮಾಡಿರುವ ಆರೋಪದ ಮೇಲೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದ್ದು ಇದೇ ಪ್ರಕರಣದಲ್ಲಿ ಪ್ರೀತಂಗೌಡ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದೆ. ಇದೇ ವೇಳೆ ಪ್ರೀತಂಗೌಡ ಅವರ ಎಡಗೈ–ಬಲಗೈ ಬಂಟರಂತಿರುವ ಶರತ್ ಹಾಗೂ ಕಿರಣ್ ಅವರನ್ನು ಈಗಾಗಲೇ ಎಸ್‌ಐಟಿ ತನ್ನ ವಶಕ್ಕೆ ತೆಗೆದುಕೊಂಡಿದೆ. ಸಂತ್ರಸ್ತೆಯೊಬ್ಬರು ● 9ನೇ ಪುಟಕ್ಕೆ

ಲೋಕಸಭೆ ವಿಪಕ್ಷ ನಾಯಕರಾಗಿ ರಾಹುಲ್ ಗಾಂಧಿ ಆಯ್ಕೆ



ನವದೆಹಲಿ, ಜೂ.25– ಲೋಕಸಭೆ ವಿರೋಧ ಪಕ್ಷದ ನಾಯಕನಾಗಿ, ಕಾಂಗ್ರೆಸ್ ನಾಯಕ ಹಾಗೂ ರಾಯ್ ಬರೇಲಿ ಸಂಸದ ರಾಹುಲ್ ಗಾಂಧಿಯನ್ನು ಆಯ್ಕೆ ಮಾಡಲಾಗಿದೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ದೆಹಲಿಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಿಂದ ಇಂಡಿಯಾ ಬ್ಲಾಕ್‌ನ ಫ್ಲೋರ್ ಲೀಡರ್‌ಗಳ ಸಭೆಯಲ್ಲಿ ಪಾಲ್ಗೊಂಡ ಬಳಿಕ ಈ ನಿರ್ಧಾರ ಹೊರಬಿದ್ದಿದೆ. ಬುಧವಾರ ಲೋಕಸಭೆ ಸ್ಪೀಕರ್ ಚುನಾವಣೆ ನಡೆಯಲಿದೆ. ಇದರ ಬೆನ್ನಲ್ಲೇ ವಿರೋಧ ಪಕ್ಷದ ನಾಯಕನನ್ನಾಗಿ ರಾಹುಲ್ ಗಾಂಧಿ ಅವರನ್ನು ಆಯ್ಕೆ ಮಾಡಲಾಗಿದೆ.

ಕಲುಷಿತಗೊಳ್ಳುತ್ತಿರುವ ಜೀವನದಿ ಕಾವೇರಿ

ಸ್ಥಳ ಪರಿಶೀಲನೆ ನಡೆಸಿ, ವರದಿ ನೀಡುವಂತೆ ಡಿಸಿಎಂ ಡಿಕೆಶಿ ಆದೇಶ

● ಕಾವೇರಿ ಒಡಲು ಸೇರುತ್ತಿರುವ ನಗರ ಪ್ರದೇಶದ ಕೊಳಕು, ಕೈಗಾರಿಕೆಗಳ ತ್ಯಾಜ್ಯ ● ಲಕ್ಷಾಂತರ ಜನ ಇದೇ ನೀರು ಸೇವನೆ



ಮೈಸೂರು, ಜೂ.25(ಬಿಎಲ್‌ಆರ್)– ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ಸಾವಿರಾರು ಹಳ್ಳಿಗಳ ಲಕ್ಷಾಂತರ ಜನರ ಜೀವಜಲವಾಗಿರುವ ಕಾವೇರಿ ನದಿ ನೀರು ಮಲಿನಗೊಳ್ಳುತ್ತಿರುವ ಬಗ್ಗೆ ಸಮಗ್ರ ವರದಿ ನೀಡುವಂತೆ ಜಲಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದೇಶ ನೀಡಿದ್ದಾರೆ. ಕಾವೇರಿ ನದಿಗೆ ತ್ಯಾಜ್ಯ ನೀರು ಹರಿಯುತ್ತಿರುವ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿ, ಇದರ ತಡೆಗೆ ಸ್ಥಳೀಯ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಿ ವರದಿ ನೀಡುವಂತೆ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಡಿ.ಕೆ.ಶಿವಕುಮಾರ್ ಆದೇಶಿಸಿದ್ದಾರೆ. ನಗರ ಪ್ರದೇಶದ ಕಲುಷಿತ ನೀರಲ್ಲದೆ, ಕೈಗಾರಿಕೆಗಳ ತ್ಯಾಜ್ಯ ನೀರು ಕಾವೇರಿ ನದಿ ಸೇರುತ್ತಿರುವ ಆತಂಕಕಾರಿ ವಿಚಾರವನ್ನು ಶಾಸಕ ದಿನೇಶ್ ಗೂಳೀಗೌಡ, ● 9ನೇ ಪುಟಕ್ಕೆ



ಮುಡಾದಲ್ಲಿ ಅಧಿಕಾರಿಗಳಿಂದ ಕಳ್ಳೇಪುರಿಯಂತೆ ಶೇ.50:50 ಅನುಪಾತದಡಿ 4,500ರಿಂದ 5,000 ನಿವೇಶನ ಹಂಚಿಕೆ!

● ಮುಡಾದಲ್ಲಿ ಸಾವಿರಾರು ಕೋಟಿ ರೂ. ಅವ್ಯವಹಾರ ಶಂಕೆ ● ಸರ್ಕಾರಕ್ಕೆ ಸಲ್ಲಿಕೆಯಾದ ದೂರು, ಆರೋಪಗಳ ಕುರಿತು ತನಿಖೆ ನಡೆಸಿದ ತಾಂತ್ರಿಕ ಸಮಿತಿ ವರದಿಯಲ್ಲಿ ಮುಡಾ ಬಂಡವಾಳ ಬಯಲು ● ನಿಯಮಬಾಹಿರವಾಗಿ ಮುಡಾ ಸಭೆ ಕೈಗೊಂಡಿದ್ದ ನಿರ್ಣಯ ರದ್ದುಗೊಳಿಸಿದ ಸರ್ಕಾರ; ಆದರೆ ಅಧಿಕಾರಿಗಳು ಅದನ್ನು ಧಿಕ್ಕರಿಸಿ ನಿರ್ಧಾರ ● ಅಕ್ರಮವಾಗಿ ನಿವೇಶನ ಮಂಜೂರು ಮಾಡಿ ಸರ್ಕಾರಕ್ಕೆ ನಷ್ಟ ಉಂಟುಮಾಡಿರುವುದಕ್ಕೆ ಕಾರಣ ಕೇಳಿ ನೋಟಿಸ್ ಜಾರಿ


ಕೆ.ಮರೀಗೌಡ


ದಿನೇಶ್‌ಕುಮಾರ್

■ ಎಸ್.ಟಿ.ರವಿಕುಮಾರ್

ಮೈಸೂರು, ಜೂ. 25–ಮೈಸೂರು ನಗರವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಪಡಿಸಿ, ಜನತೆಗೆ ಮೂಲ ಸೌಲಭ್ಯ ಕಲ್ಪಿಸುವುದು ಹಾಗೂ ಸೂರಿಲ್ಲದ ಅರ್ಹರಿಗೆ ನಿಯಮಾನುಸಾರ ನಿವೇಶನ, ಮನೆ ಹಂಚಿಕೆ ಮಾಡುವ ಮೂಲ ಉದ್ದೇಶದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದ ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ) ಅರ್ಥಾತ್ ಹಾಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಬರಬರುತ್ತ ನಿಯಮಾವಳಿಗಳ ಗಾಳಿಗೆ ತೂರಿ, ಕಾನೂನು ಬಾಹಿರವಾಗಿ ಪ್ರಭಾವಿಗಳ, ಮಧ್ಯವರ್ತಿಗಳ ಕೈಗೊಂಬೆಯಾಗಿ, ಅಧಿಕಾರಿಗಳ ಸ್ವಹಿತ ಸಾಧನೆಯ ಕೇಂದ್ರವಾಗಿರುವುದು ದುರದೃಷ್ಟಕರ ಸಂಗತಿ.



ರೈತರಿಂದ ನಿಯಮಾನುಸಾರ ಭೂಮಿ ಸ್ವಾಧೀನ ಅಥವಾ ಪರಸ್ಪರ ಒಪ್ಪಂದದಂತೆ ಪಡೆದ ಭೂಮಿಯಲ್ಲಿ ವಸತಿ ಬಡಾವಣೆ ನಿರ್ಮಿಸಿ ಲಭ್ಯವಾಗುವ ವಿವಿಧ ಅಳತೆಯ ನಿವೇಶನಗಳನ್ನು, ನಿಯಮಾವಳಿಯಂತೆ ಅರ್ಜಿ ಆಹ್ವಾನಿಸಿ ಜ್ಯೇಷ್ಠತೆ ಪ್ರಕಾರ ಅರ್ಹರಿಗೆ ಹಂಚಿಕೆ ಮಾಡುವ ಮೂಲಕ ಜನಸಾಮಾನ್ಯರು ಸ್ವಂತ ಸೂರು ಹೊಂದಲು, ಸ್ವಾಭಿಮಾನದಿಂದ ಬದುಕಲು ಅನುವಾಗುವಂತೆ ಮಾಡಬೇಕೆಂಬುದೇ ಸಿಐಟಿಬಿ ಅಥವಾ ಮುಡಾದ ಪ್ರಮುಖ ಉದ್ದೇಶವಾಗಿದೆ. ಆದರೆ, ಇತ್ತೀಚೆಗೆ ಅನುದಾನ ದುರ್ಬಳಕೆ, ಬದಲಿ ನಿವೇಶನಗಳ ಹಂಚಿಕೆ, ಭೂಸ್ವಾಧೀನ ಪರಿಹಾರ, ಪ್ರಾಧಿಕಾರದ ಸಭೆಯಲ್ಲಿ ಕಾಯ್ದೆ, ನಿಯಮಗಳಿಗೆ ವಿರುದ್ಧವಾಗಿ ವಿಷಯಗಳನ್ನು ಮಂಡಿಸಿ ನಿರ್ಣಯ ಕೈಗೊಂಡು, ಭಾರಿ ಅವ್ಯವಹಾರಕ್ಕೆ ನಾಂದಿ ಹಾಡಿರುವುದು; ಅಧ್ಯಕ್ಷರ ವಿರುದ್ಧ ಆಯುಕ್ತರು, ಆಯುಕ್ತರ ವಿರುದ್ಧ ಅಧ್ಯಕ್ಷರು ನಿತ್ಯವೂ ಆರೋಪ–ಪ್ರತ್ಯಾರೋಪಕ್ಕೆ ನಾಂದಿ ಹಾಡಿರುವುದರ ಬಗ್ಗೆ ಸಾರ್ವಜನಿಕರು ಮತ್ತು ಸಂಘ–ಸಂಸ್ಥೆಗಳಿಂದ ಸರ್ಕಾರಕ್ಕೆ ನೂರಾರು ದೂರುಗಳು ಸಲ್ಲಿಕೆಯಾಗಿವೆ.

ಕಾಯ್ದೆಯಲ್ಲಿ ಅವಕಾಶವಿಲ್ಲದಿದ್ದರೂ, 2020ರ ಸೆಪ್ಟೆಂಬರ್ 14ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ನಿಯಮಬಾಹಿರ ನಿರ್ಣಯ ಕೈಗೊಂಡಿದ್ದು, ಅದರಂತೆ ಪ್ರಾಧಿಕಾರದ ಬಡಾವಣೆ ಉದ್ದೇಶಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೆ, ಪರಿಹಾರ ನೀಡದೇ ಜಮೀನನ್ನು ಬಳಸಿಕೊಳ್ಳುವ ಪ್ರಕರಣಗಳಲ್ಲಿ ಶೇ.50:50 ಅನುಪಾತದಲ್ಲಿ ಈವರೆಗೆ ಮುಡಾ ಅಭಿವೃದ್ಧಿಗೊಳಿಸಿದ ಪ್ರತಿಷ್ಠಿತ ಬಡಾವಣೆಗಳಲ್ಲಿ ● 2ನೇ ಪುಟಕ್ಕೆ

ಕೇಜ್ರಿವಾಲ್‌ಗೆ ಜಾಮೀನು ನಿರಾಕರಿಸಿದ ಹೈಕೋರ್ಟ್

ನವದೆಹಲಿ, ಜೂ.25– ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ



ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ವಿಚಾರಣಾ ನ್ಯಾಯಾಲಯ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು. ಆದರೆ ವಿಚಾರಣಾ ನ್ಯಾಯಾಲದ ಆದೇಶ ತಡೆಹಿಡಿಯುವಂತೆ ಕೋರಿ ಜಾರಿ ನಿರ್ದೇಶನಾಲಯ ಮಾಡಿದ್ದ ಮನವಿಗೆ ದೆಹಲಿ ಹೈಕೋರ್ಟ್ ಪುರಸ್ಕರಿಸಿದೆ.

ಜಸ್ಟಿಸ್ ಸುಧೀರ್ ಕುಮಾರ್ ಜೈನ್ ಅವರ ಪೀಠ, ಜೂನ್ 20ರಂದು ವಿಚಾರಣಾ ನ್ಯಾಯಾಲಯ ಅರವಿಂದ್ ಕೇಜ್ರಿವಾಲ್ ಅವರಿಗೆ ನೀಡಿದ್ದ ಜಾಮೀನು ಆದೇಶಕ್ಕೆ ತಡೆ ನೀಡಿದೆ. ಟ್ರಯಲ್ ಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಇಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಪೀಠವು ಜೂನ್ 21 ರಂದು ಆದೇಶ ಕಾಯ್ದಿರಿಸಿತ್ತು. ಇಂದು ತನ್ನ ತೀರ್ಪು ನೀಡಿದೆ. ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರನ್ನು ಕಳೆದ ಮಾರ್ಚ್ 21ರಂದು ಇಡಿ ಬಂಧಿಸಿತ್ತು. ಚುನಾವಣಾ ಪ್ರಚಾರಕ್ಕಾಗಿ ಸುಪ್ರೀಂ ಕೋರ್ಟ್ ಜೂನ್ 1ರವರೆಗೆ ಮಧ್ಯಂತರ ಜಾಮೀನು ನೀಡಿತ್ತು. ಜೂನ್ 2 ರಂದು ಅವರು ಮತ್ತೆ ಶರಣಾಗಿದ್ದರು.

ಒಂದನೇ ಪುಟದಿಂದ

4,500ರಿಂದ 5,000 ನಿವೇಶನ ಹಂಚಿಕೆ!

ಕೋಟಾಂತರ ರೂ. ಬೆಲೆ ಬಾಳುವ ಸುಮಾರು 4,500ರಿಂದ 5000 ನಿವೇಶನಗಳನ್ನು ಮಂಜೂರು ಮಾಡಿ ಮುಡಾಗೆ ಸಾವಿರಾರು ಕೋಟಿ ರೂ. ನಷ್ಟ ಉಂಟು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ.

ಸಭೆಗಳಲ್ಲಿ ಕೈಗೊಂಡ ನಿಯಮ ಬಾಹಿರ ನಿರ್ಣಯಗಳನ್ನು ಪ್ರಾಧಿಕಾರದ ಆಯುಕ್ತರು ಕರ್ನಾಟಕದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 13(ಎ), ಪ್ಯಾರಾ–2ರನ್ವಯ ಸರ್ಕಾರಕ್ಕೆ ಸಲ್ಲಿಸಿ ಸೂಕ್ತ ಆದೇಶ ಪಡೆದು ನಿರ್ಣಯವನ್ನು ಜಾರಿಗೊಳಿಸಬೇಕು ಎಂದು ಅಭಿಪ್ರಾಯಿಸಿದ ಸರ್ಕಾರವು, 2020ರ ಸೆಪ್ಟೆಂಬರ್ 14ರಂದು ಶೇ. 50:50ರ ಅನುಪಾತದಡಿ ನಿವೇಶನ ನೀಡಬೇಕೆಂದು ಕೈಗೊಂಡಿದ್ದ ನಿರ್ಣಯವನ್ನು ರದ್ದುಪಡಿಸಿದ್ದರೂ ಅದನ್ನು ಲೆಕ್ಕಿಸದೇ ಆಯುಕ್ತರು ಎಗ್ಗಿಲ್ಲದೇ ನಿವೇಶನ ಮಂಜೂರು ಮಾಡುತ್ತಿದ್ದಾರೆ ಎಂದು ಹಾಲಿ ಮುಡಾ ಅಧ್ಯಕ್ಷ ಕೆ. ಮರೀಗೌಡರು ತಮ್ಮ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಭೂ ಮಾಲೀಕರಿಗೆ ನಿಯಮ ಬಾಹಿರವಾಗಿ ವಿಜಯನಗರ, ದಟ್ಟಗಳ್ಳಿ, ಜೆ.ಪಿ.ನಗರ, ಆರ್.ಟಿ.ನಗರಗಳಂತಹ ಪ್ರತಿಷ್ಠಿತ ಬಡಾವಣೆಗಳಲ್ಲಿ ಶೇ. 50:50ರಡಿ ನಿವೇಶನ ಹಂಚಿಕೆ ಮಾಡಿ ಕೋಟ್ಯಾಂತರ ರೂ. ಅವ್ಯವಹಾರ ನಡೆಸಿರುವುದಾಗಿ ಮತ್ತು ಪ್ರತೀ ದಿನ ಹೀಗೆ ನಿಯಮಬಾಹಿರವಾಗಿ 25ರಿಂದ 50 ನಿವೇಶನ ಹಂಚಿಕೆ ಮಾಡಲಾಗುತ್ತಿದೆ ಎಂದು ಪಿ.ಎಸ್. ನಟರಾಜ್ ಎಂಬುವರು ಸರ್ಕಾರಕ್ಕೆ ದೂರು ಸಲ್ಲಿಸಿದ್ದರು.

ಬದಲಿ ನಿವೇಶನ, ತುಂಡು ಜಾಗ ಹಂಚಿಕೆ, ಭೂ ಪರಿಹಾರದ ನಿವೇಶನ ನೀಡುವುದರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು, 1991ರ ನಿಯಮ 16(1) ಉಲ್ಲಂಘನೆ ಮಾಡಿರುವುದರಿಂದ ಸರ್ಕಾರಕ್ಕೆ ಭಾರೀ ಪ್ರಮಾಣದ ಆರ್ಥಿಕ ನಷ್ಟ ಉಂಟುಮಾಡಿರುವುದು ಕಂಡುಬಂದಿದೆ ಎಂದು ಅಧೀನ ಕಾರ್ಯದರ್ಶಿಗಳು, ಮುಡಾ ಆಯುಕ್ತರಿಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿದ್ದರು.

ನಿಮ್ಮ ವರ್ತನೆಯು ಸರ್ಕಾರಿ ನೌಕರನಿಗೆ ತಕ್ಕದಾಗಿರದೇ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 3 ಅನ್ನು ಉಲ್ಲಂಘಿಸಿದಂತಾಗಿದೆಯಾದ್ದರಿಂದ ತಮ್ಮ ವಿರುದ್ಧ ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1957ರನ್ವಯ ಶಿಸ್ತು ಕ್ರಮ ಜರುಗಿಸಲು ಶಿಫಾರಸು ಮಾಡಲಾಗುವುದೆಂದು ಅವರು ಮುಡಾ ಆಯುಕ್ತರಿಗೆ ಕಾರಣ ಕೇಳುವ ನೋಟಿಸ್‌ನಲ್ಲಿ ಎಚ್ಚರಿಕೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಲವು ವಿಷಯಗಳ ಬಗ್ಗೆ ಸ್ವೀಕೃತವಾಗಿರುವ ದೂರು, ಆರೋಪಗಳ ಕುರಿತಂತೆ ತನಿಖೆ ನಡೆಸಲೆಂದು ಸರ್ಕಾರ ರಚಿಸಿದ್ದ ತಾಂತ್ರಿಕ ಸಮಿತಿ ಸದಸ್ಯರಾದ ಮೈಸೂರು ಜಿಲ್ಲಾ ನಗರಾಭಿವೃದ್ಧಿ ಕೋಶದ ಎಗ್ಸಿಕ್ಯೂಟಿವ್ ಇಂಜಿನಿಯರ್ ನರಸು ಕಳಂತ್ರೆ, ಶಿವಮೊಗ್ಗ ಮಹಾನಗರ ಪಾಲಿಕೆ ನಗರ ಯೋಜನಾಧಿಕಾರಿ ಬಿ.ಆರ್. ಕಲ್ಲಿನಾಥ, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕಿ ಎಂ.ಎಸ್. ಶಾಂತಲಾ ಹಾಗೂ ಸಮಿತಿ ಅಧ್ಯಕ್ಷರಾದ ಯೋಜನಾ ಹೆಚ್ಚುವರಿ ನಿರ್ದೇಶಕ ಟಿ.ವಿ. ಮುರಳಿ ತನಿಖೆ ಪೂರ್ಣಗೊಳಿಸಿ ಸರ್ಕಾರಕ್ಕೆ 7 ಪುಟಗಳ ಸಮಗ್ರ ವರದಿ ಸಲ್ಲಿಸಿದ್ದಾರೆ.

ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿದ ಪ್ರದೇಶಕ್ಕೆ ವಿನ್ಯಾಸ ನಕ್ಷೆ ತಯಾರಿಸಿ ಉದ್ಯಾನವನಕ್ಕೆ ಶೇ. 15, ನಾಗರಿಕ ಸೌಲಭ್ಯಕ್ಕೆ ಶೇ. 10ರಷ್ಟು ಪ್ರದೇಶ ಕಾಯ್ದಿರಿಸಿದ ನಂತರ ಡೀನೋಟಿಫೈ ಆದ ಮತ್ತು ಇನ್ನಿತರ ಕಾರಣಗಳಿಂದ ಕೈಬಿಡಲಾದ ಪ್ರದೇಶ ಹೊರತುಪಡಿಸಿ ಅಭಿವೃದ್ಧಿ ಯೋಜನಾವಾರು ವಿನ್ಯಾಸ ನಕ್ಷೆ ತಯಾರಿಸಿ ಮುಡಾದಿಂದ ಅನುಮೋದನೆ ಪಡೆಯದಿರುವುದು ತನಿಖೆ ವೇಳೆ ಕಂಡುಬಂದಿದೆ ಎಂದು ಸಮಿತಿಯು ತಿಳಿಸಿದೆ. ಕುಡಾ ಕಾಯ್ದೆಯಡಿ ಪ್ರಾಧಿಕಾರವು ಅಭಿವೃದ್ಧಿ ಯೋಜನೆ ಪ್ರದೇಶದ ಹೊರಗೆ ನಿಯಮಾನುಸಾರ ಭೂಸ್ವಾಧೀನಪಡಿಸಿಕೊಳ್ಳದೇ, ಸರ್ಕಾರದಿಂದ ಪೂರ್ವಾನುಮತಿಯನ್ನೂ ಪಡೆಯದೇ ಅಕ್ಕಪಕ್ಕದ ಜಮೀನುಗಳಲ್ಲಿ ಕಾಮಗಾರಿ ಕೈಗೊಂಡಿರುವುದಾಗಿ ತಾಂತ್ರಿಕ ಶಾಖೆ ವರದಿ ಆಧರಿಸಿ ನಿಯಮ ಬಾಹಿರವಾಗಿ ನಿವೇಶನ ಮಂಜೂರಾತಿ ಮಾಡಲಾಗಿದೆ ಎಂದು ಸಮಿತಿ ಅಭಿಪ್ರಾಯಿಸಿದೆ. ಅಭಿವೃದ್ಧಿಪಡಿಸಿದ ಹಳೇ ಬಡಾವಣೆಗಳಲ್ಲಿ ಭೂಸ್ವಾಧೀನಪಡಿಸಿಕೊಂಡು ನಿವೇಶನ ಹಂಚಿಕೆ ಮಾಡಿದ ಎಷ್ಟೋ ವರ್ಷಗಳ ನಂತರ ಭೂ ಪರಿಹಾರದ ಹಣ ನೀಡಿರುವ ಬಗ್ಗೆ ಮಾಹಿತಿ ಇಲ್ಲವೆಂದು ಟಿಪ್ಪಣಿಯಲ್ಲಿ ನಮೂದಿಸಿ ಬದಲಿ ನಿವೇಶನ ಮಂಜೂರಾತಿ ಮಾಡಲಾಗಿದೆ. ಮುಡಾ ವಿವಿಧ ಉದ್ದೇಶಗಳಿಗೆ ಬಳಸಿಕೊಂಡಿರುವ ಜಮೀನಿಗೆ ಬದಲಾಗಿ ಅಭಿವೃದ್ಧಿಪಡಿಸಿದ ಬಡಾವಣೆಯ ಬೆಲೆ ಬಾಳುವ ನಿವೇಶನಗಳನ್ನು ಕಾನೂನು ಬಾಹಿರವಾಗಿ ಶೇ. 50:50ರ ಅನುಪಾತದಲ್ಲಿ ಭೂ ಮಾಲೀಕರಿಗೆ ಮಂಜೂರು ಮಾಡಿರುವುದು ಕಂಡುಬಂದಿದೆ ಎಂದು ತಿಳಿಸಲಾಗಿದೆ. ಮಧ್ಯಂತರ, ಬಿಡಿ ನಿವೇಶನಗಳನ್ನು ಬದಲಿ ನಿವೇಶನಗಳನ್ನಾಗಿ ಹಂಚಿಕೆ ಮಾಡಲಾಗಿದೆ. ಅನ್ವಯಿಸದ ಹಳೇ ಬಡಾವಣೆಗಳಿಗೆ ಬದಲಾಗಿ ಇತ್ತೀಚಿನ ಬೆಲೆ ಬಾಳುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಸಾವಿರಾರು ನಿವೇಶನ ನೀಡುವ ಮೂಲಕ ಕೋಟ್ಯಾಂತರ ರೂ. ಅವ್ಯವಹಾರವಾಗಿ ರುವ ಶಂಕೆ ಇರುವುದರಿಂದ ಪರಿಶೀಲಿಸಿ ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ ಎಂದು ಸಮಿತಿಯು ವರದಿಯಲ್ಲಿ ಶಿಫಾರಸ್ಸು ಮಾಡಿದೆ.

ಮಹೇಶ್ ಜೋಶಿ ನೇತೃತ್ವದಲ್ಲೇ ಸಮ್ಮೇಳನ

ಆಯ್ಕೆಯಾಗಿ ಬಂದಿದ್ದ ಜಿಲ್ಲಾಧ್ಯಕ್ಷರಿಗಷ್ಟೇ ಸಮ್ಮೇಳನ ನಡೆಸುವ ಉಸ್ತುವಾರಿ ಇರುತ್ತದೆಯೇ ಹೊರತು ಅವರು ಆಯ್ಕೆ ಮಾಡಿದ ಪದಾಧಿಕಾರಿಗಳಿಗೆ ಸಮ್ಮೇಳನದ ಉಸ್ತುವಾರಿ ಕೊಡಲು ಸಾಧ್ಯವಿಲ್ಲ ಎಂದು ಈ ಹಿಂದೆಯೇ ಹೇಳಿದ್ದರು. ಆ ನಿಟ್ಟಿನಲ್ಲಿ ಯಾವುದೇ ಗೊಂದಲವಾಗಬಾರದೆಂದು ಉಸ್ತುವಾರಿಯನ್ನು ತಾವೇ ವಹಿಸಿಕೊಂಡಿದ್ದು, ಶೀಘ್ರದಲ್ಲೇ ನಿರ್ವಹಣೆ ಮತ್ತು ಸಲಹಾ ಸಮಿತಿಯನ್ನು ರಚಿಸಲಿದ್ದಾರೆ. ಸಮಿತಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಪ್ರೊ. ಬಿ. ಜಯಪ್ರಕಾಶ್‌ಗೌಡ, ಡಾ.ಎಚ್.ಎಸ್.ಮುದ್ದೇಗೌಡ, ಮೀರಾ ಶಿವಲಿಂಗಯ್ಯ ಸೇರಿದಂತೆ ಇನ್ನಿತರೆ ಕಸಾಪ ಮಾಜಿ ಅಧ್ಯಕ್ಷರುಗಳು, ಜಿಲ್ಲೆಯ ಹಿರಿಯ ಸಾಹಿತಿ, ಸಂಘಟಕರು ಹಾಗೂ ಸಾಹಿತ್ಯಾಸಕ್ತರನ್ನು ಸೇರಿಸಿಕೊಳ್ಳಲಾಗುತ್ತದೆ.

ನಿಧನ

ಕೆ.ಜಿ.ಕೊಪ್ಪಲು–ಜಯನಗರ ಚಾಮುಂಡೇಶ್ವರಿ ದೇವಸ್ಥಾನದ ಖಜಾಂಚಿ ಬುಡಂಗಪ್ಪನ ಕೃಷ್ಣಪ್ಪ



ಮೈಸೂರು, ಜೂ.25–ಮೈಸೂರು ಕೆ.ಜಿ.ಕೊಪ್ಪಲು–ಜಯನಗರ ನಿವಾಸಿ ಹಾಗೂ ಗ್ರಾಮದೇವತೆ ಚಾಮುಂಡೇಶ್ವರಿ ದೇವಸ್ಥಾನದ ಖಜಾಂಚಿ ಬುಡಂಗಪ್ಪನ ಕೃಷ್ಣಪ್ಪ (65) ಇಂದು ಬೆಳಗ್ಗೆ ನಿಧನರಾದರು.

ಇವರು ಪತ್ನಿ ಕಮಲಮ್ಮ, ಪುತ್ರರಾದ ವಿನೋದ್, ಸೋಮಶೇಖರ್ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಬೆಳಗ್ಗೆ 10 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಮಾಜಿ ಶಾಸಕರಾದ ಎಲ್.ನಾಗೇಂದ್ರ, ಒಕ್ಕಲಿಗರ ಸಂಘದ ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ ಇತರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಂಬೆಯಂಡ ಜಾಜಿ ಮೊನ್ನಮ್ಮ



ಮೈಸೂರಿನ ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿ ನಿವಾಸಿ ದಿವಂಗತ ಮಾಣಿ ಬೆಳ್ಳಿಯಪ್ಪ (ಹಾಲೇರಿ) ಅವರ ಪತ್ನಿ ಕಂಬೆಯಂಡ ಜಾಜಿ ಮೊನ್ನಮ್ಮ (76) ಸೋಮವಾರ ಸಂಜೆ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಶೋಧನಾ ಪ್ರಬಂಧಗಳಲ್ಲಿ ಹೆಚ್ಚಿನ ಗುಣಮಟ್ಟವಿರಲಿ

ಪಿಹೆಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಕುಲಪತಿ ಪ್ರೊ.ಲೋಕನಾಥ್ ಸಲಹೆ

ಮೈಸೂರು, ಜೂ.25(ಬಿಎಲ್‌ಯು)– ಪಿಹೆಚ್.ಡಿ ಸಂಶೋಧನಾ ವಿದ್ಯಾರ್ಥಿಗಳು ಗುಣಮಟ್ಟದ ಸಂಶೋಧನಾ ಪ್ರಬಂಧಗಳನ್ನು ಮಂಡಿಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆರಂಭವಾದ ಸಂಶೋಧನೆ ಮತ್ತು ಪ್ರಕಟಣಾ ನೀತಿ ಶಾಸ್ತ್ರ ಕುರಿತ ಆರು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಗುಣಮಟ್ಟದ ಸಂಶೋಧನಾ ಪ್ರಬಂಧ ಮಂಡನೆ ಬಗ್ಗೆ ಯುಜಿಸಿ ಕೂಡ ಹೆಚ್ಚಿನ ಒತ್ತು ನೀಡುತ್ತಿದೆ. ಇದರಲ್ಲಿ ಸುಧಾರಣೆ ತರುವಂತೆ ಸಲಹೆ ಕೂಡ ನೀಡಿದೆ ಎಂದರು.

ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನಾ ಪ್ರಬಂಧಗಳು ಮಂಡನೆಯಾಗುತ್ತಿವೆ. ಆದರೆ ಅವುಗಳಲ್ಲಿ ನಿರೀಕ್ಷಿತ ಗುಣಮಟ್ಟ ಇರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆರಂಭವಾದ ಸಂಶೋಧನೆ ಮತ್ತು ಪ್ರಕಟಣಾ ನೀತಿ ಶಾಸ್ತ್ರ ಕುರಿತ ಆರು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಅಮೇರಿಕಾದಲ್ಲಿ ಶೇಕಡ 100ಕ್ಕೆ ಶೇಕಡ 86ರಷ್ಟು ಪ್ರಬಂಧಗಳು ಗುಣಮಟ್ಟದಲ್ಲಿರುತ್ತವೆ. ಆದರೆ ಭಾರತದಲ್ಲಿ ಇದರ ಪ್ರಮಾಣ ಶೇಕಡ 14ರಷ್ಟಿದೆ. ಆದ ಕಾರಣ ಎಷ್ಟು ಸಂಖ್ಯೆಯ ಸಂಶೋಧನಾ ಪ್ರಬಂಧ ಮಂಡಿಸಿದ್ದೇವೆ ಎನ್ನುವುದಕ್ಕಿಂತ ಅವು ಎಷ್ಟರ ಮಟ್ಟಿಗೆ ಗುಣಮಟ್ಟ ಹೊಂದಿವೆ ಎಂಬುದು ಮುಖ್ಯ ಎಂದು ಪ್ರೊ.ಲೋಕನಾಥ್ ಅಭಿಪ್ರಾಯಪಟ್ಟರು.

ಸಂಶೋಧನಾ ವಿದ್ಯಾರ್ಥಿಗಳಲ್ಲಿ ಒಳ್ಳೆಯ ದೃಷ್ಟಿಕೋನ, ಗುರಿ, ಪರಿಶ್ರಮ, ವಿಚಾರಗಳ ಬಗ್ಗೆ ಸೂಕ್ಷ್ಮತೆ ಇರಬೇಕು. ಯೋಜನಾಬದ್ಧವಾಗಿ ಪ್ರತಿದಿನ ಅಧ್ಯಯನ ಮಾಡಬೇಕು. ನಾವು ಆಯ್ಕೆ ಮಾಡಿಕೊಂಡ ವಿಚಾರದ ಬಗ್ಗೆ ಸಮಗ್ರ ಅಧ್ಯಯನ ಮಾಡಬೇಕು. ಎಲ್ಲೋ ಇರುವ ವಿಚಾರಗಳನ್ನು ತಮ್ಮ ಪ್ರಬಂಧದಲ್ಲಿ ಜೋಡಿಸುವ ಪ್ರಯತ್ನ ಮಾಡಬಾರದು ಎಂದು ತಿಳಿ ಹೇಳಿದರು.

ಪ್ರಬಂಧದಲ್ಲಿ ಮಂಡಿಸುವ ವಿಚಾರಗಳು ಕರಾರುವಕ್ಕಾಗಿರಬೇಕು. ನಮ್ಮ ಅಧ್ಯಯನದಲ್ಲಿ ಬದ್ಧತೆ ಇರಬೇಕು. ಮಾರ್ಗದರ್ಶಕರ ಜೊತೆ ಸಮಾಲೋಚನೆ ಮಾಡಬೇಕು. ಸಂಶಯವಿರುವ ವಿಚಾರಗಳನ್ನು ತಿಳಿದುಕೊಂಡು ಪರಿಹಾರ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಡಿಜಿಟಲ್ ಟೆಕ್ನಾಲಜಿಯನ್ನು ಬಳಸಿಕೊಳ್ಳಬೇಕು. ಹಾಗೆಂದು ಪ್ರತಿಯೊಂದು ವಿಚಾರವನ್ನು ಗೂಗಲ್‌ನಲ್ಲಿ ಹುಡುಕಿ ತೆಗೆದು ಅಧ್ಯಯನ ಮಾಡಬಾರದು. ಗೂಗಲ್‌ನಲ್ಲಿರುವ ಕೆಲವು ವಿಚಾರಗಳನ್ನು ತಮ್ಮ ಪ್ರಬಂಧದಲ್ಲಿ ಉಲ್ಲೇಖಿಸಬೇಕು. ಆದರೆ ಗೂಗಲ್‌ನ್ನೇ ನೆಚ್ಚಿಕೊಂಡು ಅಧ್ಯಯನ ಮಾಡಬಾರದು ಎಂದು ಸಲಹೆಯಿತ್ತರು.

ನಾವು ಮಂಡಿಸುವ ಸಂಶೋಧನಾ ಪ್ರಬಂಧದಿಂದ ಸಮಾಜಕ್ಕೆ ಸಂದೇಶ ಸಿಗುವಂತಿರಬೇಕು. ಇದಕ್ಕಾಗಿ ಪರಿಪೂರ್ಣ ಅಧ್ಯಯನ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಶ್ರಮ ಪಡಬೇಕು ಎಂದು ಪ್ರೊ. ಲೋಕನಾಥ್ ಕಿವಿಮಾತು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎನ್. ಲಕ್ಷ್ಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಧ್ಯಾತ್ಮಿಕವಾಗಿ ಜಾಗೃತಗೊಂಡ ಮಹಿಳೆ ಮನೆಗೆ ಬೆಳಕು

ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾಜಿ ಅಭಿಮತ



ಜ್ಞಾನ ಸರೋವರ ರಿಟ್ರೀಟ್ ಸೆಂಟರಿನಲ್ಲಿ ಜ್ಞಾನದೇವಿ ಜಗದಾಂಬ ಸರಸ್ವತಿಯವರ 59ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಮೈಸೂರು,ಜೂ.25–ಬಹಳ ಸಂಕೀರ್ಣ ಮನಸ್ಥಿತಿಯಲ್ಲಿರುವ ಇಂದಿನ ಆಧುನಿಕ ಮಹಿಳೆಯ ವಿಕ್ಷಿಪ್ತ ಚಿಂತನೆಗಳಿಗೆ ಬ್ರೇಕ್ ಹಾಕಿ ಸಂತೃಪ್ತ ಜೀವನ ನಡೆಸಲು ಆಧ್ಯಾತ್ಮಿಕ ಜೀವನ ಶೈಲಿ ಮತ್ತು ಧ್ಯಾನವು ಸಹಕಾರಿಯಾಗುತ್ತದೆ ಎಂದು ಶಿರಸಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕರು ಹಾಗೂ ಉಪನ್ಯಾಸಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾಜಿ ತಿಳಿಸಿದರು.

ಮೈಸೂರಿನ ಜ್ಞಾನ ಸರೋವರ ರಿಟ್ರೀಟ್ ಸೆಂಟರಿನಲ್ಲಿ ಆಯೋಜಿಸಲಾಗಿದ್ದ ಜ್ಞಾನದೇವಿ ಜಗದಂಬಾ ಸರಸ್ವತಿಯವರ 59ನೇ ಪುಣ್ಯಸ್ಮರಣೆಯ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ವಿದ್ಯಾಭ್ಯಾಸವು ವ್ಯಕ್ತಿ ವಿಕಾಸಕ್ಕೆ ಉಪಯೋಗಿಯಾದರೂ ಅನ್ಯರ ಮನಸ್ಸನ್ನು ಅರ್ಥ ಮಾಡಿಕೊಂಡು ಸೂಕ್ತವಾಗಿ ಸ್ಪಂದಿಸಲು ರಾಜಯೋಗ ಶಿಕ್ಷಣದ ಅವಶ್ಯಕತೆ ಇದೆ. ಹೀಗಾಗಿ ಮನಸ್ಸನ್ನು ಜಾಗೃತಗೊಳಿಸಿದರೆ ಅಂತಹ ಮಹಿಳೆ ಮನೆಗೆ ಬೆಳಕಾಗಬಲ್ಲಳು ಎಂದು ಅಭಿಪ್ರಾಯಪಟ್ಟರು.

ಜಗದಂಬಾ ಸರಸ್ವತಿ ಮಮ್ಮಾರವರು 45 ನೇ ವಯಸ್ಸಿಗೆ ಅವ್ಯಕ್ತರಾದರೂ ತಮ್ಮ ದೃಢತೆ, ಏಕಾಗ್ರತೆ, ಗಂಭೀರತೆ, ಹಸನ್ಮುಖತೆ ಮುಂತಾದ ಶ್ರೇಷ್ಠ ಸದ್ಗುಣಗಳಿಂದ ಆಧ್ಯಾತ್ಮ ಕ್ಷೇತ್ರದಲ್ಲಿ ಎತ್ತರದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಭಾರತದ ಸಾವಿರಾರು ಕುಟುಂಬಗಳಿಗೆ ದಾರಿದೀವಿಗೆಯಾದರು ಎಂದು ರಾಜಯೋಗಿ ಬ್ರಹ್ಮಾಕುಮಾರ ರಂಗನಾಥ ಶಾಸ್ತ್ರೀಜೀ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ಈಶ್ವರೀಯ ವಿಶ್ವವಿದ್ಯಾಲಯಗಳ ಉಪ ವಿಭಾಗದ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಆಧ್ಯಾತ್ಮಿಕ ಪಥದಲ್ಲಿ ಜಗದಂಬಾ ಸರಸ್ವತೀಜೀ, ಅವರಂತಹ ಅಪರೂಪದ ಜ್ಞಾನ ನಕ್ಷತ್ರಗಳು ತಮ್ಮ ಅದ್ಭುತ ಜೀವನದಿಂದ ನಮ್ಮೆಲ್ಲರಿಗೂ ಪ್ರೇರಕ ಶಕ್ತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೌಂಟ್ ಅಬುವಿನ ರಾಜಯೋಗಿ ಬ್ರಹ್ಮಾಕುಮಾರ ಶಕ್ತಿರಾಜ್ ಸಿಂಗ್ ಠಾಕೂರ್ ರಾಜಯೋಗಿ ಬ್ರಹ್ಮಾಕುಮಾರ್ ಪ್ರಾಣೇಶ್ ಜೀ ಬಿಕೆ ರಾಮಚಂದ್ರ, ರಾಜಯೋಗಿನಿ ಬ್ರಹ್ಮಾಕುಮಾರಿ ಶಾರದಾಜೀ ಸೇರಿದಂತೆ ಮಂಡ್ಯ, ಮೈಸೂರು, ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಗಳ 200ಕ್ಕೂ ಹೆಚ್ಚು ರಾಜಯೋಗ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ನಿವಾಸಿಗಳ ಮನವಿಗೆ ಸ್ಪಂದಿಸಿದ ಬೋಗಾದಿ ಪಟ್ಟಣ ಪಂಚಾಯ್ತಿ



ಮೈಸೂರು ನಗರಕ್ಕೆ ಹೊಂದಿಕೊಂಡಿರುವ ಕೇರ್ಗಳ್ಳಿ ಗ್ರಾಮದ ರಿಷಬ್ ಸಿದ್ದಿ ಬಡಾವಣೆ ಪಕ್ಕದ ಕುಂಬಾರಕಟ್ಟೆ ಕೆರೆಯು ಸುತ್ತಮುತ್ತಲಿನ ಬಡಾವಣೆಗಳಿಂದ ಹರಿದು ಬರುವ ಕಲುಷಿತ ನೀರಿನಿಂದ ತುಂಬಿ ದುರ್ವಾಸನೆ ಬೀರುತ್ತಿತ್ತಲ್ಲದೆ, ರೋಗ–ರುಜಿನಗಳ ತಾಣವಾಗಿತ್ತು. ನಿವಾಸಿಗಳ ಮನವಿಗೆ ತಕ್ಷಣ ಸ್ಪಂದಿಸಿದ ಬೋಗಾದಿ ಪಟ್ಟಣ ಪಂಚಾಯ್ತಿ ಅಧಿಕಾರಿ ಬಸವರಾಜು ಮತ್ತು ಆರೋಗ್ಯಾಧಿಕಾರಿ ಪುನೀತ್ ಸ್ಥಳಕ್ಕೆ ಭೇಟಿ ನೀಡಿ, ಜೆಸಿಬಿ ಸಹಾಯದಿಂದ ಸರಾಗವಾಗಿ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಿ ನಿವಾಸಿಗಳ ಆತಂಕ ನಿವಾರಿಸಿದ್ದಾರೆ.

ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗೆ ಅರ್ಜಿ

ಮೈಸೂರು,ಜೂ.25–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿಯು ಭಾರತ ಸರ್ಕಾರದ ಎನ್‌ಡಿಎಲ್‌ಎಂನ ಸಹಭಾಗಿತ್ವದಲ್ಲಿ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ತರಬೇತಿಯಲ್ಲಿ ಪ್ರಶಿಕ್ಷಣಾರ್ಥಿಗಳು ಎಲ್‌ಕೆಜಿ, ಯುಕೆಜಿ, ಮಾಂಟೆಸರಿ ಹಾಗೂ ಅಂಗನವಾಡಿ ಶಿಕ್ಷಣದ ಕುರಿತಂತೆ ಮಕ್ಕಳ ಮಾನಸಿಕ ಬೆಳವಣಿಗೆ, ಪೌಷ್ಟಿಕತೆ, ಆಹಾರ, ಆಟೋಟಗಳ ಕುರಿತಂತೆ ಪ್ರಾಯೋಗಿಕ ತರಗತಿಗಳು, ಕೌಶಲ ತರಗತಿಗಳು ಹಾಗು ಸೈದ್ಧಾಂತಿಕ ತರಗತಿಗಳನ್ನು ಅಭ್ಯಸಿಸಲಿದ್ದಾರೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಹೊಂದಿರುವ 55ರ ವಯೋಮಾನದ ಆಸಕ್ತರು ಈ ತರಬೇತಿಯ ಫಲಾನುಭವಿಗಳಾಗಿರುತ್ತಾರೆ. ಪ್ರಶಿಕ್ಷಣ ಬಯಸುವ ಆಸಕ್ತರು ಅರ್ಜಿಗಳಿಗಾಗಿ 8310306882, 9964790442 ಸಂಪರ್ಕಿಸಬಹುದು.

ಸನಾತನ ಧರ್ಮದ ತಿರುಳನ್ನು ದರ್ಶನ ಮಾಡಿಸಿದ ವಿವೇಕಾನಂದ



ಮೈಸೂರಿನ ರಾಮಕೃಷ್ಣ ವೃತ್ತದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ನಡೆದ ನಾಲ್ಕನೆಯ ತಿಂಗಳ ತಿಳಿವು ಕಾರ್ಯಕ್ರಮವನ್ನು ಡಾ.ಲೋಕೇಶ್ ಉದ್ಘಾಟಿಸಿದರು. ಚಿತ್ರದಲ್ಲಿ ಅಧ್ಯಕ್ಷ ಡಿ.ಮಾದೇಗೌಡ, ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಪದಾಧಿಕಾರಿಗಳಾದ ರಶ್ಮಿ, ಪ್ರೊ.ಚಂದ್ರಶೇಖರ್, ಬಸಪ್ಪ, ಕೆಂಪಲಿಂಗರಾಜು, ಮತ್ತು ಗೋಪಿನಾಥ್ ಮತ್ತಿತರರು ಇದ್ದಾರೆ.

ಮೈಸೂರು, ಜೂ. 25– ಮೈಸೂರಿನ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಪ್ರತಿ ತಿಂಗಳ ಹುಣ್ಣಿಮೆಯಂದು ನಡೆಯುವ ನಾಲ್ಕನೆಯ ತಿಂಗಳ ತಿಳಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.


ಖ್ಯಾತ ವಿಮರ್ಶಕ ಡಾ.ಲೋಕೇಶ್ ಮಾತನಾಡುತ್ತ, ಆಧುನಿಕ ಭಾರತದ ನಿರ್ಮಾಪಕ ಶ್ರೀ ಸ್ವಾಮಿ ವಿವೇಕಾನಂದ ವಿಷಯ ಕುರಿತು ಉಪನ್ಯಾಸ ನೀಡಿ, ಭಾರತೀಯ ಸನಾತನ ಆಧ್ಯಾತ್ಮಿಕ ಸಂಸ್ಕೃತಿಯನ್ನು ಇಡೀ ಪ್ರಪಂಚಕ್ಕೆ ಪಸರಿಸಿದ ದಿವ್ಯ ಚೇತನ ಸ್ವಾಮಿ ವಿವೇಕಾನಂದ ಎಂದು ಅಭಿಪ್ರಾಯಪಟ್ಟರು.

ವೇದ ಉಪನಿಷತ್ತುಗಳಲ್ಲಿರುವ ನೈಜ ಆಧ್ಯಾತ್ಮಿಕ ಅಂಶಗಳನ್ನು ರಾಷ್ಟ್ರಕ್ಕಲ್ಲದೆ ಇಡೀ ಪ್ರಪಂಚಕ್ಕೆ ಪರಿಚಯಿಸಿದ ವಿವೇಕಾನಂದರು ಹಿಂದೂ ಧರ್ಮದ ಬಗ್ಗೆ ಇದ್ದ ತಪ್ಪು ಅಭಿಪ್ರಾಯಗಳನ್ನು ನಿವಾರಿಸಿ ಭಾರತೀಯ ಸನಾತನ ಧರ್ಮ ಹೇಗೆ ಸರ್ವಮಾನ್ಯ ಎಂಬ ಅಂಶವನ್ನು ಅನಾವರಣಗೊಳಿಸಿದ ಮಹಾಪುರುಷ ಎಂದು ಬಣ್ಣಿಸಿದರು. ಜೀವನದಲ್ಲಿ ಶಿಸ್ತು, ಸಾಧಿಸಬೇಕೆಂಬ ಛಲ ಮತ್ತು ಸಾಮಾಜಿಕ ಕಳಕಳಿ ಮತ್ತು ಭಾರತದ ಶ್ರೇಷ್ಠತೆಯನ್ನು ಯುವಜನಾಂಗಕ್ಕೆ ಮನವರಿಕೆ ಮಾಡಿಕೊಟ್ಟು ಯುವಜನತೆಯಲ್ಲಿ ಭವಿಷ್ಯ ಭಾರತದ ಕನಸು ಬಿತ್ತಿದ ಮಹಾಚೇತನ ಇವರು ಎಂದು ಉದಾಹರಣೆ ಸಹಿತ ವಿಮರ್ಶಕ ಡಾ.ಲೋಕೇಶ್ ವಿವರಿಸಿದರು.

ಪ್ರಪಂಚದ ಎಲ್ಲಾ ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿದ ವಿವೇಕಾನಂದರು ಹಿಂದೂ ಧರ್ಮದ ಆಧ್ಯಾತ್ಮಿಕತೆ, ಕ್ರೈಸ್ತ ಧರ್ಮದ ಉದಾರತೆ ಮತ್ತು ಮಾನವೀಯತೆ ಹಾಗೂ ಇಸ್ಲಾಂ ಧರ್ಮದ ದೈಹಿಕ ಒಗ್ಗಟ್ಟು ಅನುಕರಣೀಯ ಎಂಬುದನ್ನು ಇಡೀ ವಿಶ್ವಕ್ಕೆ ಸಾರಿ ಎಲ್ಲಾ ಧರ್ಮಗಳಲ್ಲಿರುವ ಆಧ್ಯಾತ್ಮವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ಬೋಧಿಸಿದ ಸರ್ವಧರ್ಮ ಪ್ರಿಯ ವಿವೇಕಾನಂದರು ಎಂದು ಬಣ್ಣಿಸಿದರು.

ಪ್ರಾರಂಭದಲ್ಲಿ ಪ್ರತಿಷ್ಠಾನದ ಉಪಾಧ್ಯಕ್ಷ ಪ್ರೊ.ಚಂದ್ರಶೇಖರ್ ಸ್ವಾಗತಿಸಿದರು. ಪದಾಧಿಕಾರಿ ಬಸವಣ್ಣ ವಂದಿಸಿದರು, ಗೋಪಿನಾಥ್ ಕಾರ್ಯಕ್ರಮ ನಿರೂಪಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಟಿ.ಮಾದೇಗೌಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಧ್ಯಕ್ಷ ಎಸ್.ಪಿ.ಯೋಗಣ್ಣ, ಖಜಾಂಚಿ ಬಸವಲಿಂಗಪ್ಪ ಕಾರ್ಯದರ್ಶಿ ಕೆಂಪಲಿಂಗರಾಜು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.06.2024 ಬುಧವಾರ, ಮಳೆ ನಕ್ಷತ್ರ: ಆರಿದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಧನಿಷ್ಠ ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಮರಿಮಲ್ಲಪ್ಪನವರ ಪ್ರೌಢಶಾಲೆ :** ವಿದ್ಯಾರ್ಥಿ ಸಂಘದ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಆಹ್ವಾನಿತರು : ನಿವೃತ್ತ ಪ್ರಾಂಶುಪಾಲ ಎಸ್. ಬಾಲಾಜಿ, ಸನ್ಮಾನಿತರು : ಶ್ರೀಮತಿ ಡಾ. ಬಿ. ಮಧು, ಉಪಸ್ಥಿತರು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ವಿನೋಬ ರಸ್ತೆ, ಬೆಳಗ್ಗೆ 9ಕ್ಕೆ.
- **ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈಸೂರು ಪ್ರಾದೇಶಿಕ ಕೇಂದ್ರ:** ರಾಜ್ಯ ಮಟ್ಟದ ಅಂತರ ಪುರುಷ ಮತ್ತು ಮಹಿಳಾ ಅಥ್ಲೆಟಿಕ್ ಕ್ರೀಡಾಕೂಟ, ಅಧ್ಯಕ್ಷತೆ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ, ಉದ್ಘಾಟನೆ: ಅಂತರರಾಷ್ಟ್ರೀಯ ಅಥ್ಲೀಟ್ ಮತ್ತು ಅರ್ಜುನ್ ಪ್ರಶಸ್ತಿ ವಿಜೇತರಾದ ಶ್ರೀಮತಿ ಅಶ್ವಿನಿ ನಾಚಪ್ಪ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 10ರಿಂದ.
- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ವಿಶೇಷ ಉಪನ್ಯಾಸ–5, ವಲಯ ಅರಣ್ಯಾಧಿಕಾರಿ ಮಧು ದೇವಯ್ಯ ಅವರಿಂದ ಅರಣ್ಯಾಧಾರಿತ ಕಾಯ್ದೆಗಳು ಮತ್ತು ಬುಡಕಟ್ಟು ಸಮುದಾಯಗಳು ಕುರಿತು ಉಪನ್ಯಾಸ, ಸ್ಥಳ: ಕಾಲೇಜು ಆವರಣ, ಊಟಿ ರಸ್ತೆ, ಬೆಳಗ್ಗೆ 11.30ಕ್ಕೆ.
- **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು:** ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧ ದಿನದ ಪ್ರಯುಕ್ತ ಅರಿವು ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಪೊಲೀಸ್ ಇನ್ಸ್‌ಪೆಕ್ಟರ್ ನಾಗೇಗೌಡ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಲಕ್ಕಪ್ಪ ಹೆಚ್.ಕುಕ್ಕಡಿ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ವಿ.ಡಿ. ಸುನೀತಾರಾಣಿ, ಸ್ಥಳ: ಶ್ರೀನಟರಾಜ ಸಭಾ ಭವನ, ಮಧ್ಯಾಹ್ನ 12ಕ್ಕೆ.
- **ಬಿ.ಎಲ್.ಸ್ವಾಮಿ ಸ್ವರಸಂಗಮ ಮೆಲೋಡಿಸ್ :** ಮಧುರಗಾನ, ಕನ್ನಡ ಸುಮಧುರ ಗೀತೆಗಳ ಮಿಲನ, ಸ್ಥಳ: ಪುರಭವನ, ಮಧ್ಯಾಹ್ನ 3ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಶುಭಶ್ರೀ ಪ್ರಸಾದ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬದುಕು ಬದಲಿಸಿದ ಶೋಧ'– ಬಾನುಲಿ ಸರಣಿ, ಪ್ರಸ್ತುತಿ– ಎನ್.ಎನ್. ಸುರೇಂದ್ರನಾಥ್ ಸಾತ್ವಿಕ್, 6.40 'ನಾನು ನ. ರತ್ನ' ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ. ನ. ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ–'ಲಲಿತಕಲೆಗಳ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರು ವಿಶ್ವವಿದ್ಯಾಲಯದ ಲಲಿತಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಅನಿತಾ ಬ್ರಾಗ್ಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್. ಭಜನ್ ಸಂಪೋರೆ–ಸಂತೂರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ : ಮಂಡ್ಯ ಜಿಲ್ಲೆ ಬೇವಿನಹಳ್ಳಿಯ ನಂಜಮ್ಮ ಮತ್ತು ಸಂಗಡಿಗರಿಂದ ಕೊಂತಮ್ಮನ ಹಾಡು, 1.20 ಭಾವಗೀತೆಗಳು: ಪಿ.ಎಸ್. ರಂಜನಿ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಅನುರಾಧಾ ಸುರೇಶ್ ಕೃಷ್ಣಮೂರ್ತಿ– ಹಾಡುಗಾರಿಕೆ, 4.00 ಮಹಿಳಾರಂಗ–ಹೀಗಿದೆ ನೋಡಿ ನಮ್ ಜೋಡಿ ರಂಗಭೂಮಿ ಕಲಾವಿದೆ ಹಾಗೂ ಶಿಕ್ಷಕಿ ಚಿತ್ರಾ ವೆಂಕಟರಾಜು ಜೊತೆಗೆ ಲೇಖಕ ಹಾಗೂ ಕಂಠದಾನ ಕಲಾವಿದರಾದ ವಿವೇಕ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ. ಎಸ್.ಪಿ.ವಿದ್ಯಾಕುಮಾರ್, 5.45 'ನಾನು ನ. ರತ್ನ' ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ. ನ. ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50 ಕೃಷಿರಂಗ–ಸಾವಯವ ಸಂಪದ, ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ, ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಮಾರ್ಗೋಪಾಯಗಳು. ಈ ಕುರಿತು ಮಂಡ್ಯದ ವಿ.ಸಿ. ಫಾರಂ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಆರ್. ಸುಮಾ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಕ್ಷಿತಿಜ Literary ಗುರು–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಶೋಭಾ ಗುರ್ಟಿ–ಗಾಯನ, 10.00 ಹಳ್ಳಿ ಹಾಡು. ಭಾಗವಹಿಸುವವರು: ಬನ್ನೂರು ಹೋಬಳಿಯ ಯಾಚೇನಹಳ್ಳಿಯ ನಾಗಮ್ಮ ಮತ್ತು ಸಂಗಡಿಗರು. ಪ್ರಸ್ತುತಿ: ಡಾ. ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಹೃದಯ ಭಾಗದ ಭವ್ಯ ವಿಶ್ವೇಶ್ವರಯ್ಯ ಭವನ ಅವ್ಯವಸ್ಥೆ ಆಗರ



ಬಹುತೇಕ ಮಳಿಗೆಗಳು ಖಾಲಿ

ದಿನೇ ದಿನೇ ಸೊರಗುತ್ತಿದ್ದರೂ ಪಾಲಿಕೆಗಿಲ್ಲ ತನ್ನ ಆಸ್ತಿ ಸುಸ್ಥಿತಿಯಲ್ಲಿಟ್ಟುಕೊಳ್ಳುವ ಕಾಳಜಿ













ಮೈಸೂರು, ಜೂ.25(ಪಿಎಂ)– ಮೈಸೂರಿನ ಹೃದಯಭಾಗದ ವ್ಯಾಪಾರ ವಹಿವಾಟಿನ ಕೇಂದ್ರವಾದರೂ ಆ ಇಡೀ ಕಟ್ಟಡದಲ್ಲಿ ಬಹುತೇಕ ಮಳಿಗೆಗಳು ಖಾಲಿ ಖಾಲಿ. ಗ್ರಾಹಕರಿಂದ ಗಿಜಿಗುಡುತ್ತಿದ್ದ ವಾತಾವರಣ ಈಗ ಇಲ್ಲಿಲ್ಲ. ಅಷ್ಟೇ ಅಲ್ಲ, ಈ ಕಟ್ಟಡದ ಹಿಂಭಾಗ ಗಬ್ಬೆದ್ದು ನಾರುವಂತಾಗಿದೆ. ಇದು ನಮ್ಮ ಮೈಸೂರು ಮಹಾನಗರ ಪಾಲಿಕೆ ಆಸ್ತಿ.

ಆ ಬೃಹತ್ ಕಟ್ಟಡದ ಅವ್ಯವಸ್ಥೆ ನೋಡಿದರೆ, ಮೈಸೂರಿನ ಹೃದಯಭಾಗದಲ್ಲಿರುವ ತನ್ನ ಆಸ್ತಿಯನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವಲ್ಲಿ ಮೈಸೂರು ಮಹಾನಗರ ಪಾಲಿಕೆ ವಿಫಲವಾಗಿದೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಹೌದು, ಮೈಸೂರಿನ ಕೆಆರ್ ವೃತ್ತದಲ್ಲಿರುವ ವಿಶ್ವೇಶ್ವರಯ್ಯ ಭವನ ಅವ್ಯವಸ್ಥೆಯ ಆಗರವಾಗಿದೆ. ಮಾತ್ರವಲ್ಲ, ನಿರ್ಲಕ್ಷ್ಯತೆ ಕಾರಣ ಹಾಗೂ ಸೂಕ್ತ ನಿರ್ವಹಣೆಯ ಕೊರತೆಯಿಂದ ದಿನೇ ದಿನೆ ಸೊರಗುತ್ತಿದೆ. ವರ್ಷದಿಂದ ವರ್ಷಕ್ಕೆ ಅವ್ಯವಸ್ಥೆ ದ್ವಿಗುಣವಾಗುತ್ತಿದ್ದರೂ ಪಾಲಿಕೆ ಮಾತ್ರ ಕಣ್ಮುಚ್ಚಿ ಕುಳಿತಿದೆ. ನೆಲ ಅಂತಸ್ತಿನಲ್ಲಿರುವ ಮಳಿಗೆಗಳಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದ್ದು, ಹೀಗಾಗಿ ಇವು ಮಾತ್ರ ಮಳಿಗೆಗಳ ಮಾಲೀಕರ ಕಳಕಳಿಯಿಂದಾಗಿ ಆಕರ್ಷಣೀಯವಾಗಿ ಕಾಣುತ್ತಿವೆ. ಉಳಿದೆಲ್ಲವೂ ಇಲ್ಲಿ ಅಧ್ವಾನವಾಗಿದ್ದು, ಇಡೀ ಭವನವೇ ಅಧೋಗತಿಗೆ ತಲುಪುವಂತಾಗಿದೆ. ಮೆಟ್ಟಿಲುಗಳನ್ನು ಹತ್ತಿ ಮೊದಲ ಅಂತಸ್ತಿನ ಹಿಂಭಾಗಕ್ಕೆ ಪ್ರವೇಶ ಪಡೆಯುತ್ತಿದ್ದಂತೆ ಅನೈರ್ಮಲ್ಯ ಕಣ್ಣಿಗೆ ರಾಚುತ್ತದೆ. ದುರ್ವಾಸನೆ ಮೂಗಿಗೆ ಬಡಿಯುತ್ತದೆ. ಇಲ್ಲಿರುವ ಸಾಲು ಸಾಲು ಮಳಿಗೆಗಳು ಖಾಲಿಯಾಗಿ ನಿರುಪಯುಕ್ತವಾಗಿದ್ದು, ಒಂದೊಂದು ಮಳಿಗೆಯಲ್ಲಿ ರಾಶಿ ರಾಶಿ ತರಾವರಿ ತ್ಯಾಜ್ಯ ಗುಡ್ಡೆ ಹಿಡಿದಿದೆ. ಪ್ಲಾಸ್ಟಿಕ್ ಬಾಟಲಿ, ಕವರ್ ಸೇರಿದಂತೆ ನಾನಾ ಬಗೆಯ ಪ್ಲಾಸ್ಟಿಕ್‌ಗಳು ಇಲ್ಲಿ ರಾಶಿ ರಾಶಿ ಬಿದ್ದಿದೆ. ಇಲಿ–ಹೆಗ್ಗಣಗಳ ತಾಣವಾಗಿ ಮಾರ್ಪಟಿದೆ. ಬ್ಯಾಂಕ್, ಜವಳಿ, ಎಲೆಕ್ಟ್ರಿಕಲ್, ಪುಸ್ತಕ ಮಳಿಗೆಗಳು ಸೇರಿದಂತೆ ವಿವಿಧ ಉತ್ಪನ್ನಗಳ ಅಂಗಡಿಗಳು ಇದ್ದ ಸ್ಥಳವೀಗ ಪಾಳು ಬಿದ್ದಂತೆ ಕಾಣುತ್ತಿದೆ.

> “ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ವಿಶ್ವೇಶ್ವರಯ್ಯ ಭವನವೂ ಸೇರಿದಂತೆ ಪಾಲಿಕೆ ಅಧೀನದ ಎಲ್ಲಾ ಪಾರಂಪರಿಕ ಕಟ್ಟಡಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಅಧಿಕಾರಿ ವರ್ಗ ಈ ಕೂಡಲೇ ಕ್ರಮ ವಹಿಸಬೇಕು. ಕಟ್ಟಡಗಳ ದುಸ್ಥಿತಿಗೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಕಟ್ಟಡಗಳ ಸ್ಥಿತಿಗತಿ ಸಂಬಂಧ ನಿಯಮಿತವಾಗಿ ಪರಿಶೀಲಿಸಿ ಕ್ರಮ ವಹಿಸಬೇಕು.
> – ಮಾಜಿ ಮೇಯರ್ ಶಿವಕುಮಾರ್

ಅಲ್ಲಲ್ಲಿ ಉದುರುತ್ತಿರುವ ಚಾವಣಿಯ ಕಾಂಕ್ರಿಟ್, ಗೋಡೆಗಳಿಂದ ಗೋಚರಿಸುತ್ತಿರುವ ಕಬ್ಬಿಣದ ಸಲಾಕೆಗಳು ಈ ಕಟ್ಟಡದ ದುಸ್ಥಿತಿಯನ್ನು ಕಟ್ಟಿಕೊಡುತ್ತಿವೆ. ಇಸ್ಪೀಟ್ ಕಾರ್ಡ್‌ಗಳು, ಮದ್ಯ–ಸಿಗರೇಟ್ ಪೊಟ್ಟಣಗಳು ಇಲ್ಲಿ ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತವೆ. ನೇತಾಡುತ್ತಿರುವ ವಿದ್ಯುತ್ ತಂತಿಗಳು ಒಂದೆಡೆಯಾದರೆ, ಗುಟ್ಕಾ ಜಗಿದು ಉಗುಳಿರುವುದು ಎಲ್ಲೆಲ್ಲಿಯೂ ಕಣ್ಣಿಗೆ ರಾಚುತ್ತದೆ.


ಜೊತೆಗೆ ಇಲ್ಲಿ ಗೋಡೆಗಳಿಗೆ ಮಾಡಿರುವ ಮೂತ್ರ ವಿಸರ್ಜನೆ ಗಬ್ಬು ವಾಸನೆ ಸೂಸುವ ಮೂಲಕ ವಾಕರಿಕೆ ತರಿಸುತ್ತದೆ. ಅಶುಚಿತ್ವದಿಂದ ಕೂಡಿದ ಚಾಪೆ, ದಿಂಬು, ಬೆಡ್‌ಶಿಟ್ ಸಹ ಬಿದ್ದಿರುವುದು ಇಲ್ಲಿ ಅನೈತಿಕ ಚಟುವಟಿಕೆ ನಡೆದಿರುವ ಶಂಕೆಯನ್ನೂ ಹುಟ್ಟಿಸುತ್ತದೆ. ಇಲ್ಲಿನ ಮೆಟ್ಟಿಲುಗಳಿರುವ ನೆಲಮಾಳಿಗೆಯಲ್ಲಿ ಕೊಳಚೆ ನೀರು ಶೇಖರಣೆಗೊಂಡಿದ್ದು, ದುರ್ವಾಸನೆ ಸೂಸುತ್ತಿರುವುದು ಮಾತ್ರವಲ್ಲದೆ, ಸೊಳ್ಳೆಗಳ ಹಿಂಡು ಇಲ್ಲಿ ಮನೆ ಮಾಡಿವೆ. ಈ ಭವನದ ಬಗ್ಗೆ ಈ ಪರಿಯ ನಿರ್ಲಕ್ಷ್ಯ ಏಕೆ ಎಂಬ ಪ್ರಶ್ನೆ ಕಾಡುತ್ತದೆ.

ಇಲ್ಲಿನ ಮಳಿಗೆಯೊಂದರ ಬಾಡಿಗೆದಾರ ಜೆ.ಚಂದ್ರಶೇಖರ್ ಪತ್ರಿಕೆಯೊಂದಿಗೆ ಮಾತನಾಡಿ, ಇಲ್ಲಿನ ಮೊದಲ ಅಂತಸ್ತಿನಲ್ಲಿ ನಮ್ಮ ಬುಕ್ ಹೌಸ್ ಇದೆ. ಕಳೆದ ಎರಡು ವರ್ಷಗಳಿಂದ ಭವನದಲ್ಲಿ ಸಮಸ್ಯೆಗಳ ಸರಮಾಲೆಯೇ ಇದೆ. ಕುಡುಕರ ಹಾವಳಿ ಹೆಚ್ಚಿತ್ತು, ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದವು. ರೋಲಿಂಗ್ ಷಟರ್ ಸರಿಪಡಿಸಿದ ಮೇಲೆ ನಿಯಂತ್ರಣಕ್ಕೆ ಬಂದಿವೆ. ಈ ಭವನದ ಆವರಣ ನೋಡಿದರೆ ಬೇಸರವಾಗುತ್ತದೆ. ಅಷ್ಟು ಅಶುಚಿತ್ವ ಇಲ್ಲಿ ತಾಂಡವವಾಡುತ್ತಿದೆ. ಗೋಡೆಗಳಲ್ಲಿ ಗಾರೆ ಉದುರುತ್ತಿದ್ದು, ಹೀಗೆಯೇ ಬಿಟ್ಟರೆ ಮುಂದೆ ಸಮಸ್ಯೆಯಾಗಲಿದೆ ಎಂದರು.

ಈ ಭವನದ ಎದುರಿನ ನಗರ ಬಸ್ ನಿಲ್ದಾಣದ ಕಟ್ಟಡವು ಇದಕ್ಕಿಂತ 20 ವರ್ಷ ಹಳೆಯದು. ಆದರೆ ಅದನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಇದನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ ದುಸ್ಥಿತಿಯಲ್ಲಿದೆ. ಅಧಿಕಾರಿಗಳು ಇತ್ತ ಗಮನಹರಿಸದೇ ಈ ಪರಿಸ್ಥಿತಿ ಉದ್ಭವಿಸಿದೆ. ಮೂಲಸೌಲಭ್ಯ ಕಲ್ಪಿಸದ ಹಿನ್ನೆಲೆಯಲ್ಲಿ ಅನೇಕ ಮಳಿಗೆದಾರರು ಖಾಲಿ ಮಾಡಿದ್ದಾರೆ ಎಂದು ತಿಳಿಸಿದರು. ಇಲ್ಲಿನ ಮಳಿಗೆಗಳ ನೌಕರರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಬಾಡಿಗೆ ಪರಿಷ್ಕರಣೆ ಸಂಬಂಧ ಪಾಲಿಕೆ ನೋಟಿಸ್ ಕೊಟ್ಟ ಬಳಿಕ ಕೆಲವು ಮಳಿಗೆದಾರರು ಮಳಿಗೆಗಳನ್ನು ಖಾಲಿ ಮಾಡಿದರೆ, ಇನ್ನು ಕೆಲವರು ಪಾರ್ಕಿಂಗ್ ಸೇರಿದಂತೆ ಮೂಲಸೌಲಭ್ಯ ಇಲ್ಲವೆಂದು ಖಾಲಿ ಮಾಡಿದ್ದಾರೆ. ರೋಲಿಂಗ್ ಷಟರ್ ಇಲ್ಲದಿದ್ದಾಗ ಕೆಲವು ಪುಂಡರು ದಾಳಿ ಇಡುತ್ತಿದ್ದರು. ಇಸ್ಪೀಟ್ ಆಡುತ್ತಿದ್ದ ಪುಂಡರು ಇಲ್ಲಿನ ಕಿಟಕಿ ಮತ್ತು ಬಾಗಿಲುಗಳ ಗಾಜುಗಳನ್ನು ಒಡೆದಿದ್ದಾರೆ. ರೋಲಿಂಗ್ ಷಟರ್ ಸರಿ ಮಾಡಿಸಿದ ಬಳಿಕ ಎಲ್ಲವೂ ನಿಯಂತ್ರಣಕ್ಕೆ ಬಂದಿದೆ. ಎಲ್ಲವನ್ನು ಸರಿಪಡಿಸಿದರೆ ಭವನ ಆವರಣದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಲಿದೆ. ಕಟ್ಟಡ ಸುಭದ್ರವಾಗಿದ್ದು, ಈಗಲಾದರೂ ಈ ಭವನವನ್ನು ಸುಸ್ಥಿತಿಯಲ್ಲಿಡಲು ಪಾಲಿಕೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಪತ್ರಿಕೆಯೊಂದಿಗೆ ಮಾತನಾಡಿದ ಮಾಜಿ ಮೇಯರ್ ಶಿವಕುಮಾರ್, ವಿಶ್ವೇಶ್ವರಯ್ಯ ಭವನದಲ್ಲಿ ಹೆಚ್ಚಿನ ಬಾಡಿಗೆದಾರರು ಖಾಲಿ ಮಾಡಲು ಮೂಲ ಸೌಲಭ್ಯಗಳ ಕೊರತೆ ಕಾರಣ ಇರಬೇಕು. ಬಾಡಿಗೆ ಪರಿಷ್ಕರಣೆ ಅನುಷ್ಠಾನ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಮಳಿಗೆ ಖಾಲಿ ಮಾಡಲು ಬಾಡಿಗೆ ವಿಚಾರ ಕಾರಣ ಇರಲಿಕ್ಕಿಲ್ಲ ಎಂದು ತಿಳಿಸಿದರು.

ಬಾಡಿಗೆ ಪರಿಷ್ಕರಣೆ ಸಂಬಂಧ ಸರ್ಕಾರ ಮಾರ್ಗಸೂಚಿ ನೀಡಿದೆ. ಪಾಲಿಕೆ ವತಿಯಿಂದ ಅಧಿಕಾರಿಗಳು ಅನುಷ್ಠಾನಗೊಳಿಸಬೇಕು. ಆದರೆ ಕೆಲವು ಬಾಡಿಗೆದಾರರು ನೋಟಿಸ್ ಕೊಟ್ಟ ಹಿನ್ನೆಲೆಯಲ್ಲಿ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ವಿಶ್ವೇಶ್ವರಯ್ಯ ಭವನ, ದೇವರಾಜ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ಪಾಲಿಕೆಯ ಸುಮಾರು 2 ಸಾವಿರ ವಾಣಿಜ್ಯ ಮಳಿಗೆಗಳು ಇವೆ. ಆದರೆ ಇವುಗಳಿಂದ ಬರುತ್ತಿರುವ ಬಾಡಿಗೆಯ ಆದಾಯದ ಪ್ರಮಾಣ ತೀರ ಕಡಿಮೆ. ಬಾಡಿಗೆ ಪರಿಷ್ಕರಣೆ ಅಗತ್ಯವಿದ್ದು, ನಗರ ಪಾಲಿಕೆಗೆ ಇದೂ ಒಂದು ಆದಾಯದ ಮೂಲ ಎಂದು ಹೇಳಿದರು.

> “1959ರ ಏ.14ರಂದು ಅಂದಿನ ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಜಯಚಾಮರಾಜ ಒಡೆಯರ್ ವಿಶ್ವೇಶ್ವರಯ್ಯ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. 1964ರ ಆ.15ರಂದು ಅಂದಿನ ಮೈಸೂರು ರಾಜ್ಯದ ನಗರಾಡಳಿತ ಸಚಿವ ಕೆ.ಪುಟ್ಟಸ್ವಾಮಿ ಅವರು ವಿಶ್ವೇಶ್ವರಯ್ಯ ಭವನದ ಉದ್ಘಾಟನೆ ನೆರವೇರಿಸಿದ್ದರು.



ನಕ್ಕರೆ ಅದೇ ಸ್ವರ್ಗ

ಗಂಡ–ಹೆಂಡತಿ ಒಂದು ಸಿನಿಮಾ ನೋಡಿಕೊಂಡು ಬಂದಾಗ

ಹೆಂಡತಿ : ಒಳ್ಳೇ ಸಿನಿಮಾಗೆ ಕರ್ಕೊಂಡು ಹೋಗಿದ್ರಿ...
ನಕ್ಕೂ ನಕ್ಕೂ ನಂದು ಅರ್ಧ ಜೀವಾನೇ ಹೋಯ್ತು...

ಗಂಡ : ಬೇಕಾದ್ರೆ ಇನ್ನೊಂದ್ಸಲ ನೋಡಾನ ನಡಿ!!

ಮೈಸೂರು ಮಿತ್ರ

ಬುಧವಾರ, 26 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಬೆಲೆ ಇಲ್ಲದ ಜಾಗದಲ್ಲಿ ನೆಲೆ ಕಾಣಬೇಡಿ. ಪ್ರೀತಿ ಇಲ್ಲದ ಜಾಗದಲ್ಲಿ ಆಶ್ರಯ ಕೇಳಬೇಡಿ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಯಿಯನ್ನು ಹೊಡೆಯಬಾರದು, ಗುಬ್ಬಿಯ ಗೂಡನ್ನು ತೆಗೆಯಬಾರದು.

ನಿಮ್ಮ ಪತ್ರಗಳು

ತುರ್ತು ಪರಿಸ್ಥಿತಿಗೆ 49! ಕರಾಳ ನೆನಪು

ಮಾನ್ಯರೆ,

ಇಂದಿನ ತಲೆಮಾರಿನ ಅದೆಷ್ಟು ಜನರಿಗೆ ನೆನಪಿದೆಯೋ ಗೊತ್ತಿಲ್ಲ. ಆಗಿನ್ನೂ ನನಗೆ 11 ವರ್ಷ. 1975ರ ಜೂನ್ 25ರ ಮಧ್ಯರಾತ್ರಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಕರಾಳ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದರು. ನೆನಪಿರಬೇಕು ನಮಗೆ ಸ್ವಾತಂತ್ರ್ಯ ಬಂದದ್ದು ಮಧ್ಯರಾತ್ರಿಯಲ್ಲೇ! ನಮ್ಮ ಮೇಲೆ ಜಿಎಸ್‌ಟಿ ಸವಾರಿ ಆರಂಭವಾಗಿದ್ದು ಕೂಡ ಮಧ್ಯರಾತ್ರಿಯಲ್ಲೇ! ಆದರೆ ನೋಟು ಅಮಾನ್ಯೀಕರಣ ಆರಂಭವಾದದ್ದು ಮಾತ್ರ ರಾತ್ರಿ 8 ಗಂಟೆಗೆ!

ಮೊದಲೆರಡು ನಮಗೆ ಸಂಬಂಧವಿಲ್ಲವೆಂದು ನಿದ್ದೆ ಹೋದವರಿದ್ದರೂ, ಮೂರನೆಯದು ಮಾತ್ರ ಮಧ್ಯರಾತ್ರಿ ಕಳೆದರೂ ಯಾರೂ, ಮಲಗದಂತೆ ಮಾಡಿತ್ತು!!.

ತುರ್ತು ಪರಿಸ್ಥಿತಿಯು ಇದೇ ಜೂನ್ 25ಕ್ಕೆ 49ನೇ ವರ್ಷಕ್ಕೆ ಕಾಲಿಡುತ್ತಿದೆ. ಅಂದು ಇಂದಿನ ಟಿವಿ, ಮೊಬೈಲ್, ಇಂಟರ್‌ನೆಟ್, ಗೂಗಲ್ ಯಾವುದೂ ಇರಲಿಲ್ಲ. ತಕ್ಷಣದ ಸುದ್ದಿ ತಿಳಿಯಲು ಅಂದಿನ ಸರ್ಕಾರಿ ನಿಯಂತ್ರಿತ ಆಕಾಶವಾಣಿ ಹಾಗೂ ನಿಖರ ಸುದ್ದಿಗಾಗಿ ಅಂದಿನ ದಿನಪತ್ರಿಕೆಗಳನ್ನೇ ಅವಲಂಬಿಸಬೇಕಾಗಿತ್ತು. ಬೆಳಗೆದ್ದು 7.35ಕ್ಕೆ ದೆಹಲಿ ಕೇಂದ್ರದಿಂದ ಪ್ರಸಾರವಾಗುತ್ತಿದ್ದ ಕನ್ನಡ ವಾರ್ತೆಗಳನ್ನು ಬೆಂಗಳೂರು ಆಕಾಶವಾಣಿ ಭಿತ್ತರಿಸಿದಾಗಲೇ ತಿಳಿದದ್ದು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಿದೆ ಎಂದು!

ಜಯಪ್ರಕಾಶ್ ನಾರಾಯಣ್, ಎಲ್.ಕೆ.ಅಡ್ವಾಣಿ ಸೇರಿದಂತೆ ಸಾಲು ಸಾಲು ವಿರೋಧಿ ನಾಯಕರ ಬಂಧನ, ಪತ್ರಿಕಾ ಸೆನ್ಸಾರ್, ಅತ್ತ ರಾಜಕೀಯ ವಲಯದಲ್ಲಿ ನಡೆದರೆ ಇತ್ತ ಜಮೀನುದಾರರ ಮನೆಗಳಲ್ಲಿ ಕೆಲಸಕ್ಕಿದ್ದ ಜೀತದಾಳುಗಳೆಲ್ಲ ಊರಿಂದಲೇ ನಾಪತ್ತೆಯಾದರು. ಗಿರವಿ ಅಂಗಡಿಗಳಲ್ಲಿ ಇಟ್ಟಿದ್ದ ಒಡವೆಗಳನ್ನು ಪೊಲೀಸರೆ ಮುಂದೆ ನಿಂತು ಬಿಡಿಸಿ ಕೊಟ್ಟದ್ದು (ಕೊಟ್ಟವ ಕೋಡಂಗಿ ಇಸಕೊಂಡವ ಈರಭದ್ರ!) ಕೆಲಸಗಾರರು ಇಲ್ಲದೆ ಮನೆ ಯಜಮಾನ ಕೊಟ್ಟಿಗೆ ಕಸ ಗುಡಿಸುವಂತೆ ಮಾಡಿತ್ತು.

ಆದರೆ 1977ರ ಲೋಕಸಭಾ ಚುನಾವಣೆಯಲ್ಲಿ ಇಡೀ ದೇಶದ ಜನರು (ಕರ್ನಾಟಕ ಹೊರತುಪಡಿಸಿ) ಅಂತಹ ಮಹಾನ್ ನಾಯಕಿ ಇಂದಿರಾ ಗಾಂಧಿಯವರನ್ನೇ ಹೀನಾಯವಾಗಿ ಸೋಲಿಸಿ ದೇಶದ ಪ್ರಥಮ ಕಾಂಗ್ರೆಸ್ಸೇತರ ಜನತಾ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದದ್ದು ಮತ್ತೊಂದು ಇತಿಹಾಸ. ದೇಶದ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮವೇ ಸರಿ. ಯಾರು ಏನೇ ಹೇಳಲಿ ಇದೀಗ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶ ಕೂಡ ಅದಕ್ಕೆ ತೀರ ಹತ್ತಿರವಾಗಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸಂತೇಬಾಚಹಳ್ಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲೂಕಿನ ಸಂತೇಬಾಚಹಳ್ಳಿ ಗ್ರಾಮವು ಹೋಬಳಿ ಕೇಂದ್ರವಾಗಿದ್ದು, ಸುತ್ತಮುತ್ತಲ 30 ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿದೆ. ಅದೂ ಕೂಡ ಪ್ರಮುಖವಾದ ಮಂಡ್ಯ–ಹಾಸನ ಗಡಿ ಪ್ರದೇಶದಲ್ಲಿದೆ. ಸಂತೇಬಾಚಹಳ್ಳಿಯಿಂದ ಮೈಸೂರು ಮತ್ತು ಮಂಡ್ಯಕ್ಕೆ ನೇರ ಬಸ್ ಸೌಲಭ್ಯ ಇಲ್ಲದೆ ಹೋಬಳಿಯ ಹಾಗೂ ಸುತ್ತಮುತ್ತಲ ತಾಲೂಕಿನ ಹಳ್ಳಿಗಳ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ದಿನನಿತ್ಯ ಕೋರ್ಟು ಕಚೇರಿ ಕೆಲಸಗಳಿಗೆ ಮಂಡ್ಯಕ್ಕೆ, ಹಾಗೂ ವ್ಯಾಪಾರ ವ್ಯವಹಾರಕ್ಕೆ ಮೈಸೂರಿಗೆ ಹೋಗಿ ಬರಲು ನೇರ ಬಸ್ ಸೌಲಭ್ಯ ಇಲ್ಲದೆ ಬಹಳ ಅನಾನುಕೂಲವಾಗಿದೆ.

ಸಂತೇಬಾಚಹಳ್ಳಿಯು ಮೈಸೂರಿನಿಂದ 70 ಕಿ.ಮೀ. ದೂರದಲ್ಲಿದೆ. ಜಿಲ್ಲಾ ಕೇಂದ್ರವಾದ ಮಂಡ್ಯದಿಂದ ಮೇಲುಕೋಟೆ ಮೇಲೆ 56 ಕಿ.ಮೀ. ದೂರ, ನಾಗಮಂಗಲದ ಮೇಲೆ 65 ಕಿ.ಮೀ. ದೂರದಲ್ಲಿದೆ. ಬಸ್‌ಗಳ ರಾಷ್ಟ್ರೀಕರಣಕ್ಕೆ ಮೊದಲು ಜನಸಂಚಾರ ಬಹಳ ಕಡಿಮೆ ಇದ್ದ ಕಾಲದಲ್ಲಿಯೇ ಸಂತೇಬಾಚಹಳ್ಳಿಯಿಂದ ಮೈಸೂರಿಗೆ 5 ಖಾಸಗಿ ಬಸ್‌ಗಳು, ಮಂಡ್ಯಕ್ಕೆ 5 ಖಾಸಗಿ ಬಸ್‌ಗಳೂ ಸಂಚರಿಸುತ್ತಿದ್ದವು. ರಾಷ್ಟ್ರೀಕರಣದ ನಂತರ ನೆಪಮಾತ್ರಕ್ಕೆ ಒಂದೆರಡು ಬಸ್‌ಗಳನ್ನು ಓಡಿಸಲಾಯಿತು. ಹಲವಾರು ವರ್ಷಗಳಿಂದ ಅದನ್ನೂ ಕೂಡಾ ನಿಲ್ಲಿಸಲಾಗಿದೆ.

ಮಂಡ್ಯಕ್ಕೆ ಹೋಗಬೇಕಾದರೆ ನಾಗಮಂಗಲಕ್ಕೆ ಹೋಗಿ, ಮೈಸೂರಿಗೆ ಹೋಗಬೇಕಾದರೆ ಕೃಷ್ಣರಾಜಪೇಟೆಗೆ ಹೋಗಿ ಬಸ್‌ಗಳನ್ನು ಬದಲಾಯಿಸಿ ಹೋಗಬೇಕಾಗಿದೆ. ಅಲ್ಲಿಯೂ ಸಕಾಲಕ್ಕೆ ಬಸ್‌ಗಳು ಸಿಗದೇ ಪರದಾಡಬೇಕಾಗಿದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಈ ಅವ್ಯವಸ್ಥೆಯೇ ಅರ್ಥವಾಗುತ್ತಿಲ್ಲ. ಈಚೆಗೆ ಜನಸಂಚಾರ ಜಾಸ್ತಿಯಾಗಿರುವ ಈ ವರ್ಷಗಳಲ್ಲಿಯೂ ಕೂಡಾ ಪ್ರಮುಖವಾದ ಹೋಬಳಿ ಕೇಂದ್ರಕ್ಕೆ ಒಂದೇ ಒಂದು ನೇರ ಬಸ್ ಸೌಲಭ್ಯ ಇಲ್ಲದಂತೆ ಮಾಡಲಾಗಿದೆ. ದಯಮಾಡಿ ಸಂತೇಬಾಚಹಳ್ಳಿಯಿಂದ ಮಂಡ್ಯಕ್ಕೆ ಮೇಲುಕೋಟೆ ಮೇಲೆ ಮತ್ತು ಮೈಸೂರಿಗೆ ಕೃಷ್ಣರಾಜಪೇಟೆ ಮೇಲೆ ಬೆಳಗ್ಗೆ 6 ಗಂಟೆ, 9 ಗಂಟೆ, 11 ಗಂಟೆಗೆ ಮೂರು ಬಸ್‌ಗಳನ್ನು ಓಡಿಸುವುದರ ಮೂಲಕ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕು. ಅದೇ ರೀತಿ ಮಂಡ್ಯ ಮತ್ತು ಮೈಸೂರಿನಿಂದ ಮಧ್ಯಾಹ್ನ 2 ಗಂಟೆ, ಸಂಜೆ 4 ಗಂಟೆ, 6 ಗಂಟೆಗೆ ಮೈಸೂರಿನಿಂದ ಮೂರು ಬಸ್‌ಗಳನ್ನೂ ಓಡಿಸುವುದರ ಮೂಲಕ ಸಂತೇಬಾಚಹಳ್ಳಿ ಹೋಬಳಿಯ ಹಾಗೂ ಸುತ್ತಮುತ್ತಲ ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ ತಾಲೂಕಿನ ಹಳ್ಳಿಗಳ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಎಸ್. ನಂಜುಂಡಸ್ವಾಮಿ, ಸಂತೇಬಾಚಹಳ್ಳಿ, ಕೆ.ಆರ್. ಪೇಟೆ ತಾ.

ಮತ್ತೊಮ್ಮೆ ಪರೀಕ್ಷೆ ನಡೆಯಲಿ

ಮಾನ್ಯರೆ,

ಇತ್ತೀಚೆಗೆ ಎನ್‌ಟಿಎಯ ಪರೀಕ್ಷಾ ಅವಾಂತರಗಳು ಒಂದಲ್ಲ ಒಂದು ರೀತಿ ಸದ್ದು ಮಾಡುತ್ತಿವೆ. ನೆಟ್ ಪರೀಕ್ಷೆ ಆದ ಮಾರನೇ ದಿನವೇ ಪರೀಕ್ಷೆ ರದ್ದುಗೊಳಿಸಿದ್ದು, ಪ್ರಶ್ನೆ ಪತ್ರಿಕೆ ಲೀಕ್ ಭೀತಿಯಿಂದ ನೀಟ್ ಪಿಜಿ ಪರೀಕ್ಷೆಯನ್ನು ಪರೀಕ್ಷಾ ಹಿಂದಿನ ದಿನವೇ ಮುಂದೂಡಿದ್ದು, ಇವೆಲ್ಲಕ್ಕಿಂತ ಮುಖ್ಯವಾಗಿ ಯುಜಿ ನೀಟ್ 2024ರ ಪ್ರಶ್ನೆ ಪತ್ರಿಕೆ ಪೇಪರ್ ಲೀಕ್ ಪ್ರಕರಣ ಹಾಗೂ ಮೂರು ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ನೀಡಿ, ಅವರಿಗೆ ಪುನಃ ಪರೀಕ್ಷೆ ನಡೆಸಿ ಮುಜುಗರಕ್ಕೆ ಒಳಗಾಗಿದೆ.

2024ರ ಯುಜಿ ನೀಟ್ ಪ್ರಶ್ನೆ ಪತ್ರಿಕೆಯು ಅಷ್ಟೊಂದು ಸುಲಭವಾಗಿ ಇಲ್ಲದಿದ್ದರೂ, 720ಕ್ಕೆ 720 ಅಂಕ ಪಡೆದವರು ಕರ್ನಾಟಕದ ಮೂವರು ಸೇರಿದಂತೆ ಒಟ್ಟು 67 ಮಂದಿ ಇರುವುದು ಸೋಜಿಗದ ಸಂಗತಿಯಾಗಿದೆ. ಹರಿಯಾಣದ ಒಂದೇ ಪರೀಕ್ಷಾ ಕೇಂದ್ರದ ಏಳು ಮಂದಿ ಪೂರ್ಣ ಅಂಕ ಪಡೆದಿರುವುದು ಪೇಪರ್ ಲೀಕ್ ಪ್ರಕರಣಕ್ಕೆ ಪುಷ್ಟಿ ನೀಡಿದೆ. ಹಾಗೆಯೇ ಕರ್ನಾಟಕದ ಕೆಲವು ವಿದ್ಯಾರ್ಥಿಗಳು ಬೇರೆ ರಾಜ್ಯದ ಸ್ಕ್ಯಾಮ್ ಸೆಂಟರ್‌ಗಳಲ್ಲಿ ಪರೀಕ್ಷೆ ಬರೆದಿರುವುದು ಬೆಳಕಿಗೆ ಬಂದಿದೆ.

ಇವೆಲ್ಲಾ ಹಗರಣಗಳ ವಿರುದ್ಧ ದೇಶಾದ್ಯಂತ ವಿದ್ಯಾರ್ಥಿ ಸಂಘಟನೆಗಳು ಸಿಡಿದೆದ್ದಿದ್ದು, ದೇಶವ್ಯಾಪಿ ಪ್ರತಿಭಟನೆ ಕಾವು ಹೆಚ್ಚಾಗುತ್ತಿದೆ. ಹಲವು ರಾಜ್ಯಗಳ ಹೈಕೋರ್ಟ್‌ನಲ್ಲಿ ಈ ಪ್ರಕರಣಗಳು ದಾಖಲಾಗಿವೆ. ಸದ್ಯ ಸುಪ್ರೀಂ ಕೋರ್ಟ್‌ನಲ್ಲಿ ಈ ಎಲ್ಲಾ ವಿಚಾರಣೆಗಳು ನಡೆಯುತ್ತಿವೆ. ಜುಲೈ 8ರಂದು ಈ ಪ್ರಕರಣದ ತೀರ್ಪು ಹೊರಬೀಳಲಿದೆ. ಮೇಲ್ನೋಟಕ್ಕೆ ಯುಜಿ ನೀಟ್ 2024ರ ಪರೀಕ್ಷೆಯಲ್ಲಿ ಗೋಲ್‌ಮಾಲ್ ನಡೆದಿದ್ದು, ದೇಶಾದ್ಯಂತ ಇದರಲ್ಲಿ ಪ್ರಭಾವಿ ಕೋಚಿಂಗ್ ಮಾಫಿಯಾ, ರಾಜಕಾರಣ ಮೂಗು ತೂರಿಸಿದೆ ಎಂಬುವುದನ್ನು ಅಲ್ಲಗಳೆಯುವಂತಿಲ್ಲ. ಇವುಗಳಿಂದ ಎನ್‌ಟಿಎಯು ತಡವಾಗಿ ಎಚ್ಚೆತ್ತುಕೊಂಡಿದ್ದು, ತನ್ನ ಡಿಜಿಯನ್ನು ಬದಲಾಯಿಸಿದೆ. ಆದ್ದರಿಂದ ತಡವಾದರೂ ಸರಿಯೇ ಮತ್ತೊಮ್ಮೆ ನಿಷ್ಪಕ್ಷಪಾತ ಪರೀಕ್ಷೆ ನಡೆಸಿ, ವಿದ್ಯಾರ್ಥಿಗಳಿಗೆ ನ್ಯಾಯ ನೀಡಬೇಕಿದೆ.– **ದೇವರಹಳ್ಳಿ ಲೋಕೇಶ್, ಪಾಂಡವಪುರ.**



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಗವದ್ಗೀತೆಯಲ್ಲಿ ಯೋಗ

**ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ॥**

ಶ್ರೀ ಕೃಷ್ಣನನ್ನು ಭಗವದ್ಗೀತೆಯು ಯೋಗೇಶ್ವರನೆಂದು ಕರೆದಿದೆ. ಭಗವದ್ಗೀತೆಯ ಉದ್ದೇಶ ಕರ್ತವ್ಯ ವಿಮುಖನಾಗಿದ್ದ ಅರ್ಜುನನನ್ನು ಕರ್ತವ್ಯದಲ್ಲಿ ತೊಡಗುವಂತೆ ಮಾಡುವುದಾಗಿತ್ತು. ಆ ಕೆಲಸಕ್ಕೆ ಎರಡನೆಯ ಅಧ್ಯಾಯದಲ್ಲಿ ಬರುವ ಕೆಲವು ಶ್ಲೋಕಗಳೇ ಸಾಕಾಗಿದ್ದವು. ಉಳಿದ ಹದಿನಾರು ಅಧ್ಯಾಯಗಳ ನೂರಾರು ಶ್ಲೋಕಗಳ ಅವಶ್ಯಕತೆಯೇ ಇರಲಿಲ್ಲ. ಅಷ್ಟೊಂದು ಅಧ್ಯಾತ್ಮಿಕ ತತ್ತ್ವಗಳನ್ನು ಅರ್ಜುನನಿಗೆ ತಿಳಿಸುವ ಉದ್ದೇಶ ಜಗತ್ತಿನ ಸಮಸ್ತ ಜನರಿಗೂ ಯೋಗದ ರಹಸ್ಯವನ್ನು ಬೋಧಿಸುವುದೇ ಆಗಿತ್ತು. ಭಗವದ್ಗೀತೆಯಲ್ಲಿ ನಾನಾ ಯೋಗಗಳನ್ನು ಬೋಧಿಸಲಾಗಿದೆ. ಏಕೆಂದರೆ ಜಗತ್ತಿನ ಎಲ್ಲಾ ಜನರೂ ಒಂದೇ ಗುಣದವರು ಅಥವಾ ಒಂದೇ ಬುದ್ಧಿಮಟ್ಟದವರು ಆಗಿಲ್ಲ. ಜನರ ಪ್ರವೃತ್ತಿ ಬೇರೆ ಬೇರೆ ಆಗಿದ್ದಾಗ ಅವರಿಗೆ ಕಲಿಸುವ ಯೋಗವೂ ಬೇರೆ ಬೇರೆಯಾಗಿರಬೇಕಲ್ಲವೆ? ಇದನ್ನು ಶ್ರೀ ಕೃಷ್ಣನೇ ತಿಳಿಸಿದ್ದಾನೆ–


**ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾಪ್ರೋಕ್ತಾ ಮಯಾನಘ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್॥**

ಕೆಲವರು ಸಾಂಖ್ಯರು, ಬುದ್ಧಿ ಪ್ರಧಾನರು. ಅವರಿಗೆ ಜ್ಞಾನಯೋಗ – ಮತ್ತೆ ಕೆಲವರು ಕರ್ಮಪ್ರಧಾನರು. ಅವರೇ ಯೋಗಿಗಳು. ಅವರಿಗೆ ಕರ್ಮಯೋಗ. ಒಬ್ಬರು ಹೆಚ್ಚು, ಒಬ್ಬರು ಕಡಿಮೆ ಎಂದಿಲ್ಲ. ಸಾಂಖ್ಯರಿಗೆ ಸಿಕ್ಕುವ ಫಲವೂ ಯೋಗಿಗಳಿಗೆ ಸಿಕ್ಕುವ ಫಲವೂ ಒಂದೇ.

**ಯತ್ ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ
ತದ್ ಯೋಗೈರಪಿ ಗಮ್ಯತೇ।**

ಹೀಗೆಯೇ ಕೃಷ್ಣನು ಭಕ್ತಿಯೋಗ, ರಾಜಯೋಗ, ಅಭ್ಯಾಸಯೋಗ, ಧ್ಯಾನಯೋಗ ಮುಂತಾದುವನ್ನು ತಿಳಿಸಿದ್ದಾನೆ. ಇವುಗಳಲ್ಲಿ ಒಂದೊಂದು ಪರಮಫಲವನ್ನು ಕೊಡಲು ಸಮರ್ಥ. ಯಾವ ದಾರಿಯನ್ನು ಹಿಡಿದರೂ ಕೊನೆಗೆ ತಲುಪುವುದು ಒಂದೇ ಸ್ಥಾನವನ್ನು. ಮಾರ್ಗಗಳು ಬೇರೆ, ಗಮ್ಯ ಸ್ಥಾನವು ಸಮಾನ. ಅನೇಕರು ಈ ಎಲ್ಲ ಯೋಗಗಳ ಒಂದು ಸಂಯೋಗವೇ ಗುರಿಯನ್ನು ತಲುಪಿಸುವುದು ಎಂದು ನಂಬುತ್ತಾರೆ. ಶ್ರೀ ಶಂಕರಾಚಾರ್ಯರು ಜ್ಞಾನಯೋಗಕ್ಕೂ ಶ್ರೀ ಮಧ್ವಾಚಾರ್ಯರು ಭಕ್ತಿಯೋಗಕ್ಕೂ ಪ್ರಾಧಾನ್ಯವನ್ನು ಕೊಟ್ಟಿದ್ದಾರೆ ಎಂಬುದು ಸತ್ಯ. ಆದರೆ ಒಬ್ಬರು ಭಕ್ತಿಯನ್ನಾಗಲಿ ಇನ್ನೊಬ್ಬರು ಜ್ಞಾನವನ್ನಾಗಲಿ ಹಳಿಯಲಿಲ್ಲ. ಇವೆರಡರ ಜೊತೆಗೆ ಕರ್ಮ ಆಧಾರವಾಗಿರಬೇಕು. ಕರ್ಮಗಳ ಫಲ ಸ್ವರ್ಗಾದಿ ಪ್ರಾಪ್ತಿ. ಸ್ವರ್ಗಾದಿಗಳ ಅಪೇಕ್ಷೆ ಇಲ್ಲದೆ ಭಗವದರ್ಪಣಬುದ್ಧಿಯಿಂದ ಕರ್ಮಗಳನ್ನು ಶಾಸ್ತ್ರೋಕ್ತವಾಗಿ ಮಾಡಿದರೆ ಅದರಿಂದ ಚಿತ್ತಶುದ್ಧಿ ಉಂಟಾಗುತ್ತದೆ. ಆಗ ಜ್ಞಾನಯೋಗಕ್ಕೆ ಮತ್ತು ಅದರಿಂದ ಭಕ್ತಿ ಯೋಗಕ್ಕೆ ಅರ್ಹತೆ ಸಾಧಕನಲ್ಲಿ ಉಂಟಾಗುತ್ತದೆ.

ಚಿತ್ತಶುದ್ಧಿ ಎಂದರೇನು? ಚಿತ್ತದಲ್ಲಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಮಲಗಳನ್ನು ತೊಳೆದು ಹಾಕಿ ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳುವುದು. ಎಲ್ಲವೂ ಭಗವಂತನದು, ಅದನ್ನು ಅವನಿಗೇ ಅರ್ಪಿಸುತ್ತೇನೆ ಎಂಬ ದೃಷ್ಟಿ ಮನುಷ್ಯನಲ್ಲಿ ಇದ್ದಾಗ ಬೇರೆ ವಸ್ತುಗಳಲ್ಲಿ ಆಶೆ ಇಲ್ಲವಾಗುತ್ತದೆ. ಹೀಗೆ ಕಾಮವನ್ನು ಗುಡಿಸಿ ಹಾಕಬೇಕು. ಎಲ್ಲರಲ್ಲೂ ಭಗವಂತನಿದ್ದಾನೆ ಎಂಬ ಭಾವನೆಯಿದ್ದಾಗ ಯಾರ ಮೇಲೆ ಕೋಪಿಸಿಕೊಳ್ಳಲು ಸಾಧ್ಯ? ಹೀಗೆ ಕ್ರೋಧವನ್ನು ದೂರ ಮಾಡಬೇಕು. ಎಲ್ಲವೂ ಭಗವಂತನವು ಎಂದು ನಿಶ್ಚಯಿಸಿದಾಗ ಯಾವುದರಲ್ಲೂ ಲೋಭಕ್ಕೆ ಅವಕಾಶವಿಲ್ಲ. ಭಗವಂತನ ಧ್ಯಾನವನ್ನು ಮಾಡುವವನಿಗೆ ಮೋಹ ಇರುವುದು ಹೇಗೆ ಸಾಧ್ಯ? ನಾನು ಭಗವಂತನ ಸೇವಕ, ಭಗವಂತನ ಸೇವಕರ ಸೇವಕ ಎಂದು ನಂಬಿದವನ ಮನಸ್ಸಿನಲ್ಲಿ ಮದ–ಮಾತ್ಸರ್ಯಗಳು ಹೇಗೆ ಇರಬಲ್ಲವು? ಹೀಗೆ ಚಿತ್ತಶುದ್ಧಿಯನ್ನು ಸಾಧಿಸಿಕೊಳ್ಳಬೇಕು. ಕರ್ಮ ಯೋಗವು, ಎಂದರೆ ಫಲಾಭಿಸಂಧಿಯಿಲ್ಲದೆ ಮಾಡುವ ಕರ್ಮವು ಜ್ಞಾನಭಕ್ತಿಗಳಿಗೆ



ಸಾಧನವಾಗುತ್ತದೆ. ಆದ್ದರಿಂದಲೇ ಗೀತೆಯು–

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂಃ ಮಾತೇ ಸಂಗೋಸ್ತ್ವಕರ್ಮಣಿ॥**

ಎಂದು ಉಪದೇಶಿಸಿದೆ. ಏನನ್ನೂ ಮಾಡದೆ ಸೋಮಾರಿಯಾಗಿ ಕುಳಿತಿರುವವನು ಯೋಗಿಯಲ್ಲ. ನನ್ನ ಕಾರ್ಯಗಳ ಫಲವೆಲ್ಲ ನನಗೇ ಸಿಕ್ಕಬೇಕು ಎಂದು ಆಸೆ ಪಡುವವನೂ ಯೋಗಿಯಲ್ಲ.

ಜ್ಞಾನಕ್ಕೆ ಗೀತೆಯು ಪ್ರಾಧಾನ್ಯವನ್ನು ನೀಡಿದೆ. ಆದ್ದರಿಂದಲೇ–

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ।
ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ॥**

ಎಂದು ಅದು ಹೇಳಿದೆ. ಜ್ಞಾನದಂತಹ ಪವಿತ್ರ ವಸ್ತು ಇನ್ನೊಂದಿಲ್ಲ ಎಂಬುದು ಗೀತೆಯ ಸಿದ್ಧಾಂತ. ಹಾಗೆಯೇ ಭಕ್ತಿಯೋಗವನ್ನು ಗೀತೆಯು ಕೊಂಡಾಡಿದೆ. ಯೋ ಮದ್ಭಕ್ತಃ ಸ ಮೇ ಪ್ರಿಯಃ (ಭಕ್ತನು ನನಗೆ ಪ್ರಿಯನಾದವನು) ಎಂದು ಹನ್ನೆರಡನೆಯ ಅಧ್ಯಾಯದಲ್ಲಿ ಹಲವು ಬಾರಿ ಕೃಷ್ಣನು ಘೋಷಿಸಿದ್ದಾನೆ.

ಇನ್ನು ರಾಜಯೋಗದ ಬಗೆಗೆ ಹೇಳುವುದಾದರೆ ಅದಕ್ಕಾಗಿ ಪ್ರಾಯೋಗಿಕ ಸಲಹೆಗಳನ್ನು ಶ್ರೀ ಕೃಷ್ಣನು ಕೊಟ್ಟಿದ್ದಾನೆ. ಆರನೆಯ ಅಧ್ಯಾಯದಲ್ಲಿ ಅವುಗಳನ್ನು ಕಾಣಬಹುದು.

**ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್॥**

ಯೋಗಾಭ್ಯಾಸವನ್ನು ಮಾಡಲು ಆರಿಸಿಕೊಂಡ ಸ್ಥಳ ಶುಚಿಯಾಗಿರಬೇಕು. ಯಾವ ಆಸನದ ಮೇಲೆ ಯೋಗಿ ಅಭ್ಯಾಸವನ್ನು ಮಾಡುವನೋ ಅದು ಸ್ಥಿರವಾಗಿರಬೇಕು. ಅದು ಅತಿ ಎತ್ತರವಾಗಿ ಅಥವಾ ಅತಿ ತಗ್ಗಾಗಿ ಇರಬಹುದು. ಅದರ ಮೇಲೆ ದರ್ಭೆ, ಮೃಗಚರ್ಮ, ಬಟ್ಟೆಗಳನ್ನು ಹಾಸಿರಬೇಕು.

**ತತ್ರೈಕಾಗ್ರಂ ಮನಃಕೃತ್ವಾ ಯತ್‌ಚಿತ್ತೇಂದ್ರಿಯಕ್ರಿಯಃ।
ಉಪವಿಶ್ಯಾಸನೇ ಯುಂಜ್ಯಾದ್ ಯೋಗಮಾತ್ಮವಿಶುದ್ಧಯೇ॥**

ಯೋಗಾಭ್ಯಾಸಿಯು ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿಕೊಳ್ಳಬೇಕು. ಇಂದ್ರಿಯಗಳ ಕ್ರಿಯೆಗಳನ್ನೆಲ್ಲ ನಿಯಂತ್ರಿಸಬೇಕು. ಆತ್ಮಶುದ್ಧಿಗಾಗಿ ಆಸನದಲ್ಲಿ ಕುಳಿತು ಯೋಗಸಾಧನೆಯನ್ನು ಮಾಡಬೇಕು.

**ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್॥**

ಬೆನ್ನು, ಕತ್ತು, ತಲೆ ಇವು ನೇರ ರೇಖೆಯಲ್ಲಿರುವಂತೆ ಸಾಧಕನು ನಿಂತಿರಬೇಕು ಅಥವಾ ಕುಳಿತಿರಬೇಕು. ಸ್ಥಿರವಾಗಿರಬೇಕು. ತನ್ನ ಮೂಗಿನ ತುದಿಯ ಮೇಲೆ ದೃಷ್ಟಿಯನ್ನು ನೆಟ್ಟಿರಬೇಕು. ದಿಕ್ಕುಗಳನ್ನು ನೋಡುತ್ತಿರಬಾರದು.

**ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ।
ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ॥**

ಸಾಧಕನ ಮನಸ್ಸು ಪ್ರಶಾಂತವಾಗಿರಬೇಕು. ಯಾವ ಭಯವೂ ಇರಬಾರದು. ನಿಯತವಾಗಿ ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕು.

ಮನಸ್ಸನ್ನು ಸಂಯಮದಲ್ಲಿರಿಸಿ ಭಗವಂತನನ್ನೇ ಸ್ಮರಿಸುತ್ತಿರಬೇಕು. ಹೀಗೆ ಯೋಗಾಭ್ಯಾಸ ಕ್ರಮವನ್ನು ಹೇಳುವುದಲ್ಲದೆ, ಯೋಗಿಯು ಹೇಗೆ ಆಹಾರವನ್ನು ಸೇವಿಸಬೇಕು. ಎಷ್ಟು ನಿದ್ದೆ ಮಾಡಬೇಕು ಎಂಬುದನ್ನು ಭಗವದ್ಗೀತೆಯು ತಿಳಿಸಿದೆ.

**ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ॥**

ಅತಿಯಾಗಿ ತಿನ್ನುವ ತಿಂಡಿ ಪೋತರಿಗಾಗಲಿ, ಅನ್ನವನ್ನೇ ತಿನ್ನದೆ ಇರುವವರಿಗೆ ಆಗಲಿ ಯೋಗವು ಸಿದ್ಧಿಸದು. ಅತಿ ನಿದ್ದೆ ಮಾಡುವವರಿಗೆ, ನಿದ್ದೆಯನ್ನೇ ಮಾಡದವರಿಗೆ ಯೋಗ ಸಿದ್ಧಿ ಇಲ್ಲ.

ಹೀಗೆ ಭಗವದ್ಗೀತೆ ಯೋಗದ ಬಗೆಗೆ ಉತ್ತಮ ಸೂಚನೆಗಳನ್ನು ನೀಡುತ್ತದೆ. ಯೋಗ ಶಬ್ದದ ಅರ್ಥದ ಬಗೆಗೂ ಗೀತೆಯು ತನ್ನದೇ ಆದ ನಿಲುವುಗಳನ್ನು ಹೊಂದಿದೆ.

'ಸಮತ್ವಂ ಯೋಗ ಉಚ್ಯತೇ'

ಎಲ್ಲಾ ಸ್ಥಿತಿಗಳಲ್ಲಿ ಮನಸ್ಸಿನ ಸಮತ್ವವನ್ನು ಯೋಗವೆಂದು ಕರೆಯುತ್ತಾರೆ –ಎಂಬುದು ಒಂದು ದೃಷ್ಟಿ.

'ಯೋಗಃ ಕರ್ಮಸು ಕೌಶಲಮ್'

ಮಾಡುವ ಕೆಲಸಗಳಲ್ಲಿ ತೋರುವ ಕುಶಲತೆಯೇ ಯೋಗ – ಎಂಬುದು ಇನ್ನೊಂದು ದೃಷ್ಟಿ.

'ತಂ ವಿದ್ಯಾದ್ ದುಃಖ ಸಂಯೋಗ ವಿಯೋಗಂ ಯೋಗಸಂಜ್ಞಿತಮ್'

ದುಃಖಕ್ಕೆ ಕಾರಣಗಳಾಗುವ ಸಂಯೋಗಗಳಿಂದ ದೂರವಿರುವುದೇ ಯೋಗ ಎಂಬುದು ಮೂರನೆಯ ದೃಷ್ಟಿ.

ಭಗವದ್ಗೀತೆಯನ್ನು ಯೋಗಶಾಸ್ತ್ರವೆಂದೇ ಕರೆಯುತ್ತಾರೆ. ಉಪನಿಷತ್ತುಗಳ ಸಾರವೇ ಭಗವದ್ಗೀತೆಯಾಗಿರುವುದರಿಂದ ಅವುಗಳಲ್ಲಿದ್ದ ಎಲ್ಲ ಯೋಗಗಳೂ ಇದರಲ್ಲಿ ಪ್ರತಿಫಲಿತವಾಗಿರುವುದರಲ್ಲಿ ಆಶ್ಚರ್ಯವಿಲ್ಲ. ಚಿತ್ತವೃತ್ತಿಗಳ ನಿರೋಧವೇ ಯೋಗ, ಅದನ್ನು ಸಾಧಿಸುವುದು ಹೇಗೆ ಎಂದರೆ ಯೋಗಸೂತ್ರವು–

'ಅಭ್ಯಾಸ ವೈರಾಗ್ಯಾಭ್ಯಾ ತನ್ನಿರೋಧಃ' ಎಂದು ಹೇಳಿದೆ.

ಅಭ್ಯಾಸ ಮತ್ತು ವೈರಾಗ್ಯ ಎಂಬ ಸಾಧನಗಳಿಂದ ಚಿತ್ತವೃತ್ತಿ ನಿರೋಧವನ್ನು ಮಾಡಬಹುದು ಎಂದು ಸೂತ್ರದ ಅಭಿಪ್ರಾಯ. ಇದನ್ನೇ ಭಗವದ್ಗೀತೆಯಲ್ಲಿ–

'ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ'

ಅಭ್ಯಾಸ ಮತ್ತು ವೈರಾಗ್ಯಗಳಿಂದ ಮನಸ್ಸನ್ನು ನಿಗ್ರಹಿಸಬಹುದು ಎಂದು ಹೇಳಿದ್ದಾರೆ. ಪತಂಜಲಿಯು ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ಯಮಗಳನ್ನು ಶೌಚ, ಸಂತೋಷ, ತಪಸ್, ಸ್ವಾಧ್ಯಾಯ, ಈಶ್ವರ ಪ್ರಣಿಧಾನ ಎಂಬ ಐದು ಯಮಗಳನ್ನೂ ಯೋಗದ ಅಂಗಗಳೆಂದು ಹೇಳಿದ್ದಾನೆ. ಭಗವದ್ಗೀತೆಯಲ್ಲಿ ಅವು ದೈವೀಸಂಪತ್ ಮುಂತಾದ ಸ್ಥಳಗಳಲ್ಲಿ ಉಕ್ತವಾಗಿವೆ. ಹದಿನಾರನೆಯ ಅಧ್ಯಾಯದಲ್ಲಿ –

**ಅಭಯಂ ಸತ್ತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್॥
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್।
ತೇಜಃ ಕ್ಷಮಾ ಧೃತಿಃ ಶೌಚಂ ಅದ್ರೋಹೋ ನಾತಿಮಾನಿತಾ॥**

ಎಂಬ ಶ್ಲೋಕಗಳಲ್ಲಿ ಸ್ವಾಧ್ಯಾಯ, ತಪಸ್, ಅಹಿಂಸಾ, ಸತ್ಯ, ಶೌಚ ಎಂಬವುಗಳು ಕಂಠತಃ ಉಕ್ತವಾಗಿವೆ. ಉಳಿದವು ಧ್ವನಿತವಾಗಿವೆ. ಈಶ್ವರಪ್ರಣಿಧಾನ ಎಂದರೆ ಪರಮಾತ್ಮನಿಗೆ ಶರಣಾಗುವುದು. ಅದನ್ನು ಭಗವದ್ಗೀತೆಯು–

'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬಲ್ಲಿ ವಾಚ್ಯವಾಗಿಯೇ ಹೇಳಿದೆ. ಆದ್ದರಿಂದ ಭಗವದ್ಗೀತೆ ಮುಖ್ಯವಾಗಿ ಬೋಧಿಸುವುದು ಯೋಗವನ್ನು ಎಂದು ದೃಢವಾಗಿ ಹೇಳಬಹುದು. ಆದ್ದರಿಂದಲೇ ಶ್ರೀ ಕೃಷ್ಣ ಅರ್ಜುನನಿಗೆ ಹೇಳುತ್ತಾನೆ–

**ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ ಯೋಗೀ ಭವಾರ್ಜುನ।**

ಅರ್ಜುನನೆ, ಯೋಗಿಯು ತಪಸ್ವಿಗಳಿಗಿಂತ, ಜ್ಞಾನಿಗಳಿಗಿಂತ, ಕರ್ಮನಿರತರಿಗಿಂತ ಶ್ರೇಷ್ಠನು. ಆದ್ದರಿಂದ ನೀನು ಯೋಗಿಯಾಗು. ಹೀಗೆ ನಮಗೆ ಭಗವದ್ಗೀತೆಯೇ ಯೋಗದ ಕೈಪಿಡಿಯಾಗಿದೆ.

ಇಂಟೆಕ್‌ಗೆ ಕುಕ್ಕರಹಳ್ಳಿ ಕೆರೆ ಸಂರಕ್ಷಣೆಯ ಯೋಜನಾ ವರದಿ ರೂಪಿಸುವ ಜವಾಬ್ದಾರಿ

ಗೊಂದಲ ಮೂಡಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆಕ್ರೋಶ

ಮೈಸೂರು, ಜೂ.25(ಬಿಎಲ್‌ಯು)–ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಅಧ್ಯಯನ ನಡೆಸಿ ವಿಸ್ತೃತ ಯೋಜನಾ ವರದಿ ಸಲ್ಲಿಸಲು ಇಂಟೆಕ್ (ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್) ಸಂಸ್ಥೆಗೆ ಕಾನೂನು ಪ್ರಕಾರ ವಹಿಸಲಾಗಿದೆ. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇದನ್ನು ಪ್ರಶ್ನಿಸಿ ಸಾರ್ವಜನಿಕ ವಲಯದಲ್ಲಿ ಗೊಂದಲ ಮೂಡಿಸುತ್ತಿವೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಡಾ.ಕೆ.ವಿ.ರಾಜೇಂದ್ರ

ಮೈಸೂರು ನಗರದ ಕೆರೆಗಳ ಪುನರುಜ್ಜೀವನಕ್ಕೆ ಮುಡಾದ 2023–24 ನೇ ಸಾಲಿನ ಆಯವ್ಯಯದಲ್ಲಿ 29.9 ಕೋಟಿ ವೆಚ್ಚ ಮಾಡಲು ಅಂದಾಜಿಸಲಾಯಿತು. ಇದರಲ್ಲಿ ಕುಕ್ಕರಹಳ್ಳಿ ಕೆರೆಯ ಸಂರಕ್ಷಣೆಗೆ ಸಮಗ್ರ ಯೋಜನಾ ವರದಿ ತಯಾರಿಸಲು ಇಂಟೆಕ್ ಸಂಸ್ಥೆಗೆ ವಹಿಸಲು ಹಾಗೂ ಇದಕ್ಕೆ 60 ಕೋಟಿ ರೂಪಾಯಿ ಅನುದಾನ ನೀಡಲು ಕಳೆದ ಸೆಪ್ಟೆಂಬರ್ 6 ರಂದು ನಡೆದ ಮುಡಾ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಹೇಳಿದ್ದಾರೆ. ಇಂಟೆಕ್ ಸಂಸ್ಥೆಯು ನೋಂದಣಿಯಾಗಿರುವ ಸಂಸ್ಥೆಯಾಗಿದ್ದು, 1984ರಿಂದ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ವಾಣಿಜ್ಯೇತರ ಲಾಭರಹಿತ ಸಂಸ್ಥೆಯಾಗಿದೆ. ಕೇಂದ್ರ ಸರ್ಕಾರದ ಮೂರು ಸಚಿವಾಲಯಗಳ ಕಾರ್ಯದರ್ಶಿಗಳು ಈ ಸಂಸ್ಥೆಯ ಆಡಳಿತ ಮಂಡಳಿಯ ನಿರ್ವಹಣೆಯ ಜವಾಬ್ದಾರಿ ಹೊತ್ತಿರುತ್ತಾರೆ. ಇದಲ್ಲದೆ ಸಂಸ್ಥೆಯ ಲೆಕ್ಕ ಪರಿಶೋಧನೆಯು ನಿಯಮಿತವಾಗಿ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ನಿರ್ವಹಿಸುತ್ತಿದ್ದಾರೆ ಎಂದು ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.



ಇಂಟೆಕ್‌ನ ಕರ್ನಾಟಕ ಚಾಪ್ಟರ್‌ಗೆ ಎ.ರವೀಂದ್ರ ಮುಖ್ಯಸ್ಥರಾಗಿದ್ದು, ಜನರಲ್ ಒಂಬತ್ಕೆರೆ ಹಿರಿಯ ಸದಸ್ಯರಾಗಿದ್ದಾರೆ. ಮೈಸೂರಿನ ಪ್ರೊ.ಎನ್.ಎಸ್. ರಂಗರಾಜು ಸಂಚಾಲಕರಾಗಿದ್ದಾರೆ. ಸಂಸ್ಥೆಯ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯನ್ನು ಗಮನದಲ್ಲಿಟ್ಟುಕೊಂಡು ಮುಡಾ ಸಭೆಯಲ್ಲಿ ಕುಕ್ಕರಹಳ್ಳಿ ಕೆರೆಯ ಸಂರಕ್ಷಣೆಗೆ ವಿಸ್ತೃತ ವರದಿ ಸಲ್ಲಿಸುವ ಜವಾಬ್ದಾರಿ ವಹಿಸಲಾಗಿದೆ. ಈ ಸಂಬಂಧ ಮುಡಾ ಹಾಗೂ ಸಂಸ್ಥೆ ನಡುವೆ ಕಳೆದ ಡಿಸೆಂಬರ್ 18ರಂದು ಕರಾರು ಒಪ್ಪಂದ ಕೂಡ ಆಗಿದೆ ಎಂದು ವಿವರಿಸಿದ್ದಾರೆ.

ಕುಕ್ಕರಹಳ್ಳಿ ಕೆರೆ ಮಾತ್ರವಲ್ಲದೆ 22 ಕಿಲೋಮೀಟರ್ ಪೂರ್ಣಯ್ಯ ಕಾಲುವೆ, ಲಿಂಗಾಂಬುದಿ ಕೆರೆಗಳನ್ನು ಒಳಗೊಂಡಂತೆ ಕುಕ್ಕರಹಳ್ಳಿ ಕೆರೆಯ ಸವಿಸ್ತೃತ ಯೋಜನಾ ವರದಿ ಸಲ್ಲಿಸಲು 63.80 ಲಕ್ಷ ವೆಚ್ಚ ತಗಲುತ್ತದೆ ಎಂದು ಇಂಟೆಕ್ ವರದಿ ನೀಡಿತ್ತು. ಈ ಹಿನ್ನೆಲೆಯಲ್ಲಿ ಮೊದಲ ಹಂತವಾಗಿ ಏರಿಯಲ್ ಸರ್ವೆ ಸೇರಿದಂತೆ ಇತರೆ ಕಾರ್ಯಗಳಿಗೆ ಒಟ್ಟಾರೆ ಹಣದಲ್ಲಿ ಶೇಕಡ 25 ರಷ್ಟನ್ನು ಅಂದರೆ 18,82,100 ರೂಪಾಯಿಗಳನ್ನು ಪಾವತಿ ಮಾಡಲಾಗಿದೆ. ಈಗ ಕುಕ್ಕರಹಳ್ಳಿ ಕೆರೆಯ ಏರಿಯಲ್ ಸರ್ವೆ ಹಾಗೂ ಇತರೆ ಕಾರ್ಯಗಳ ಡೇಟಾಬೇಸ್ ವರದಿಯನ್ನು ಇಂಟೆಕ್ ಸಲ್ಲಿಸಿದೆ ಎಂದು ಡಾ.ರಾಜೇಂದ್ರ ಮಾಹಿತಿ ನೀಡಿದ್ದಾರೆ.

ಕೆರೆಯ ಸೌಂದರ್ಯಕ್ಕೆ ಮಾತ್ರ ಕೇಂದ್ರೀಕರಿಸದೆ ಕೆರೆಯ ಸುತ್ತಮುತ್ತಲಿನ ಪರಿಸರಗಳು, ಸಂಪರ್ಕಿಸುವ ಚಾನಲ್‌ಗಳು, ಕೆರೆಯಿಂದ ಹೂಳೆತ್ತುವುದು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿದ್ದು, ಇಂಟೆಕ್ ಸಲ್ಲಿಸುವ ವಿಸ್ತೃತ ಯೋಜನಾ ವರದಿಯಲ್ಲಿ ಇದೆಲ್ಲಾ ಸೇರಲಿದೆ ಎಂದು ಹೇಳಿದ್ದಾರೆ.

ಇಷ್ಟೆಲ್ಲಾ ಪಾರದರ್ಶಕತೆಯ ನಿಯಮ ಅನುಸರಿಸಿದ್ದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಗೊಂದಲ ಮೂಡಿಸುತ್ತಿವೆ. ವಿಶ್ವಾಸನೀಯ ಮತ್ತು ನಿಷ್ಕಳಂಕ ಸಂಸ್ಥೆಗೆ ಯೋಜನಾ ವರದಿ ಕಾರ್ಯದೇಶ ನೀಡಿರುವುದನ್ನು ಕೆಲವರು ಪ್ರಶ್ನೆ ಮಾಡಿದ್ದಾರೆ. ಟೆಂಡರ್ ಆಹ್ವಾನಿಸದೆ ಇಂಟೆಕ್ ಈ ಜವಾಬ್ದಾರಿ ನೀಡಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರಿಂದ ಸಾರ್ವಜನಿಕ ವಲಯದಲ್ಲಿ ಗೊಂದಲ ಸೃಷ್ಟಿಯಾಗುತ್ತಿದೆ ಎಂದು ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಯೋಗದಿಂದ ಆಧ್ಯಾತ್ಮಿಕ ಶಕ್ತಿ ಹೆಚ್ಚು

ರೋಟರಿ ಐವರಿ ಸಿಟಿ ನಿಯೋಜಿತ ಅಧ್ಯಕ್ಷ ಶಶಿಧರ್



ಹಾರ್ಡ್ವಿಕ್ ಶಾಲೆಯ ಆವರಣದಲ್ಲಿ ಯೋಗ ದಿನ ಆಚರಿಸಲಾಯಿತು.

ಮೈಸೂರು, ಜೂ.25–ಮೈಸೂರಿನ ಹಾರ್ಡ್ವಿಕ್ ಶಾಲಾ ಆವರಣದಲ್ಲಿ ರೋಟರಿ ಐವರಿ ಸಿಟಿ ಮೈಸೂರು ಹಾಗೂ ನಿರ್ವಾಣ ಯೋಗ ಶಾಲಾ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರೋಟರಿ ಐವರಿ ಸಿಟಿಯ ನಿಯೋಜಿತ ಅಧ್ಯಕ್ಷ ಶಶಿಧರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಯೋಗವು ಆಧ್ಯಾತ್ಮಿಕ ಶಕ್ತಿಯನ್ನು ವೃದ್ಧಿಸುತ್ತದೆ. ಪ್ರತಿನಿತ್ಯವೂ ಯೋಗಾಭ್ಯಾಸ ಮಾಡುವುದರಿಂದ ಆಧ್ಯಾತ್ಮಿಕ ಶಕ್ತಿ ಜಾಗೃತಗೊಂಡು ಆರೋಗ್ಯವಾದ ದೇಹ ಮತ್ತು ಮನಸ್ಸು ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಯೋಗದಿಂದ ಮನುಷ್ಯನು ನೆಮ್ಮದಿಯನ್ನು ಸದಾ ಕಾಲ ಕಾಪಾಡಿಕೊಳ್ಳಬಹುದು ಹಾಗೂ ಶಿಸ್ತುಬದ್ಧ ಜೀವನ ಕ್ರಮವನ್ನು ರೂಢಿಸಿಕೊಳ್ಳಬಹುದು. ಇಂದಿನ ಯುವಕರು ಯೋಗಾಭ್ಯಾಸದಲ್ಲಿ ಪ್ರತಿನಿತ್ಯವೂ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಉಸಿರು ಮಾನವನ ದೇಹದ ಅತೀ ಮುಖ್ಯ ಕ್ರಿಯೆಯಾಗಿದೆ. ಪ್ರಾಣಶಕ್ತಿಯನ್ನು ವೃದ್ಧಿಸುವುದು ಪ್ರಾಣಾಯಾಮದ ಉದ್ದೇಶವಾಗಿದೆ. ಆದ್ದರಿಂದ ಯೋಗದಲ್ಲಿ ಬರುವ ಜ್ಞಾನ, ಕರ್ಮ, ಭಕ್ತಿ, ರಾಜಮಾರ್ಗಗಳಲ್ಲಿ ಪ್ರತಿನಿತ್ಯವೂ ಯೋಗಾಭ್ಯಾಸವನ್ನು ಮಾಡುವುದರಿಂದ ಉಲ್ಲಾಸಭರಿತ ಜೀವನ ನಡೆಸಬಹುದೆಂದು ತಿಳಿಸಿದರು. ವೇದಿಕೆಯಲ್ಲಿ ಹಾರ್ಡ್ವಿಕ್ ಶಾಲೆಯ ಶಿಕ್ಷಕರು ಹಾಗೂ ರೋಟರಿ ಐವರಿ ಸದಸ್ಯರು ಹಾಗೂ ನಿರ್ವಾಣ ಯೋಗ ಶಾಲೆಯ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಪುಣ್ಯ ಸ್ಮರಣೆ



ಮೈಸೂರು ನಗರ ಎಸ್‌ಟಿ ಮೋರ್ಚಾದ ವತಿಯಿಂದ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರ ಪುಣ್ಯತಿಥಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗಿಡ ನೆಡುವ ಕಾರ್ಯಕ್ರಮವನ್ನು ಕ್ಯಾತಮಾರನಹಳ್ಳಿಯ ಸುಭಾಷ್ ಚಂದ್ರ ಬೋಸ್ ಪಾರ್ಕಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನಗರಾಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಲಕ್ಷ್ಮಣ್ ಟೆನ್ನಿಸ್ ಗೋಪಿ, ಎಂ. ಮಹೇಶ್, ಬಾಲರಾಜು ಸಿದ್ದರಾಜು, ನರಸಿಂಹರಾಜ ಮಂಡಲದ ಅಧ್ಯಕ್ಷ ಜಗದೀಶ್, ಜೋಗಿ ಬಸವರಾಜ್, ಶಿವು ಮತ್ತಿತರಿದ್ದರು ಉಪಸ್ಥಿತರಿದ್ದರು.

ನೂತನ ಡಿಸಿಪಿಐ ಜವರೇಗೌಡರಿಗೆ ಅಭಿನಂದನೆ



ಮೈಸೂರು ಜಿಲ್ಲೆಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನೂತನ ಉಪನಿರ್ದೇಶಕ ಜವರೇಗೌಡ ಅವರನ್ನು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ.ಸೋಮೇಗೌಡ, ಜಿಲ್ಲಾ ಪದಾಧಿಕಾರಿಗಳಾದ ಮಮತಾ, ಸುಬ್ರಹ್ಮಣ್ಯ, ಮಲ್ಲಣ್ಣ, ಶಾಂತರಾಜು, ವಿವಿಧ ಸಂಘ ಸಂಸ್ಥೆಯ ವಸಂತಕುಮಾರ್, ಸುರೇಶ್, ಮಂಜುನಾಥ್, ಗಜೇಂದ್ರ, ಸಾಲುಂಡಿ ದೊರೆಸ್ವಾಮಿ, ಮಂಜುನಾಥ್, ಲಕ್ಷ್ಮಿಕಾಂತ, ಕಚೇರಿಯ ಸಿಬ್ಬಂದಿ ಅಭಿನಂದಿಸಿದರು.

ಮಾದಕ ದ್ರವ್ಯ ಸೇವನೆ, ಅಕ್ರಮ ಮಾದಕ ವಸ್ತು ಕಳ್ಳ ಸಾಗಣೆ ವಿರೋಧಿ ದಿನ

ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಾಗೃತಿ ಮೂಡಿಸಲು ಮನವಿ



ವಿವಿಧ ಕಾಲೇಜುಗಳಲ್ಲಿ ಮಾದಕ ದ್ರವ್ಯ ಸೇವನೆಯಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿಯ ಪೋಸ್ಟರ್ ನೀಡಿ ಮನವಿ ಮಾಡಲಾಯಿತು.

ಮೈಸೂರು, ಜೂ.25– ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಸೂರು ನಗರದ ಪ್ರತಿ ಕಾಲೇಜುಗಳಲ್ಲಿ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಮಾದಕ ವಸ್ತು ಕಳ್ಳ ಸಾಗಣೆ ವಿರೋಧದ ಕಾಲೇಜುಗಳಲ್ಲಿ ಕಡ್ಡಾಯವಾಗಿ ಮಕ್ಕಳಲ್ಲಿ ಜಾಗೃತಿ ಮೂಡಿಸಲಾಯಿತು.

ಮೈಸೂರಿನ ಸದ್ವಿದ್ಯಾ ಕಾಲೇಜು, ಮರಿಮಲ್ಲಪ್ಪ ಕಾಲೇಜು, ಟಿಟಿಎಲ್ ಕಾಲೇಜು, ಶಾರದಾ ವಿಲಾಸ್ ಕಾಲೇಜು, ಡಿ.ಬನುಮಯ್ಯ ಕಾಲೇಜು ಸೇರಿದಂತೆ ಇನ್ನಿತರ ಕಾಲೇಜುಗಳಿಗೆ ಪದಾಧಿಕಾರಿಗಳು ಭೇಟಿ ನೀಡಿ ಮಾದಕ ದ್ರವ್ಯ ಸೇವನೆಯಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿಯ ಪೋಸ್ಟರ್ ನೀಡಿ ಮನವಿ ಮಾಡಿದರು. ಈ ವೇಳೆ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಟ್ರಸ್ಟಿ ಪದಾಧಿಕಾರಿಗಳಾದ ಅಜಯ್ ಶಾಸ್ತ್ರಿ, ರವಿಚಂದ್ರ, ಜಿ ರಾಘವೇಂದ್ರ, ಎಸ್ ಎನ್ ರಾಜೇಶ್, ರಾಕೇಶ್, ದುರ್ಗಾಪ್ರಸಾದ್, ಸಚಿನ್ ನಾಯಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಉದ್ಘಾಟನೆ

ಮೈಸೂರು.ಜೂ.25–ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ, ಮೈಸೂರಿನ ಆಕಾಶವಾಣಿ, ಕೃಷಿ ಇಲಾಖೆ, ಸಾವಯವ ಕೃಷಿ ಸಂಶೋಧನ ಕೇಂದ್ರ, ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕ ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಮಂಡ್ಯದ ವಿ.ಸಿ ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರ ಮತ್ತು ಮೈಸೂರು ಮಂಡ್ಯ ಚಾಮರಾಜನಗರ ಜಿಲ್ಲಾ ಸಾವಯವ ಕೃಷಿಕರ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಸಾವಯವ ಸಂಪದ–ಸಮಗ್ರ ಸಾವಯವ ಕೃಷಿ ಬದುಕಿನ ಬೇಸಾಯ ಚಿತ್ರಣ ಕುರಿತ ಬಾನುಲಿ ಸರಣಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಹಾಗೂ ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭವನ್ನು ಜೂ.26ರಂದು ಬೆಳಗ್ಗೆ 10 ಗಂಟೆಗೆ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಗೌರವಾನ್ವಿತ ಕುಲಪತಿ ಡಾ.ಎಸ್.ವಿ ಸುರೇಶ ಉದ್ಘಾಟಿಸಲಿದ್ದು, ಮೈಸೂರಿನ ಆಕಾಶವಾಣಿಯ ಉಪನಿರ್ದೇಶಕ ಉಮೇಶ್ ಎಸ್.ಎಸ್. ಅಧ್ಯಕ್ಷತೆ ವಹಿಸಲಿದ್ದಾರೆ.

ಸಲಿಂಗ ಕಾಮ ಕೇಸ್‌ಗೆ ಬಿಗ್ ಟ್ವಿಸ್ಟ್

ಸೂರಜ್ ವಿರುದ್ಧವೇ ದೂರು ದಾಖಲಿಸಿದ ಆಪ್ತ ಶಿವಕುಮಾರ್



ಸೂರಜ್ ರೇವಣ್ಣ



ಶಿವಕುಮಾರ್

ಹಾಸನ, ಜೂ.25– ಅಸಹಜ ಲೈಂಗಿಕ ಕ್ರಿಯೆ ಪ್ರಕರಣದಲ್ಲಿ ಸೂರಜ್ ರೇವಣ್ಣ ಪರವಾಗಿ ನಿಂತು ಸಂತ್ರಸ್ತನ ವಿರುದ್ಧ ದೂರು ನೀಡಿದ್ದ ಶಿವಕುಮಾರ್ ಪತ್ತೆಯಾಗಿದ್ದಾರೆ. ಸಂತ್ರಸ್ತನ ವಿರುದ್ಧ ಬ್ಲ್ಯಾಕ್ ಮೇಲ್ ದೂರು ನೀಡಿದ್ದ ಶಿವಕುಮಾರ್, ಸೂರಜ್ ರೇವಣ್ಣ ಬಂಧನವಾಗುತ್ತಿದ್ದಂತೆಯೇ ದಿಢೀರ್ ನಾಪತ್ತೆಯಾಗಿದ್ದ. ಆದರೆ, ಇಂದು ಶಿವಕುಮಾರ್ ಏಕಾಏಕಿ ಪ್ರತ್ಯಕ್ಷರಾಗಿದ್ದಾರೆ. ಅಲ್ಲದೇ ಅಚ್ಚರಿ ಎಂಬಂತೆ ನೇರವಾಗಿ ಹೊಳೆನರಸೀಪುರ ಪೊಲೀಸ್ ಠಾಣೆಗೆ ಭೇಟಿ ನೀಡಿ ಸೂರಜ್ ರೇವಣ್ಣ ವಿರುದ್ಧವೇ ದೂರು ನೀಡಿದ್ದಾರೆ.

ಜೆಡಿಎಸ್ ಕಾರ್ಯಕರ್ತನೋರ್ವ ತನ್ನ ಮೇಲೆ ಲೈಂಗಿಕ ದೌರ್ಜನ್ಯವಾಗಿದೆ ಎಂದು ಸೂರಜ್ ರೇವಣ್ಣ ವಿರುದ್ಧ ಸಿಎಂ, ಗೃಹ ಸಚಿವ ಕಚೇರಿಗೆ ದೂರು ನೀಡಿದ್ದರು. ಇದರ ಬೆನ್ನಲ್ಲೇ ಇತ್ತ ಸೂರಜ್ ರೇವಣ್ಣನ ಆಪ್ತಾಗಿದ್ದ ಶಿವಕುಮಾರ್ ಅವರು ಸಂತ್ರಸ್ತನ ವಿರುದ್ಧವೇ ಬ್ಲ್ಯಾಕ್‌ಮೇಲ್ ದೂರು ದಾಖಲಿಸಿದ್ದರು. ಬಳಿಕ ಸಂತ್ರಸ್ತ, ಶಿವ ಕುಮಾರ್ ವಿರುದ್ಧವೇ ದೂರು ದಾಖಲಿಸಿದ್ದರು. ಅಲ್ಲಿಂದ ಅವರು ನಾಪತ್ತೆಯಾಗಿದ್ದರು. ಇದೀಗ ದಿಢೀರ್ ಪ್ರತ್ಯಕ್ಷಗೊಂಡ ಶಿವಕುಮಾರ್ ತಮ್ಮ ನಿಲುವು ಬದಲಾಯಿಸಿ ಸೂರಜ್ ವಿರುದ್ಧವೇ ದೂರು ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸೂರಜ್ ರೇವಣ್ಣ ವಿರುದ್ಧ ಮತ್ತೊಂದು ಲೈಂಗಿಕ ದೌರ್ಜನ್ಯ ಕೇಸ್ ದಾಖಲಾಗುವ ಎಲ್ಲಾ ಸಾಧ್ಯತೆಗಳಿವೆ.

ಶಿವಕುಮಾರ ವಿರುದ್ಧವೂ ದಾಖಲಾಗಿದೆ ದೂರು: ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಡಾ.ಸೂರಜ್ ರೇವಣ್ಣ ಆಪ್ತ, ನಾಪತ್ತೆಯಾಗಿರುವ ಶಿವಕುಮಾರ್ ವಿರುದ್ಧವೂ ಸಂತ್ರಸ್ತ ದೂರು ದಾಖಲಿಸಿದ್ದಾರೆ. ನನಗೆ ಆಗಿರುವ ಅನ್ಯಾಯದ ಬಗ್ಗೆ ಶಿವಕುಮಾರ್ ಬಳಿ ಹೇಳಿದ್ದೆ, ನನಗೆ ದೈಹಿಕ ಹಿಂಸೆ ಆಗಿದ್ದರೂ ಶಿವಕುಮಾರ್ ಆಸ್ಪತ್ರೆಗೆ ಹೋಗಲು ಬಿಟ್ಟಿರಲಿಲ್ಲ ಎಂದು ಸಂತ್ರಸ್ತ ಆರೋಪಿಸಿದ್ದಾರೆ. ಹೀಗಾಗಿ ಸೂರಜ್ ಪ್ರಕರಣದಲ್ಲಿ ಶಿವಕುಮಾರ್ ಎರಡನೇ ಆರೋಪಿಯಾಗಿದ್ದಾನೆ.

ಸಿಐಡಿ ಕಸ್ಟಡಿಯಲ್ಲಿ ಸೂರಜ್: ಸಲಿಂಗ ಕಾಮ ಪ್ರಕರಣದಲ್ಲಿ ಸಿಕ್ಕಿಬಿದ್ದು ನ್ಯಾಯಾಂಗ ಬಂಧನದಲ್ಲಿದ್ದ ಎಂಎಲ್‌ಸಿ ಸೂರಜ್ ರೇವಣ್ಣನನ್ನು 8 ದಿನ ಸಿಐಡಿ ಕಸ್ಟಡಿಗೆ ನೀಡಿ ಕೋರ್ಟ್ ಆದೇಶ ಹೊರಡಿಸಿತ್ತು. ಪ್ರಕರಣ ವಿಚಾರಣೆ ನಡೆಸಿದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶರಾದ ಕೆ.ಎನ್.ಶಿವಕುಮಾರ್ ಅವರು ಸೂರಜ್‌ನನ್ನು ಜುಲೈ 1ರವರೆಗೆ ಸಿಐಡಿ ಕಸ್ಟಡಿಗೆ ನೀಡಿ ಆದೇಶ ನೀಡಿದ್ದಾರೆ. ಹೀಗಾಗಿ ಸಿಐಡಿ ಅಧಿಕಾರಿಗಳು ನಿನ್ನೆ ಪರಪ್ಪನ ಅಗ್ರಹಾರ ಜೈಲಿನಿಂದ ಕರೆದುಕೊಂಡು ಬಂದು ವಿಚಾರಣೆ ನಡೆಸಿದ್ದಾರೆ. ಜುಲೈ 1 ರವರೆಗೆ ಸೂರಜ್ ರೇವಣ್ಣ ಸಿಐಡಿ ಕಸ್ಟಡಿಯಲ್ಲಿ ಇರಲಿದ್ದಾರೆ.

ಮೈಸೂರಿಗೆ ನಾಲ್ಕು ಹಳಿ ರೈಲು ಮಾರ್ಗ; ಎಂಸಿಸಿಐ ಸಂತಸ



ಮೈಸೂರು,ಜೂ.25–ರೈಲ್ವೆ ಇಲಾಖೆಯು ಮೈಸೂರಿಗೆ ನಾಲ್ಕು ಹಳಿ ರೈಲು ಮಾರ್ಗವನ್ನು ನಿರ್ಮಾಣ ಮಾಡಲು ಮುಂದಾಗಿರುವುದಕ್ಕೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಂತಸ ವ್ಯಕ್ತಪಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರೈಲ್ವೆ ಮಂಡಳಿಗೆ ವರದಿ ಸಲ್ಲಿಸಲು ಪ್ರಮುಖ ಕಾರಣವಾಗಿರುವ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ರೈಲ್ವೆ ರಾಜ್ಯ ಖಾತೆ ಸಚಿವ ಸೋಮಣ್ಣ ಅವರಿಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಅಭಿನಂದನೆ ಸಲ್ಲಿಸಿದ್ದಾರೆ.

ನೈಋತ್ಯ ರೈಲ್ವೆ ಬೆಂಗಳೂರು ನಗರ ಸಂಪರ್ಕಿಸುವ ಎರಡು ಪ್ರಮುಖ ನಗರಗಳಾದ ಬೆಂಗಳೂರು–ಮೈಸೂರು ಮತ್ತು ಬೆಂಗಳೂರು–ತುಮಕೂರು ನಡುವೆ 4 ಹಳಿ ರೈಲು ಮಾರ್ಗ ನಿರ್ಮಾಣ ಮಾಡುವುದರಿಂದ ಈ ನಡುವೆ ಹೆಚ್ಚುತ್ತಿರುವ ರೈಲುಗಳ ಸಂಖ್ಯೆಯಿಂದ ಸುಗಮ ಸಂಚಾರ ಹಾಗೂ ರೈಲ್ವೆ ಆದಾಯವೂ ಹೆಚ್ಚಳವಾಗಲಿದೆ. ಇದರಿಂದ ಮೈಸೂರಿನ ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ಇಂದು ಜನಸಂಪರ್ಕ ಸಭೆ

ನಾಗಮಂಗಲ, ಜೂ.25– ನಾಗಮಂಗಲದ ವಿಭಾಗ ಕಚೇರಿಯಲ್ಲಿ ಬುಧವಾರ ಬೆಳಗ್ಗೆ 11 ಗಂಟೆಗೆ ಅಧೀಕ್ಷಕ ಇಂಜಿನಿಯರ್ (ವಿದ್ಯುತ್) ಅಧ್ಯಕ್ಷತೆಯಲ್ಲಿ ವಿದ್ಯುತ್ ಇಲಾಖೆಯ ಜನಸಂಪರ್ಕ ಸಭೆಯನ್ನು ನಡೆಸಲಾಗುವುದು. ನಾಗಮಂಗಲ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ನಾಗಮಂಗಲ ಶಾಖೆ, ದೇವಲಾಪುರ ಶಾಖೆ, ಚೀಣ್ಯ ಶಾಖೆ ಹಾಗೂ ಬೆಳ್ಳೂರು ಉಪವಿಭಾಗ ವ್ಯಾಪ್ತಿಯ ಬರುವ ಬೆಳ್ಳೂರು ಶಾಖೆ, ಬಿಂಡಿಗನವಿಲೆ ಶಾಖೆ ಹಾಗೂ ಕದಬಹಳ್ಳಿ ಶಾಖೆ ವ್ಯಾಪ್ತಿಗಳಿಗೆ ಸಂಬಂಧಪಟ್ಟ ಗ್ರಾಹಕರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿ ತಮ್ಮ ಕುಂದು ಕೊರತೆಗಳನ್ನು ಲಿಖಿತ ರೂಪದಲ್ಲಿ ನಿವೇದಿಸಿಕೊಂಡು ಬಗೆಹರಿಸಿಕೊಳ್ಳಲು ಕೋರಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕೆಡಿಪಿ ಸಭೆ ಮುಂದೂಡಿಕೆ

ಮೈಸೂರು, ಜೂ.25–ಜೂನ್ 26 ರಂದು ಬೆಳಗ್ಗೆ 11.00 ಗಂಟೆಗೆ ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಆದ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ 2024–25ನೇ ಸಾಲಿನ ತ್ರೈಮಾಸಿಕ ಕೆ.ಡಿ.ಪಿ ಸಭೆಯನ್ನು ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಜೂ. 25– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ. 27 ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.

ನಾಳೆ ಮೈಸೂರಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ



ಕೆಂಪೇಗೌಡ ಜಯಂತಿ ಪೋಸ್ಟರ್ ಅನ್ನು ಒಕ್ಕಲಿಗ ಸಮುದಾಯ ಮುಖಂಡರು ಬಿಡುಗಡೆ ಮಾಡಿದರು.

ಮೈಸೂರು,ಜೂ.25(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಜೂ.27 ರಂದು ಮಧ್ಯಾಹ್ನ 12ಕ್ಕೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ. ಮರಿಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಂಪೇಗೌಡ ಜಯಂತಿ ಅಂಗವಾಗಿ ಜೂ.27ರಂದು ಬೆಳಗ್ಗೆ 9 ಗಂಟೆಗೆ ಕಲಾಮಂದಿರದ ಮುಂಭಾಗದಲ್ಲಿ ಕೆಂಪೇಗೌಡರ ಭಾವಚಿತ್ರ ಹಾಗೂ ರಂಗೋಲಿ ಬಿಡಿಸುವ ಸ್ಪರ್ಧೆಗೆ ಚಾಲನೆ ನೀಡಲಾಗುತ್ತದೆ. ಬೆಳಗ್ಗೆ 10 ಗಂಟೆಗೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಕೆಂಪೇಗೌಡರ ಪುತ್ಥಳಿ, ಭಾವಚಿತ್ರದ ಮೆರವಣಿಗೆ ಆರಂಭವಾಗುತ್ತದೆ. ವಿವಿಧ ಸಾಂಸ್ಕೃತಿಕ ಕಲಾತಂಡಗಳು, ಸ್ತಬ್ಧಚಿತ್ರಗಳೊಂದಿಗೆ ಸಮುದಾಯದ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಮೆರವಣಿಗೆ ಕಲಾಮಂದಿರ ತಲುಪಲಿದೆ ಎಂದು ತಿಳಿಸಿದರು.

ಮಧ್ಯಾಹ್ನ 12 ಗಂಟೆಗೆ ಕಲಾಮಂದಿರದಲ್ಲಿ ನಡೆಯುವ ಸಭಾ ಕಾರ್ಯಕ್ರಮದ ಸಾನ್ನಿಧ್ಯವನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ಜಿ.ಟಿ. ದೇವೇಗೌಡ ಸೇರಿದಂತೆ ಸಮುದಾಯದ ಮುಖಂಡರು, ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಂಜುನಾಥ್, ರವಿ, ಕುಮಾರ್, ಸುಶೀಲಾ ನಂಜಪ್ಪ, ಶೇಖರ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಇಂಪೋರ್ಟೆಡ್, ಇಂಡಿಯನ್ ಕ್ರಾಕರಿ ವಸ್ತುಗಳ ಮಾರಾಟ



ಮೈಸೂರಿನ ಇನ್ಸ್‌ಟಿಟ್ಯೂಷನ್ಸ್ ಆಫ್ ಇಂಜಿನಿಯರ್ಸ್‌ನಲ್ಲಿ ಇಂಪೋರ್ಟೆಡ್ ಮತ್ತು ಇಂಡಿಯನ್ ಕ್ರಾಕರಿ ವಸ್ತುಗಳ ಸೇಲ್.

ಮೈಸೂರು, ಜೂ.25–ಮೈಸೂರು ನಗರದ ಇನ್ಸ್‌ಟಿಟ್ಯೂಷನ್ಸ್ ಆಫ್ ಇಂಜಿನಿಯರ್ಸ್‌ನಲ್ಲಿ ಇಂಪೋರ್ಟೆಡ್ ಮತ್ತು ಇಂಡಿಯನ್ ಕ್ರಾಕರಿ ವಸ್ತುಗಳ ಸೇಲ್ ಆರಂಭಗೊಂಡಿದೆ. ಈ ಮಾರಾಟದಲ್ಲಿ 50 ಸಾವಿರಕ್ಕೂ ಅಧಿಕ ಕಂಪನಿಗಳ ವೆರೈಟಿಗಳ ಕೋರೈಲ್, ಓಷಿಯನ್, ಲೂಮಿನಾರ್ಕ್, ಬ್ರಾಂಡ್ ಕಂಪನಿಗಳ ಕ್ರಾಕರಿ ವಸ್ತುಗಳು ಹೊಸ ಸ್ಟಾಕ್‌ನೊಂದಿಗೆ ಲಭ್ಯವಿದೆ.

ಶೇ.100 ಫುಡ್ ಗ್ರೇಡ್, ಶುದ್ಧವಾದ ಮೆಲಮೈನ್ ಕ್ರೋಕರಿ ಕ್ರಾಕರಿ ವಸ್ತುಗಳು, ಫ್ರಾನ್ಸ್, ಥೈಲಾಂಡ್, ಟರ್ಕಿ, ಜರ್ಮನಿ ದೇಶಗಳ ಗ್ಲಾಸ್‌ವೇರ್‌ಗಳು, ಫ್ಯಾನ್ಸಿ ಪ್ಲಾಸ್ಟಿಕ್ ವಸ್ತುಗಳು, ಉಡುಗೊರೆ ವಸ್ತುಗಳು, ಸೋಫಾ ಸೆಟ್ ಮತ್ತು ಡೈನಿಂಗ್ ಟೇಬಲ್ ಕವರ್‌ಗಳು, ಶಾಪಿಂಗ್ ಜ್ಯುವೆಲ್ಲರಿ ಬ್ಯಾಗ್ ಇತ್ಯಾದಿ.

ಶೇ.50ವರೆಗೆ ರಿಯಾಯಿತಿ ದರದಲ್ಲಿ ಅಪರೂಪದ ವಸ್ತುಗಳು ದೊರೆಯುತ್ತವೆ. ಮೈಸೂರಿನ ಗ್ರಾಹಕರಿಗೆ ಇದೊಂದು ಸುವರ್ಣಾವಕಾಶವಾಗಿದೆ. ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ ಮಾರಾಟವಿದ್ದು ಅದೂ ಕೆಲವೇ ದಿನಗಳು ಮಾತ್ರ.

ಸಂಸದರಿಂದ ಕನ್ನಡದಲ್ಲಿ ಪ್ರಮಾಣ ವಚನಕ್ಕೆ ಗುರುಪಾದಸ್ವಾಮಿ ಮೆಚ್ಚುಗೆ



ಗುರುಪಾದಸ್ವಾಮಿ

ಮೈಸೂರು, ಜೂ. 25– ಕರ್ನಾಟಕದಿಂದ ಸಂಸತ್ತಿಗೆ ಆಯ್ಕೆಯಾಗಿರುವ ಸಂಸದರೆಲ್ಲರೂ ಮಾತೃಭಾಷೆ ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸುತ್ತಿರುವುದು ಕನ್ನಡ ಭಾಷೆಯ ಅಭಿಮಾನ ಮತ್ತು ಗೌರವವನ್ನು ದಿಲ್ಲಿಯ ಸಂಸತ್ ಭವನದಲ್ಲಿ ಎತ್ತಿ ಹಿಡಿದಿದ್ದಾರೆ ಎಂದು ಬಿಜೆಪಿ ಮುಖಂಡ ಗುರುಪಾದಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ

ಮೈಸೂರು ಮತ್ತು ಕೊಡಗು ಲೋಕಸಭಾ ಸದಸ್ಯರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಸದ ಡಾ.ಮಂಜುನಾಥ್ ಹಾಗೂ ಕೇಂದ್ರ ಸಚಿವರಾದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ವಿ.ಸೋಮಣ್ಣ ಹೀಗೆ ಹಿರಿಯ ಸಂಸದರು ಕನ್ನಡದಲ್ಲೇ ಪ್ರಮಾಣ ವಚನವನ್ನು ಸ್ವೀಕರಿಸಿದ್ದು, ಹೆಮ್ಮೆ ತರುವ ವಿಚಾರ. ಕರ್ನಾಟಕದಿಂದ ಆಯ್ಕೆಯಾಗಿರುವ ಎಲ್ಲಾ ಸಂಸದರು ಕನ್ನಡ ಭಾಷೆ ಮತ್ತು ನಾಡಿನ ಅಭಿವೃದ್ಧಿಗೆ ಶ್ರಮಿಸುವಂತೆ ಮನವಿ ಮಾಡಿದ್ದಾರೆ.

ಚದುರಂಗ ತರಬೇತಿ ಶಿಬಿರ

ಮೈಸೂರು, ಜೂ. 25– ಮೈಸೂರು ಚೆಸ್ ಕ್ಲಬ್ ಸಂಸ್ಥೆಯು ಗೋಪಾಲಸ್ವಾಮಿ ಶಿಶು ವಿಹಾರ ಸಂಸ್ಥೆಯ ಸಹಯೋಗದೊಂದಿಗೆ ಪ್ರತಿದಿನ ಸಂಜೆ 5.30 ರಿಂದ 7 ಗಂಟೆಯವರೆಗೆ ಚದುರಂಗ ತರಬೇತಿ ಶಿಬಿರವನ್ನು ನಂಜುಮಳಿಗೆ ವೃತ್ತದಲ್ಲಿರುವ ಗೋಪಾಲಸ್ವಾಮಿ ಶಿಶು ವಿಹಾರ ಸಂಸ್ಥೆ ಆವರಣದಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9880547121 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಒಳಚರಂಡಿ ಕೊಳವೆ ಮಾರ್ಗ ನಿರ್ಮಾಣ ಕಾಮಗಾರಿಗೆ ಶಾಸಕರಿಂದ ಚಾಲನೆ



ಮೈಸೂರಿನ ಕೆಆರ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 51, 52, 54, 59, ಹಾಗೂ 64, 65ನೇ ವಾರ್ಡಿನ ವಿವಿಧೆಡೆ ಸುಮಾರು ಎಂಟು ಕೋಟಿ ರೂ.ಗಳ ವೆಚ್ಚದಲ್ಲಿ ಒಳಚರಂಡಿ ಕೊಳೆ ಮಾರ್ಗ ನಿರ್ಮಾಣ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರರಾದ ನಾಗರಾಜ್ ಸಹಾಯಕ ಅಭಿಯಂತರರಾದ ಧನುಷ್ ಬಿಜೆಪಿ ಮುಖಂಡರಾದ ಪಾರ್ಥಸಾರಥಿ, ಪ್ರದೀಪ್‌ಕುಮಾರ್, ಬಾಲಕೃಷ್ಣ ವಾರ್ಡ್ ಅಧ್ಯಕ್ಷ ಮಂಜು. ನಿಶಾಂತ್, ಕಿಶೋರ್, ಶಿವರಾಜ್, ವೆಂಕಟೇಶ್, ಸರ್ವಮಂಗಳ, ಕಾವೇರಿ, ರೇಖಾ ಮುಂತಾದವರು ಉಪಸ್ಥಿತರಿದ್ದರು.

ನಾಳೆಯಿಂದ ಕರ್ನಾಟಕ ವಾಗ್ಗೇಯ ವೈಭವ ಕಾರ್ಯಕ್ರಮ

ಮೈಸೂರು,ಜೂ.25–ಮೈಸೂರಿನ ಸಂಗೀತ ಸಭೆಗಳ ಒಕ್ಕೂಟ ಮತ್ತು ಗಾನಭಾರತೀ ಸಂಯುಕ್ತ ಆಶ್ರಯದಲ್ಲಿ ಜೂ.27ರಿಂದ 30ರವರೆಗೆ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿ ಕರ್ನಾಟಕ ವಾಗ್ಗೇಯ ವೈಭವ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಜೂ.27 (ಸಂಜೆ 6ಕ್ಕೆ): ವಾಗ್ಗೇಯಕಾರರು– ಸ್ವರಮೂರ್ತಿ ವಿ.ಎನ್.ರಾವ್, ವಿದ್ವಾನ್ ಮಾನಸ ನಯನ ಅವರಿಂದ ಗಾಯನ, ವಿದ್ವಾನ್ ಉದಯ ಕಿರಣ್–ಪಿಟೀಲು, ವಿದ್ವಾನ್ ಸುನಿಲ್ ಸುಬ್ರಮಣ್ಯ–ಮೃದಂಗ, ವಿದ್ವಾನ್ ವಿ.ಎಸ್.ರಮೇಶ್–ಮೋರ್ಚಿಂಗ್.

ಜೂ. 27 (ಸಂಜೆ 7.15ಕ್ಕೆ) : ವಾಗ್ಗೇಯಕಾರರು– ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಘುನಂದನರಾವ್–ಘಟಂ.



ಜೂ.28 (ಸಂಜೆ 6ಕ್ಕೆ): ವಾಗ್ಗೇಯಕಾರರು– ಪ್ರೊ. ರಾ.ವಿಶ್ವೇಶ್ವರನ್, ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ತುಮಕೂರು ಬಿ.ರವಿಶಂಕರ್–ಮೃದಂಗ.

ಜೂ.28 (ಸಂಜೆ 7.15ಕ್ಕೆ): ವಾಗ್ಗೇಯಕಾರರು– ಬಳ್ಳಾರಿ ಶೇಷಗಿರಿ ಆಚಾರ್, ವಿದುಷಿ ಹರ್ಷಿತಾ ಅವರಿಂದ ಗಾಯನ, ವಿದ್ವಾನ್ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ವಿದ್ವಾನ್ ಕೆ.ಎಂ. ಲಿಖಿತ್–ಮೋರ್ಚಿಂಗ್.

ಜೂ.29 (ಸಂಜೆ 6ಕ್ಕೆ): ವಾಗ್ಗೇಯಕಾರರು: ಸಿ. ರಂಗಯ್ಯ, ವಿದುಷಿ ಸುಕನ್ಯಾ ಪ್ರಭಾಕರ್ ಅವರ ಶಿಷ್ಯರಾದ ಅಂಜನಾ, ಶರಣ್ಯ ಜಿ.ಭಟ್, ನಿಸರ್ಗ ಶ್ರೀಧರ್, ಆರ್.ನಿತ್ಯಶ್ರೀ, ಅಕ್ಷತಾಭಟ್, ಸಭ್ಯತಾ, ಪೂರ್ವಿತಾ ಅವರಿಂದ ಗಾಯನ. ವಿದ್ವಾನ್ ಅಮೋಘ ನಡಾದುರ್–ಪಿಟೀಲು, ವಿದ್ವಾನ್ ಪಿ.ಎಸ್.ಶ್ರೀಧರ್, ವಿದ್ವಾನ್ ಅಜಯ್–ಘಟಂ.

ಜೂ. 29 (ಸಂಜೆ 7.15ಕ್ಕೆ): ವಾಗ್ಗೇಯಕಾರರು: ಚಿಕ್ಕರಾಮರಾಯರು, ವಿದುಷಿ ಪದ್ಮಾಗುರುದತ್ ಅವರ ಶಿಷ್ಯರಾದ ಅಂಬಿಕಾ ಗುರುದತ್, ಕೋವಿಲಡಿ ಅರ್ಚನಾ, ಚೈತ್ರ ರಘುನಂದನ್, ಶಶಿ ಶ್ರೀನಿವಾಸನ್ ಅವರಿಂದ ಗಾಯನ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಅಜಯ್–ಘಟಂ.

ಜೂ.30 (ಬೆಳಗ್ಗೆ 9.30): ವಾಗ್ಗೇಯಕಾರರು: ಬಿಡಾರಂ ಕೃಷ್ಣಪ್ಪ ವಿದ್ವಾನ್ ಎಸ್.ಶಂಕರ್ ಮತ್ತು ಅವರ ಶಿಷ್ಯರಾದ ಈಶ್ವರ್ ಅಯ್ಯರ್, ಅರವಿಂದ್ ಅವರಿಂದ ಗಾಯನ, ವಿದ್ವಾನ್ ಅಚ್ಯುತರಾವ್–ಪಿಟೀಲು, ವಿದ್ವಾನ್ ಬಿ.ಆರ್.ಶ್ರೀನಿವಾಸ್ –ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ.

ಜೂ. 30 (ಬೆಳಗ್ಗೆ 10.40): ವಾಗ್ಗೇಯಕಾರರು: ವೀಣಾ ಪದ್ಮನಾರಾಯಣರು, ವಿದ್ವಾನ್ ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಅವರಿಂದ ಗಾಯನ, ವಿದುಷಿ ವೀಣಾ ಸುರೇಶ್–ಪಿಟೀಲು, ವಿದ್ವಾನ್ ಜಿ.ಎಸ್.ರಾಮಾನುಜಂ –ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ.

ಜೂ.30 (ಬೆಳಗ್ಗೆ 11.50): ವಾಗ್ಗೇಯಕಾರರು: ಎಚ್.ಯೋಗಾನರಸಿಂಹಂ, ವಿದ್ವಾನ್ ವಿವೇಕ್ ಸದಾಶಿವಂ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ಕುಮಾರಸ್ವಾಮಿ–ಮೃದಂಗ, ವಿದ್ವಾನ್ ಎಂ.ಆರ್.ಮಂಜುನಾಥ್–ಘಟಂ. ಮಧ್ಯಾಹ್ನ 1 ಗಂಟೆಗೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಭಾಗವಹಿಸಲಿದ್ದಾರೆ.

ಹೊಸಹೊಳಲು ಸಹಕಾರ ಸಂಘದ ಶೇ.30 ತೆರಿಗೆ ರದ್ದು

ಕೇಂದ್ರ ಆದಾಯ ತೆರಿಗೆ ಕಮಿಷನರ್ ಆದೇಶ: ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ. ಅಶೋಕ್

ಆದೇಶದಿಂದ ರಾಜ್ಯದ 45 ಸಾವಿರ ಸಹಕಾರ ಸಂಘಗಳಿಗೆ ಅನುಕೂಲ



ಹೊಸಹೊಳಲು ಸಹಕಾರ ಸಂಘದ ಆವರಣದಲ್ಲಿ ನಡೆದ ಸಭೆಯಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್ ಮಾತನಾಡಿದರು.

ಕೆ.ಆರ್.ಪೇಟೆ, ಜೂ.25– ಸಹಕಾರ ಸಂಘಗಳು ಡಿಸಿಸಿ ಬ್ಯಾಂಕುಗಳಲ್ಲಿ ತೊಡಗಿಸಿರುವ ಠೇವಣಿ ಮೇಲೆ ಪಡೆಯುವ ಬಡ್ಡಿ ಮೇಲಿನ ತೆರಿಗೆ ರದ್ದುಪಡಿಸಿ ಮೊದಲಿನ ಆದಾಯ ತೆರಿಗೆ ಕಮೀಷನರ್ ಆದೇಶ ಹೊರಡಿಸಿದ್ದಾರೆ ಎಂದು ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಉಪಾಧ್ಯಕ್ಷ ಹೆಚ್.ಕೆ.ಅಶೋಕ್ ತಿಳಿಸಿದರು.

ತಾಲೂಕಿನ ಹೊಸಹೊಳಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹೊಸಹೊಳಲು ಸಹಕಾರ ಸಂಘ ಮಂಡ್ಯ ಡಿಸಿಸಿ ಬ್ಯಾಂಕ್‌ನಲ್ಲಿ ಇಟ್ಟಿದ್ದ ಠೇವಣಿಗೆ 2017-2018, 2018–2019ನೇ ಸಾಲಿನಲ್ಲಿ 25 ಲಕ್ಷ ರೂ. ಬಡ್ಡಿ ಗಳಿಸಿತ್ತು. ಆದರೆ ಡಿಸಿಸಿ ಬ್ಯಾಂಕ್ ಆರ್‌ಬಿಐ ಅನುಮತಿ ಪಡೆದು ಶಾಖೆ ಪ್ರಾರಂಭಿಸುವ ಕಾರಣ 25 ಲಕ್ಷ ರೂ.ಗಳ ಬಡ್ಡಿ ಮೇಲೆ 10 ಲಕ್ಷದ 8 ಸಾವಿರದ ನಾನೂರ ಎರಡು ರೂ. ತೆರಿಗೆ ಪಾವತಿಸುವಂತೆ ಆದಾಯ ತೆರಿಗೆ ಅಧಿಕಾರಿಗಳು 2021ರ ಫೆ.25ರಂದು ನೋಟಿಸ್ ಜಾರಿಗೊಳಿಸಿ ಆದೇಶ ಹೊರಡಿಸಿದ್ದರು.

ಈ ಆದೇಶದ ವಿರುದ್ಧ ಹೊಸಹೊಳಲು ಸಹಕಾರ ಸಂಘದ ತೆರಿಗೆ ಸಲಹೆಗಾರ, ಮಂಡ್ಯದ ಲೆಕ್ಕ ಪರಿಶೋಧಕ ಹೆಚ್.ಶಂಕರೇಗೌಡ ಅವರು 2021ರ ಮಾ.23ರಂದು ಅರ್ಜಿ ಸಲ್ಲಿಸಿ ಮಂಡ್ಯ ಡಿಸಿಸಿ ಬ್ಯಾಂಕ್ ಆರ್‌ಬಿಐ ಅನುಮತಿ ಪಡೆದು ಕಾರ್ಯ ನಿರ್ವಹಿಸುತ್ತಿದೆ. ಆದರೆ ವಾಣಿಜ್ಯ ಬ್ಯಾಂಕು ಆಗಿರುವುದಿಲ್ಲ. ಹೀಗಾಗಿ ಶೇ.30 ರಷ್ಟು ತೆರಿಗೆ ವಿಧಿಸಿರುವುದು ಸರಿಯಲ್ಲ ಎಂದು ಸೆಕ್ಷನ್ 80ಪಿ(2ಡಿ) ಪ್ರಕಾರ ತೆರಿಗೆ ವಿನಾಯಿತಿ ನೀಡುವಂತೆ ಆದಾಯ ತೆರಿಗೆ ಇಲಾಖೆಯ(ಎನ್‌ಎಫ್‌ಎಸಿ) ಕಮಿಷನರ್ ಅವರಿಗೆ ಮೇಲ್ಮನವಿ ಸಲ್ಲಿಸಿ ವಾದ ಮಂಡಿಸಿದ್ದರು. ಸದರಿ ಪ್ರಕರಣದ ವಾದ–ಪ್ರತಿವಾದ ಆಲಿಸಿದ ಆದಾಯ ತೆರಿಗೆ ಇಲಾಖೆಯ ಕಮಿಷನರ್ ಅವರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆ ಹೊರಡಿಸಿದ್ದ ಆದೇಶ ರದ್ದುಪಡಿಸಿ 2024ರ ಏ.29ರಂದು ಆದೇಶ ಹೊರಡಿಸಿದ್ದಾರೆ ಎಂದರು.

ಈ ಆದೇಶದಿಂದ ರಾಜ್ಯದ 45 ಸಾವಿರ ಸಹಕಾರ ಸಂಘಗಳು ಶೇ.30ರಷ್ಟು ಆದಾಯ ತೆರಿಗೆ ವಿನಾಯಿತಿ ಗಳಿಸಲು ಸಹಕಾರಿಯಾಗಿದೆ. ಇದು ನಮ್ಮ ಹೊಸಹೊಳಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಐತಿಹಾಸಿಕ ಗೆಲುವಾಗಿದೆ. ಇದಕ್ಕೆ ಕಾರಣರಾದ ಸಂಘದ ತೆರಿಗೆ ಸಲಹೆಗಾರ, ಲೆಕ್ಕ ಪರಿಶೋಧಕ ಹೆಚ್.ಶಂಕರೇಗೌಡ ಅವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಈ ವೇಳೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ, ಸಂಘದ ಅಧ್ಯಕ್ಷ ಸಚ್ಚಿನ್ ಬಾಬು, ಉಪಾಧ್ಯಕ್ಷ ಸಿದ್ದಯ್ಯ, ಸಂಘದ ಕಾರ್ಯದರ್ಶಿ ಯೋಗಣ್ಣ, ಸಂಘದ ನಿರ್ದೇಶಕರಾದ ಚಂದ್ರೇಗೌಡ, ಇಟ್ಟಿಗೆ ಬಾಲು, ಜಾನಕಮ್ಮ, ಸಂಘದ ನಿರ್ದೇಶಕರಾದ ಎಸ್.ಪ್ರಕಾಶ್, ಯೋಗೇಶ್ ಅಭಿಷೇಕ್, ನಾಗರಾಜು, ಕೃಷ್ಣಪ್ಪ, ತೇಜಾವತಿ ಸೇರಿದಂತೆ ಇತರರಿದ್ದರು.

ಜೂ.28, ನೇರ ಸಂದರ್ಶನ

ಮಂಡ್ಯ, ಜೂ.25– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ॥ ಮೆಡ್ ಪ್ಲಸ್, ಮೆ॥ ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಮೆ॥ ಅವಿನ್ಯಾ ಮ್ಯಾಚಿಂಗ್ ಪ್ರೈವೆಲಿಮಿಟೆಡ್, ಮೆ॥ ಇನೋವೇಟಿವ್ ಇನೋವ ಸಿಎನ್ ಸಿ ಪ್ರೈ ಲಿಮಿಟೆಡ್, ಮೆ॥ ಟೆಕ್ಸಲ್ ಇಂಜಿನಿಯರಿಂಗ್ ಮತ್ತು ಮೆ॥ ಪ್ರಗತಿ ಪ್ರಿಸಿಷನ್ ಸಹಯೋಗದಲ್ಲಿ ನೇರ ಸಂದರ್ಶನ ನಡೆಯಲಿದೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ ಹಾಗೂ ಯಾವುದೇ ಪದವಿಯಲ್ಲಿ ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಪುರುಷ ಮತ್ತು ಮಹಿಳೆಯರಿಗೆ ಜೂನ್ 28 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ತಮ್ಮ ಬಯೋಡೇಟಾದೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗತಕ್ಕದ್ದು. ಮಾಹಿತಿಗಾಗಿ ದೂ.ಸಂ: 08232–295124, 8660061488 ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಉದ್ಯೋಗಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗಿಲ್ಲ: ದ್ಯಾವಪ್ಪ



ಮಂಡ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸಿ.ಎಂ.ದ್ಯಾವಪ್ಪ ಮಾತನಾಡಿದರು.

ಮಂಡ್ಯ, ಜೂ.25– ಬಿಜೆಪಿ ಪಕ್ಷಕ್ಕೆ ಸಂವಿಧಾನದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸಿ.ಎಂ.ದ್ಯಾವಪ್ಪ ವಾಗ್ದಾಳಿ ನಡೆಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುರ್ತು ಪರಿಸ್ಥಿತಿ ವಿರೋಧಿಸುವ ನೆಪದಲ್ಲಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಭಾರತೀಯ ಜನತಾ ಪಕ್ಷಕ್ಕೆ ಸಂವಿಧಾನದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಹರಿಹಾಯ್ದರು.

ಬಿಜೆಪಿ ಸಂಸದರಾಗಿದ್ದ ಅನಂತ ಕುಮಾರ ಹೆಗಡೆ ಅವರು, ನಾವು ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ಹೇಳಿಕೆ ನೀಡಿರುವುದು ಇಡೀ ದೇಶವೇ ನೋಡಿದೆ. ಹಾಗಾಗಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್ ಅವರಿಗೆ ಸಂವಿಧಾನದ ಬಗ್ಗೆ ಮಾತನಾಡಲು ನಾಚಿಕೆ ಆಗಬೇಕು ಎಂದು ಕಿಡಿಕಾರಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಹೆಚ್.ವಿ.ನಾಗರಾಜು, ಎಂ.ಬಿ.ಶಕುಂತಲಾ, ಟಿ.ಟಿ.ಗುರುರಾಜ್, ಪಿ.ಎನ್.ಸಿದ್ದೇಗೌಡ, ಕೋಣನಹಳ್ಳಿ ಮಹೇಶ್, ಉಮ್ಮಡಹಳ್ಳಿ ನಾಗೇಶ್, ವೈ.ಎಂ.ನಿಂಗೇಗೌಡ ಉಪಸ್ಥಿತರಿದ್ದರು.

ಜು.21, ಅಖಿಲ ಭಾರತ ವೀರಶೈವ ಮಹಾಸಭಾಕ್ಕೆ ಚುನಾವಣೆ

3414 ಮಂದಿಗೆ ಮತದಾನದ ಹಕ್ಕು, ಓರ್ವ ಅಧ್ಯಕ್ಷ 21 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ



ಕೆ.ಆರ್.ಪೇಟೆ, ಜೂ.25– ಅಖಿಲ ಭಾರತ ವೀರಶೈವ ಮಹಾಸಭಾದ ಮುಂದಿನ 5 ವರ್ಷದ ಅವಧಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳಿಗೆ ಜುಲೈ 21 ರಂದು ಚುನಾವಣೆ ನಡೆಯಲಿದೆ.

ನಾಮಪತ್ರ ವನ್ನು ಜೂನ್ 27ರಿಂದ ಜುಲೈ 4ರ ಮಧ್ಯಾಹ್ನ 3ಗಂಟೆಯವರೆಗೆ ಸಲ್ಲಿಸಲು ಅವಕಾಶ ವಿದೆ. ನಾಮಪತ್ರಗಳನ್ನು ಅಕ್ಷರಭಂಡಾರ ಪಕ್ಕ ಇರುವ ತಾಲೂಕು ವೀರಶೈವ ಮಹಾಸಭಾ ಕಚೇರಿಯಲ್ಲಿ ಸ್ವೀಕರಿಸಲಾಗುವುದು ಎಂದು ಚುನಾವಣಾಧಿಕಾರಿ ಗಂಜಿಗೆರೆ ನಂದೀಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಜು.5ರಂದು ನಾಮಪತ್ರಗಳನ್ನು ಪರಿಶೀಲಿಸಲಾಗುವುದು. ಜು.8 ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರಗಳನ್ನು ಹಿಂಪಡೆಯಲು ಅವಕಾಶ ಇರುತ್ತದೆ. ಅಗತ್ಯ ಬಿದ್ದರೆ ಜು.21ರ ಭಾನುವಾರ ಕೆ.ಆರ್.ಪೇಟೆ ಪಟ್ಟಣದ ಕೆಪಿಎಸ್ ಶಾಲೆಯಲ್ಲಿ ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಗೆ ಚುನಾವಣೆ ನಡೆಯಲಿದೆ. ಮತ ಎಣಿಕೆಯು ಮತದಾನದ ನಂತರ ಆರಂಭಿಸಿ ಅಂದೇ ಫಲಿತಾಂಶ ಘೋಷಣೆ ಮಾಡಲಾಗುವುದು ಎಂದು ಚುನಾವಣಾಧಿಕಾರಿಗಳಾದ ವಕೀಲ ಗಂಜಿಗೆರೆ ನಂದೀಶ್ ಮಾಹಿತಿ ನೀಡಿದರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಓರ್ವ ಅಧ್ಯಕ್ಷರ ಸ್ಥಾನಕ್ಕೆ ಹಾಗೂ ನಿರ್ದೇಶಕರ ಒಟ್ಟು 21 ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ತಾಲೂಕಿನಲ್ಲಿ ಒಟ್ಟು 3414 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ. ಒಬ್ಬ ಮತದಾರ ಓರ್ವ ಅಧ್ಯಕ್ಷ ಸ್ಥಾನಕ್ಕೆ, 7 ಮಹಿಳಾ ನಿರ್ದೇಶಕರು, 13 ಪುರುಷ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧೆ ಮಾಡಿದ ಅಭ್ಯರ್ಥಿಗಳಿಗೆ ಮತದಾನ ಮಾಡಬಹುದಾಗಿರುತ್ತದೆ. ಒಬ್ಬ ಅಭ್ಯರ್ಥಿಯ ನಾಮಪತ್ರಕ್ಕೆ ಒಬ್ಬರು ಸೂಚಕರು, ಇನ್ನೊಬ್ಬರು ಅನುಮೋದಕರು ಸಹಿ ಮಾಡಬೇಕು. ಒಬ್ಬರಿಗೆ ಅನುಮೋದಕರಾಗಿ ಅಥವಾ ಸೂಚಕರಾಗಿ ಸಹಿ ಮಾಡಿದವರು ಬೇರೆ ಅಭ್ಯರ್ಥಿಗೆ ಸೂಚಕರಾಗಿ ಅಥವಾ ಅನುಮೋದಕರಾಗುವಂತಿಲ್ಲ. ಒಂದು ವೇಳೆ ಇಬ್ಬರಿಗೆ ಸೂಚಕರಾದರೆ ನಾಮಪತ್ರವನ್ನು ತಿರಸ್ಕರಿಸಲಾಗುತ್ತದೆ. ಒಬ್ಬ ಮತದಾರರು 7ಮಂದಿ ಮಹಿಳಾ ನಿರ್ದೇಶಕರಿಗೆ ಹಾಗೂ 13 ಮಂದಿಗೆ ಮತದಾನ ಮಾಡಬೇಕು. ಒಂದು ವೇಳೆ ಏಳಕ್ಕಿಂತ ಹೆಚ್ಚು ಮಹಿಳೆಯರಿಗೆ, ಹಾಗೂ 13ಕ್ಕಿಂತ ಹೆಚ್ಚು ಪುರುಷ ಅಭ್ಯರ್ಥಿಗೆ ಮತದಾನ ಮಾಡಿದರೆ ಆ ಮತವನ್ನು ಕುಲಗೆಟ್ಟ ಮತ ಎಂದು ಪರಿಗಣಿಸಲಾಗುವುದು ಎಂದು ಚುನಾವಣಾಧಿಕಾರಿ ನಂದೀಶ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಉಪ ಚುನಾವಣಾ ಸಹಾಯಕ ರಾದ ನಿವೃತ್ತ ಶಿಕ್ಷಕರಾದ ಸಿದ್ದಲಿಂಗಪ್ಪ ಹಾಗೂ ಮಲ್ಲೇಶ್ ಉಪಸ್ಥಿತರಿದ್ದರು.

'ಸರ್ಕಾರಿ ಸೇವೆ ಮನೆ ಬಾಗಿಲಿಗೆ' ಕಾರ್ಯಕ್ರಮ ಯಶಸ್ವಿ

ರಾಸುಗಳಿಗೆ ವಿಮೆ ಯೋಜನೆ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಹರ್ಷ



ಪಾಂಡವಪುರ ತಾಲೂಕಿನ ಕೆನ್ನಾಳು ಡೇರಿ ಆವರಣದಲ್ಲಿ ಆಯೋಜಿಸಿದ್ದ ರಾಸುಗಳ ವಿಮಾ ಯೋಜನೆ ಕಾರ್ಯಕ್ರಮವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು. ಕಾಡೇನಹಳ್ಳಿ ರಾಮಚಂದ್ರು, ಆರ್.ಪ್ರಸಾದ್, ಚೇತನ್‌ಕುಮಾರ್ ಇತರರು ಇದ್ದರು.

ಪಾಂಡವಪುರ, ಜೂ.25– ಕೆನ್ನಾಳು ಗ್ರಾಮದಲ್ಲಿ ನಡೆಯುತ್ತಿರುವ 'ಸರಕಾರಿ ಸೇವೆ ಮನೆ ಬಾಗಿಲಿಗೆ' ಕಾರ್ಯಕ್ರಮದಲ್ಲಿ ಸಾಕಷ್ಟು ಅನುಕೂಲವಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ತಾಲೂಕಿನ ಕೆನ್ನಾಳು ಹಾಲು ಉತ್ಪಾದಕರ ಸಹಕಾರ ಸಂಘ ಮತ್ತು ಮನ್‌ಮುಲ್ ವತಿಯಿಂದ ಮಂಗಳವಾರ ಆಯೋಜಿಸಿದ್ದ 2024–25 ಸಾಲಿನ ರಾಸುಗಳಿಗೆ ವಿಮೆ ಯೋಜನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸರಕಾರಿ ಸೇವೆಗಳು ನಿಮ್ಮನೆ ಬಾಗಿಲಿಗೆ ಕಾರ್ಯಕ್ರಮದ ಯಶಸ್ಸು ಕಂಡಿದೆ. ಕಾರ್ಯಕ್ರಮಕ್ಕೂ ಮೊದಲು ನಾನು ಸೇರಿದಂತೆ ಅಧಿಕಾರಿಗಳಲ್ಲೂ ಸಾಕಷ್ಟು ಗೊಂದಲ ಇತ್ತು. ಎಲ್ಲವನ್ನು ನಿಭಾಯಿಸಿಕೊಂಡು ಗ್ರಾಮಗಳ ಅಭಿವೃದ್ಧಿಗೆ ಯೋಜನೆ ರೂಪಿಸಿ ಸಕಾರಗೊಳಿಸಿದ್ದೇವೆ ಎಂಬ ಸಮಾಧಾನ ಇದೆ. ಕೆನ್ನಾಳು ಗ್ರಾಪಂನಲ್ಲಿ ಹದಿನೈದು ದಿನಗಳ ಕಾಲ ಕಾರ್ಯಕ್ರಮ ನಡೆದಿದೆ. ಮುಂದಿನ ಗ್ರಾಪಂಗಳಲ್ಲಿ ಇದೇ ಕಾರ್ಯಕ್ರಮವನ್ನು ಕೇವಲ 5 ದಿನಗಳಲ್ಲಿ ಮುಗಿಸಲಾಗುವುದು. ಅಂಗನವಾಡಿ ಕಾರ್ಯಕರ್ತರು ಕಾರ್ಯಕ್ರಮದ ಯಶಸ್ಸಿಗಾಗಿ ಪ್ರತಿ ಮನೆ ಮನೆಗಳಿಗೂ ತೆರಳಿ ಜನರಿಗೆ ಅಗತ್ಯವಿದ್ದ ಸರಕಾರಿ ಸೇವೆಗಳನ್ನು ಗುರುತಿಸಿ ಪಟ್ಟಿ ಮಾಡಿದರು. ಹೀಗಾಗಿ ಕಾರ್ಯಕ್ರಮ ಅಂದುಕೊಂಡಂತೆ ನಡೆಯಿತು ಎಂದರು.

ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಮಾತನಾಡಿ, ಇಡೀ ತಾಲೂಕು ಆಡಳಿತವನ್ನು ಕೆನ್ನಾಳು ಗ್ರಾಪಂಗೆ ವರ್ಗಾಯಿಸಿ ಸರಕಾರಿ ಸೇವೆಗಳನ್ನು ಮನೆ ಬಾಗಿಲಿಗೆ ತಲುಪಿಸುವಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಯಶಸ್ವಿಯಾಗಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿಯೇ ರಾಸುಗಳ ವಿಮೆ ಕಾರ್ಯಕ್ರಮ ನಡೆಯುತ್ತಿದ್ದು, ರಾಸುಗಳ ಮಾಲೀಕರು ತಪ್ಪದೇ ತಮ್ಮ ರಾಸುಗಳನ್ನು ವಿಮೆ ವ್ಯಾಪ್ತಿಗೆ ತರಬೇಕು ಎಂದರು.

ರೈತರು ಶೇ.50 ರಷ್ಟು ವಿಮೆ ಹಣ ಪಾವತಿಸಿದರೆ ಉಳಿದ ಹಣವನ್ನು ಒಕ್ಕೂಟ ಪಾವತಿಸುತ್ತದೆ. ರಾಸುಗಳಿಗೆ ಚರ್ಮ ಗಂಟು, ಉಣ್ಣು ಇತ್ಯಾದಿ ವೈರಸ್ ರೋಗಗಳಿಂದ ಆಕಸ್ಮಿಕವಾಗಿ ಮೃತಪಟ್ಟರೆ 40 ರಿಂದ 60 ಸಾವಿರದವರೆಗೆ ವಿಮೆ ಹಣ ಪಾವತಿಯಾಗುತ್ತದೆ. ವಿಮೆ ಮಾಡಿಸದಿದ್ದರೆ ಬಿಡಿಗಾಸು ಸಿಗುವುದಿಲ್ಲ. ಹೀಗಾಗಿ ಗ್ರಾಮದಲ್ಲಿರುವ 600 ರಾಸುಗಳ ಮಾಲೀಕರು ತಪ್ಪದೇ ವಿಮೆ ಮಾಡಿಸಬೇಕು, ರಾಸುವಿಮೆ ಮಾಡಿಸಲು ಡೇರಿ ವತಿಯಿಂದಲೂ ಆರ್ಥಿಕ ನೆರವು ನೀಡಿ ಅನುಕೂಲ ಮಾಡಿಕೊಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರದಲ್ಲಿ ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗವಿಸ್ತರಣಾಧಿಕಾರಿ ಜಗದೀಶ್, ಪಶು ಇಲಾಖೆ ಮುಖ್ಯ ವೈದ್ಯಾಧಿಕಾರಿ ಹಿಮಾಚಲ್, ಡಾ.ಸಂತೋಷ್, ಡಾ॥ ಕಾವ್ಯ, ಡೇರಿ ಅಧ್ಯಕ್ಷ ಚೇತನ್‌ಕುಮಾರ್, ಉಪಾಧ್ಯಕ್ಷೆ ಭಾಗ್ಯಮ್ಮ ಸೇರಿದಂತೆ ಡೇರಿ ಆಡಳಿತ ಮಂಡಳಿ ನಿರ್ದೇಶಕರು ಮುಖಂಡರು ಇದ್ದರು.

ತಾಯಿ, ಮಗು ನಾಪತ್ತೆ

ಮಂಡ್ಯ, ಜೂ.25– ಮಂಡ್ಯ ತಾಲೂಕು ದುದ್ದ ಹೋಬಳಿ ಗಿಡದಾಸನಕೊಪ್ಪಲು ಗ್ರಾಮದ ಹೇಮ (21) ಹಾಗೂ ಮಗಳು ಪ್ರೇಕ್ಷಿತ (2) ಇಬ್ಬರು ಕಾಣೆಯಾಗಿದ್ದಾರೆ ಎಂದು ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ಮಹಿಳೆಯು 5 ಅಡಿ ಎತ್ತರ, ಕೋಲುಮುಖ, ಎಣ್ಣೆಗೆಂಪು ಮೈ ಬಣ್ಣ ಸಾಧಾರಣ ಮೈಕಟ್ಟು ಹೊಂದಿದ್ದು ಕಾಣೆಯಾದ ದಿನ ಕೆಂಪು ಬಣ್ಣದ ನೈಟಿ ತೊಟ್ಟಿರುತ್ತಾರೆ. ಹಾಗೂ ಕಾಣೆಯಾದ ಮಗುವು 2.5 ಅಡಿ ಎತ್ತರ, ಕೋಲುಮುಖ, ಎಣ್ಣೆಗೆಂಪು ಮೈ ಬಣ್ಣ ಸಾಧಾರಣ ಮೈಕಟ್ಟು ಹೊಂದಿದ್ದು ಕಾಣೆಯಾದ ದಿನ ಕೆಂಪು ಬಣ್ಣದ ನಿಕ್ಕರ್, ನೀಲಿ ಬಣ್ಣದ ಟಿ ಶರ್ಟ್ ಧರಿಸಿರುತ್ತಾರೆ. ಇವರ ಸುಳಿವು ಸಿಕ್ಕಲ್ಲಿ ದೂ.ಸಂ: 9480804849/ 9480804831 ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲೆ ಶಿವಳ್ಳಿ ಪೊಲೀಸ್ ಠಾಣೆಯ ಸಬ್ ಇನ್ಸ್ ಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಯೊಬ್ಬರಿಗೂ ಕಾನೂನು ಅರಿವು ಅವಶ್ಯಕ



ಚಾಮರಾಜನಗರ ಕಸಾಪ ಕಚೇರಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಆಯೋಜಿಸಿದ್ದ ಕಾನೂನು ಅರಿವು ತರಬೇತಿ ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಶಿವಲೀಲಾ ಉದ್ಘಾಟಿಸಿದರು.

ಚಾಮರಾಜನಗರ, ಜೂ.25–ಪ್ರತಿಯೊಬ್ಬರಿಗೂ ಕಾನೂನು ಅರಿವು ಅವಶ್ಯಕವಾಗಿದೆ ಎಂದು ಮಾನಸ–ಸಿಕ್ರಂ ಸಂಸ್ಥೆ ರಾಜ್ಯ ಸಂಯೋಜಕ ಭೀಮಪ್ಪ ಹೇಳಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಮಾನಸ–ಸಿಕ್ರಂ ಸಂಸ್ಥೆ, ಜಿಲ್ಲಾ ಸಂಪನ್ಮೂಲ ಕೇಂದ್ರದ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಬದುಕುವ ಹಕ್ಕು, ರಕ್ಷಣೆ, ಭಾಗವಹಿಸುವಿಕೆ, ವಿಕಾಸ ಹಕ್ಕುಗಳಿವೆ. 6 ರಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ, 18 ವರ್ಷದೊಳಗಿನ ಮಕ್ಕಳು ದುಡಿಯುವುದು ಬಾಲಕಾರ್ಮಿಕರು, ಮಕ್ಕಳು ವಿವಾಹ ಬಾಲ್ಯವಿವಾಹವಾಗಿರುತ್ತದೆ. ಅಂತಹ ಮಕ್ಕಳ ಮೇಲೆ ದೌರ್ಜನ್ಯ, ಲೈಂಗಿಕ ಕಿರುಕುಳ ಪೋಕ್ಸೋ ಕಾಯ್ದೆಗೆ ಒಳಪಡುತ್ತದೆ. ಆಗಾಗಿ ಅಂಗನವಾಡಿ ಕಾರ್ಯಕರ್ತೆಯರು ಕಾನೂನು ಅರಿವಿದ್ದರೆ ಮಕ್ಕಳಿಗೆ ನ್ಯಾಯ ಕೊಡಿಸಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಸಿಕ್ರಂ ಸಂಸ್ಥೆಯ ಜಿಲ್ಲಾ ಸಂಯೋಜಕ ಕೆ.ಸಿ. ರೇವಣ್ಣ ಮಾತನಾಡಿ, ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಹಕ್ಕು, ಕರ್ತವ್ಯಗಳಿವೆ. ಅವುಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ. ನಮ್ಮ ಸಂಸ್ಥೆಯಿಂದ ವಿದ್ಯಾರ್ಥಿಗಳು, ಮಹಿಳೆ ಯರು, ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ಕಾನೂನು ಅರಿವು ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದರು.

ಜನಶಕ್ತಿ ಹೋರಾಟ ಸಮಿತಿ ಅಧ್ಯಕ್ಷ ರಾಮಸಮುದ್ರ ಸುರೇಶ್, ವಕೀಲ ಚಂದ್ರಕಾಂತ್ ಮಹಿಳೆಯರ ಹಕ್ಕು ಕುರಿತು ತಿಳಿಸಿದರು. ವಕೀಲ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಶಿವಲೀಲಾ, ಅಂಗನವಾಡಿ ಕಾರ್ಯಕರ್ತೆ ಪದ್ಮಜ ಹಾಜರಿದ್ದರು.

ನಾಲೆಗಳಿಗೆ ನೀರು ಹರಿಸಲು ಆಗ್ರಹಿಸಿ ಪ್ರತಿಭಟನೆ

ಹೆದ್ದಾರಿಯಲ್ಲಿ ಮಾನವ ಸರಪಳಿ ರಚಿಸಿ ಸರ್ಕಾರದ ವಿರುದ್ಧ ಆಕ್ರೋಶ



ಶ್ರೀರಂಗಪಟ್ಟಣ, ಜೂ.25– ಕೆಆರ್‌ಎಸ್ ಅಚ್ಚುಕಟ್ಟು ವ್ಯಾಪ್ತಿಯ ಎಲ್ಲಾ ನಾಲೆಗಳಿಗೂ ತಕ್ಷಣವೇ ನೀರು ಹರಿಸುವಂತೆ ಒತ್ತಾಯಿಸಿ ಭೂಮಿ ತಾಯಿ ಹೋರಾಟ ಸಮಿತಿ ಸದಸ್ಯರು ಹೆದ್ದಾರಿಯಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಮೈಸೂರು–ಬೆಂಗಳೂರು ಹೆದ್ದಾರಿಯ ಕುವೆಂಪು ವೃತ್ತದಲ್ಲಿ ರೈತ ಮುಖಂಡ ಕೆ.ಎಸ್. ನಂಜುಂಡೇಗೌಡ ನೇತೃತ್ವದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಹಾಗೂ ರೈತರು ಜಮಾಯಿಸಿ, ಸರ್ಕಾರ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ, ನೀರಾವರಿ ಸಚಿವರು ಸೇರಿದಂತೆ ಸರ್ಕಾರದ ಮಂತ್ರಿಗಳು ಮಂಡ್ಯ ಜಿಲ್ಲೆಯ ರೈತರಿಗೆ ನೀರು ಹರಿಸದೆ ಬರಡು ಭೂಮಿ ಮಾಡಿ ಸೇಡಿನ ರಾಜಕಾರಣ ಮಾಡಿ, ಇನ್ನಷ್ಟು ಸಂಕಷ್ಟಕ್ಕೆ ಸಿಲುಕುವಂತೆ ಮಾಡುತ್ತಿದ್ದಾರೆ. ಜಲಾಶಯದಲ್ಲಿ ಇರುವ ನೀರನ್ನು ತಮಿಳುನಾಡು ಹಿತ ಕಾಯಲು ನದಿ ಮೂಲಕ ನೀರು ಹರಿಸಿದ ಸರ್ಕಾರ, ಮಂಡ್ಯ ಜಿಲ್ಲೆಯ ರೈತರಿಗೆ ಬೇಸಿಗೆ ಹಂಗಾಮು ಬೆಳೆಗೂ ನೀರು ಕೊಡದೆ, ಇದೀಗ ಮುಂಗಾರು ಬೆಳೆಗೆ ಬಿತ್ತನೆ ಬೀಜ ಹಾಕಿ ಬೆಳೆ ಬೆಳೆಯಲು ರೈತರನ್ನು ದಿಕ್ಕೆಡಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಪ್ರಸ್ತುತ ಕೆಆರ್‌ಎಸ್ ಅಣೆಕಟ್ಟೆಯಲ್ಲಿ 87 ಅಡಿ ನೀರಿದ್ದು, ನಾಲೆಗಳಿಗೆ ನೀರು ಹರಿಸಿ, ಮುಂಗಾರು ಬೆಳೆಗೆ ಬಿತ್ತನೆ ಬೀಜ ಹಾಕಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ಸರ್ಕಾರವನ್ನು ಒತ್ತಾಯಿಸಿದರು.

ಈ ವೇಳೆ ಸಮಿತಿ ಮುಖಂಡರಾದ ಜಯರಾಮು, ಮಹದೇವಪುರ ಕೃಷ್ಣ, ಮಹದೇವು, ಶ್ರೀನಿವಾಸ್, ಮಂಜುನಾಥ್ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

ಇಂಧನ ಬೆಲೆ ಇಳಿಕೆಗೆ ಆಗ್ರಹಿಸಿ ಪ್ರತಿಭಟನೆ



ಕೊಳ್ಳೇಗಾಲದಲ್ಲಿ ಇಂಧನ ಬೆಲೆ ಏರಿಕೆ ಖಂಡಿಸಿ ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ಕೊಳ್ಳೇಗಾಲ, ಜೂ.25–ಪೆಟ್ರೋಲ್, ಡೀಸೆಲ್ ಬೆಲೆ ಇಳಿಸುವಂತೆ ಆಗ್ರಹಿಸಿ ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಆರ್‌ಎಂಸಿ ಆವರಣದಲ್ಲಿ ಸಮಾವೇಶಗೊಂಡ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ), ರಾಜ್ಯ ರೈತ ಸಂಘ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು, ಪ್ರವಾಸಿ ಮಂದಿರ ರಸ್ತೆ, ತಾಲೂಕು ಪಂಚಾಯಿತಿ ವೃತ್ತ, ಎಂಜಿಎಸ್‌ವಿ ಜೂನಿಯರ್ ಕಾಲೇಜು, ಬಸ್ ನಿಲ್ದಾಣ, ಡಾ.ವಿಷ್ಣುವರ್ಧನ್, ಡಾ.ರಾಜ್‌ಕುಮಾರ್ ರಸ್ತೆ, ಮಸೀದಿ ವೃತ್ತ, ಅಂಬೇಡ್ಕರ್ ರಸ್ತೆ ಮಾರ್ಗವಾಗಿ ಮೆರವಣಿಗೆ ನಡೆಸಿ, ಉಪವಿಭಾಗಾಧಿಕಾರಿ ಮಹೇಶ್ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರ ಇಂಧನ ಬೆಲೆ ಏರಿಕೆ ಮಾಡಿರುವುದು ಖಂಡನೀಯ. ಇದರಿಂದ ರೈತರು, ಬಡವರಿಗೆ ಬಹಳ ತೊಂದರೆಯಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಯಾವುದೇ ವಸ್ತುಗಳ ಬೆಲೆ ಏರಿಕೆ ಮಾಡಬೇಕಾದರೆ ಕುಲಂಕಶವಾಗಿ ಯೋಚಿಸಬೇಕು. ಇಲ್ಲದಿದ್ದರೆ ಜನರ ಮೇಲೆ ಪರಿಣಾಮ ಬೀರಲಿದೆ. ಕೂಡಲೇ ರಾಜ್ಯ ಸರ್ಕಾರ ಇಂಧನ ಬೆಲೆ ಇಳಿಸದಿದ್ದರೆ, ರಾಜ್ಯಾದ್ಯಂತ ಬೃಹತ್ ಹೋರಾಟ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಇದೇ ವೇಳೆ ತಳ್ಳುಗಾಡಿಯ ಮೇಲೆ ದ್ವಿಚಕ್ರ ವಾಹನ ಇಟ್ಟು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮೆರವಣಿಗೆಯಲ್ಲಿ 20ಕ್ಕೂ ಹೆಚ್ಚು ಆಟೋಗಳು ಹಾಗೂ ಟ್ರ್ಯಾಕ್ಟರ್‌ಗಳು ಪಾಲ್ಗೊಂಡಿದ್ದವು. ಕರವೇ ಜಿಲ್ಲಾಧ್ಯಕ್ಷ ಆರ್. ಮೋಹನ್, ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷ, ಗೌರವಾಧ್ಯಕ್ಷ ಕೃಷ್ಣನಾಯಕ, ಉಪಾಧ್ಯಕ್ಷರಾದ ನಾಗೇಶ್ ನಾಯಕ, ವೆಂಕಟೇಶ್, ಜಿಲ್ಲಾ ಸಂಚಾಲಕ ನಿಸಾರ್ ಅಹಮ್ಮದ್, ಮಣಿ ನಾಯಕ, ಸ್ವಾಮಿ ನಾಯಕ, ತಾಲೂಕು ಅಧ್ಯಕ್ಷ ಅಯಾಜ್ ಕನ್ನಡಿಗ, ಗೌರವಾಧ್ಯಕ್ಷ ಬಿಸಲಯ್, ಕೊಳ್ಳೇಗಾಲ ಟೌನ್ ಅಧ್ಯಕ್ಷ ಜಗದೀಶ್ ಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ ಉಗನಿಯ ಕುಮಾರ್, ರೈತ ಸಂಘದ ಮುಖಂಡ ಅಣಗಳ್ಳಿ ಬಸವರಾಜು, ಕಾರ್ಯದರ್ಶಿ ರಾಮಕೃಷ್ಣ, ದಶರಥ, ವೀರಭದ್ರಸ್ವಾಮಿ, ಅಶ್ವಥ್ ಮತ್ತಿತರರು ಭಾಗವಹಿಸಿದ್ದರು.

ಕಬ್ಬಾಳಯ್ಯ ನಿಧನ



ಭಾರತೀನಗರ, ಜೂ.25– ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಕಬ್ಬಾಳಯ್ಯ (90) ವಯೋಸಹಜ ಖಾಯಿಲೆಯಿಂದ ಮಂಗಳವಾರ ನಿಧನರಾದರು. ಮೃತರು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಕಬ್ಬಾಳಯ್ಯ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ 3 ಗಂಟೆಯಲ್ಲಿ ಜರುಗಿತು.

ಯುವ ಸಮಾಲೋಚಕರು, ಪರಿವರ್ತಕರು ಬೇಕು

ಮಂಡ್ಯ, ಜೂ.25– ಯುವ ಜನತೆಗೆ ಸಂಬಂಧಿಸಿದ 'ಯುವ ಸ್ಪಂದನ' ಕಾರ್ಯಕ್ರಮದಡಿಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಪ್ರತಿ ಜಿಲ್ಲೆಗಳಲ್ಲಿ ಯುವಸ್ಪಂದನ ಕೇಂದ್ರ ಸ್ಥಾಪನೆಯಾಗಿದ್ದು ಇದರನ್ವಯ ಮಂಡ್ಯ ಜಿಲ್ಲೆಯಲ್ಲಿ ಒಬ್ಬರು ಯುವ ಸಮಾಲೋಚಕರು ಮತ್ತು ಜಿಲ್ಲೆಯ ತಾಲೂಕುಗಳಲ್ಲಿ ಒಬ್ಬರು ಯುವ ಪರಿವರ್ತಕರ ಅಗತ್ಯವಿದ್ದು, ಪ್ರಸ್ತುತ ಜಿಲ್ಲೆಯ ಮುಖ್ಯ ಕಚೇರಿ ಮಂಡ್ಯ, ಮಳವಳ್ಳಿ, ಮತ್ತು ಶ್ರೀರಂಗಪಟ್ಟಣ ತಾಲೂಕುಗಳಲ್ಲಿ ಖಾಲಿ ಇರುವ ಯುವ ಸಮಾಲೋಚಕರು ಮತ್ತು ಯುವ ಪರಿವರ್ತಕರನ್ನು ಆಯ್ಕೆ ಮಾಡಬೇಕಿದೆ.

ಕನಿಷ್ಠ 21 ರಿಂದ 35 ವರ್ಷದೊಳಗಿರುವ ಹಾಗೂ ಸಮಾಜ ಕಾರ್ಯ, ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಪದವೀಧರರಾಗಿರುವ ಆಸಕ್ತಿಯುಳ್ಳ ಮೇಲ್ಕಂಡ ತಾಲೂಕುಗಳ ಯುವಜನರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ತಾಲೂಕಿನ ಖಾಯಂ ನಿವಾಸಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳನ್ನು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಬೆಂಗಳೂರು ಇಲ್ಲಿ ತರಬೇತಿ ನೀಡಿ ಯುವ ಪರಿವರ್ತಕರೆಂದು ಪ್ರಮಾಣೀಕರಿಸಲಾಗುತ್ತದೆ. ಬೆಂಗಳೂರು ನಿಮ್ಹಾನ್ಸ್ ಎಪಿಡೀಮಿಯಾಲಜಿ ವಿಭಾಗ ಆರೋಗ್ಯ ಸಂಸ್ಥೆ ಯುವ ಪರಿವರ್ತಕರು ಜನ ಇವರಿಂದ ಅನುಷ್ಠಾನಗೊಳಿಸುತ್ತಿರುವ ಹಾಗೂ ರಾಜ್ಯ ಸರ್ಕಾರದ ಅನುದಾನಿತ ಯೋಜನೆಯಾದ ಯುವ ಜನರ ಮಾನಸಿಕ ಆರೋಗ್ಯ ಪೂರಕ ಸೇವೆಗಳ ಸಮಗ್ರ ಅಭಿವೃದ್ಧಿ ಮತ್ತು ಅನುಷ್ಠಾನ ಯೋಜನೆ ಅಡಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಆಸಕ್ತರು ಜೂನ್ 28 ರೊಳಗೆ ಮಂಡ್ಯ ಜಿಲ್ಲೆ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9008896074/9632104204 ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಜು.21ರಂದು ವೀರಶೈವ ಮಹಾಸಭಾ ಚಾಮರಾಜನಗರ ತಾಲೂಕು ಘಟಕದ ಚುನಾವಣೆ

ಚಾಮರಾಜನಗರ, ಜೂ.25–ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಪದಾಧಿಕಾರಿಗಳು ಹಾಗೂ ನಿರ್ದೇಶಕರ ಆಯ್ಕೆ ಚುನಾವಣೆ ಜು.21ರಂದು ನಡೆಯಲಿದೆ.

ಈಗಾಗಲೇ ವೇಳಾಪಟ್ಟಿ ಪ್ರಕಟಿಸಿದ್ದು, ಜೂ.27ರಿಂದ ನಾಮಪತ್ರ ಸ್ವೀಕರಿಸುವ ಕಾರ್ಯ ಆರಂಭವಾಗಲಿದೆ. ಜು.4ರಂದು ನಾಮಪತ್ರ ಸಲ್ಲಿಕೆಗೆ ದಿನ. 5ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, 8ರಂದು ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನ. ಜು.21ರಂದು ಬೆಳಗ್ಗೆ 8 ರಿಂದ ಸಂಜೆ 5 ಗಂಟೆ ವರೆಗೆ ನಗರದ ಸತ್ತಿ ರಸ್ತೆಯಲ್ಲಿ ಮಹಾಸಭಾ ಕಚೇರಿಯಲ್ಲಿ ಮತದಾನ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆಯಲಿದೆ ಎಂದು ಮಹಾಸಭಾ ತಾಲೂಕು ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 26 ಜೂನ್ 2024

ದೇಶ - ವಿದೇಶ


ಕ್ರಿಕೆಟ್‌ನ 'ಡಕ್ವರ್ತ್ ಲೂಯಿಸ್' ನಿಯಮದ ಸಹ ರೂವಾರಿ ಫ್ರಾಂಕ್ ಡಕ್ವರ್ತ್ ನಿಧನ



ಲಂಡನ್: ಕ್ರಿಕೆಟ್ ಪಂದ್ಯಗಳಲ್ಲಿ ಮಳೆಯಿಂದ ಪಂದ್ಯ ತಡವಾದರೆ ಅಳವಡಿಸುವ ಡಕ್ವರ್ತ್ ಲೂಯಿಸ್ ನಿಯಮದ ಅನ್ವೇಷಕರಲ್ಲಿ ಒಬ್ಬರಾದ ಫ್ರಾಂಕ್ ಡಕ್ವರ್ತ್ (84) ನಿಧನರಾಗಿದ್ದಾರೆ. ಮಳೆ ಪೀಡಿತ ಕ್ರಿಕೆಟ್ ಪಂದ್ಯಗಳ ಫಲಿತಾಂಶಗಳನ್ನು ನಿರ್ಧರಿಸಲು ಡಕ್ವರ್ತ್ ಮತ್ತು ಸಹ ಸಂಖ್ಯಾಶಾಸ್ತ್ರಜ್ಞ ಟೋನಿ ಲೂಯಿಸ್ ರೂಪಿಸಿದ ಡಕ್ವರ್ತ್–ಲೂಯಿಸ್ ಪ್ರಸ್ತುತ ಚಾಲ್ತಿಯಲ್ಲಿದೆ. ಐಸಿಸಿ ಅದಕ್ಕೆ ಮಾನ್ಯತೆ ನೀಡಿದೆ. ಈ ವಿಧಾನವನ್ನು ಮೊದಲ ಬಾರಿಗೆ 1997ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಬಳಸಲಾಯಿತು. 2001ರಲ್ಲಿ ಮಳೆಯಿಂದ ಮೊಟಕುಗೊಂಡ ಪಂದ್ಯಗಳಲ್ಲಿ ಪರಿಷ್ಕೃತ ಗುರಿ ನಿಗದಿಪಡಿಸುವ ಪ್ರಮಾಣಿತ ವಿಧಾನವಾಗಿ ಐಸಿಸಿ ಡಿಎಲ್ಎಸ್‌ನ್ನು ಅಳವಡಿಸಿಕೊಂಡಿತು. ಡಕ್ವರ್ತ್ ಮತ್ತು ಲೂಯಿಸ್ ಅವರ ನಿವೃತ್ತಿಯ ನಂತರ ಈ ವಿಧಾನವನ್ನು ಡಕ್ವರ್ತ್–ಲೂಯಿಸ್–ಸ್ಟರ್ನ್ ವಿಧಾನ ಎಂದು ಮರುನಾಮಕರಣ ಮಾಡಲಾಯಿತು. ಪ್ರಸ್ತುತ ಬಳಕೆಯಲ್ಲಿರುವ ನಿಯಮಕ್ಕೆ ಆಸ್ಟ್ರೇಲಿಯಾದ ಸಂಖ್ಯಾಶಾಸ್ತ್ರಜ್ಞ ಸ್ಟೀವನ್ ಸ್ಟರ್ನ್ ಕೆಲವು ಮಾರ್ಪಾಡುಗಳನ್ನು ಮಾಡಿದ್ದಾರೆ. ಡಕ್ವರ್ತ್ ಮತ್ತು ಲೂಯಿಸ್ ಇಬ್ಬರಿಗೂ ಜೂನ್ 2010ರಲ್ಲಿ ಎಂಬಿಇ (ಮೆಂಬರ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್) ಗೌರವ ನೀಡಲಾಗಿದೆ.

ಹಜ್ ಯಾತ್ರೆಯಲ್ಲಿ ರಣಬಿಸಿಲಿಗೆ 98 ಭಾರತೀಯರು ಸೇರಿ 1,301ಕ್ಕೂ ಹೆಚ್ಚು ಯಾತ್ರಾರ್ಥಿಗಳ ಸಾವು

ಕೈರೋ(ಸೌದಿ ಅರೇಬಿಯಾ):ವಾರ್ಷಿಕ ಹಜ್ ಯಾತ್ರೆಗೆ ರಣಬಿಸಿಲು ಕಂಟಕವಾಗಿ ಕಾಡುತ್ತಿದೆ. 5 ದಿನಗಳ ಯಾತ್ರೆಗೆ ತೆರಳಿದ ಭಾರತದ 98 ಮಂದಿ ಸೇರಿ ಈವರೆಗೂ 1,301ಕ್ಕೂ ಅಧಿಕ ಯಾತ್ರಾರ್ಥಿಗಳು ಸಾವಿಗೀಡಾಗಿದ್ದಾರೆ. ಇದರಲ್ಲಿ ಶೇಕಡಾ 83ರಷ್ಟು ಜನರು ಅನಧಿಕೃತ (ನೋಂದಣಿ ಮಾಡಿಕೊಳ್ಳದವರು) ಯಾತ್ರಿಗಳು ಎಂದು ಅಲ್ಲಿನ ಸರ್ಕಾರ ತಿಳಿಸಿದೆ. ಇಸ್ಲಾಮಿಕ್ ರಾಷ್ಟ್ರದಲ್ಲಿ ತಾಪಮಾನ ವಿಪರೀತವಾಗಿದ್ದು, ನೋಂದಣಿ ಮಾಡಿಕೊಳ್ಳದ ಕಾರಣ ಯಾವುದೇ ಸೂರು ಮತ್ತು ಮೂಲಸೌಕರ್ಯ ವ್ಯವಸ್ಥೆ ಇಲ್ಲದೇ ಯಾತ್ರೆಗೆ ಬಂದವರು ಬಿಸಿಲ ತಾಪಕ್ಕೆ ಸಾವಿಗೀಡಾಗಿದ್ದಾರೆ. ಇವರಿಗೆ ನೆರವು ನೀಡಿದ 16 ಟ್ರಾವೆಲ್ ಏಜೆನ್ಸಿಗಳ ಪರವಾನಗಿ ರದ್ದು ಮಾಡಲಾಗಿದೆ ಎಂದು ಸೌದಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 95 ಯಾತ್ರಿಗಳು ತೀವ್ರ ಅಸ್ವಸ್ಥವಾಗಿದ್ದು, ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮೃತಪಟ್ಟ ಯಾತ್ರಿಗಳ ಪೈಕಿ 31 ಮಂದಿ ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಉಳಿದವರು ಅನಧಿಕೃತವಾಗಿ ಯಾತ್ರೆಗೆ ಬಂದು ಸಾವಿಗೀಡಾಗಿದ್ದಾರೆ. ಎಲ್ಲರನ್ನೂ ಮೆಕ್ಕಾದಲ್ಲಿ ಸಮಾಧಿ ಮಾಡಲಾಗಿದೆ. ಮೃತ ಯಾತ್ರಿಕರ ಬಳಿ ಯಾವುದೇ ದಾಖಲೆಗಳಿಲ್ಲದೆ ಗುರುತು ಪತ್ತೆ ಕಷ್ಟವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಹಜ್ ಯಾತ್ರೆ ದುರಂತಗಳು: 2015ರಲ್ಲಿ ಕಾಲ್ತುಳಿತ ಉಂಟಾಗಿ 2,400ಕ್ಕೂ ಹೆಚ್ಚು ಯಾತ್ರಾರ್ಥಿಗಳು ಸಾವನ್ನಪ್ಪಿದ್ದರು. ಇದು ಯಾತ್ರೆಯಲ್ಲೇ ಅತಿ ಭೀಕರ ಘಟನೆಯಾಗಿದೆ. ಅದೇ ವರ್ಷ ಮೆಕ್ಕಾದ ಮಸೀದಿಯಲ್ಲಿ ಕ್ರೇನ್ ಕುಸಿದು 111 ಜನರು ಸಾವನ್ನಪ್ಪಿದರು. ಇದಲ್ಲದೇ, 1990ರಲ್ಲಿ 1,426 ಮಂದಿ ಯಾತ್ರೆಯ ವೇಳೆ ಅಸುನೀಗಿದ್ದರು. ಇದು ಎರಡನೇ ಅತ್ಯಂತ ದಾರುಣ ಘಟನೆಯಾಗಿದೆ.

ಅದಾನಿ ಗ್ರೂಪ್‌ನಿಂದ ವಿವಿಧ ವಲಯಗಳಲ್ಲಿ ಬರೋಬ್ಬರಿ 1.3 ಲಕ್ಷ ಕೋಟಿ ಹೂಡಿಕೆ



ಅಹಮದಾಬಾದ್:ಪ್ರಸಕ್ತ ಹಣಕಾಸು ವರ್ಷದಲ್ಲಿ ಏಷ್ಯಾದ ನಂ. 1 ಶ್ರೀಮಂತ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ತನ್ನದೇ ಒಡೆತನದ ಹಲವು ಕಂಪನಿಗಳಲ್ಲಿ 1.3 ಲಕ್ಷ ಕೋಟಿ ರೂ. ಹೂಡಿಕೆ ಮಾಡಲು ಯೋಜಿಸಿದೆ. ಹೂಡಿಕೆಯು ಬಹುಕ್ಷೇತ್ರಗಳಲ್ಲಿ ನಡೆಯಲಿದ್ದು, ಇಂಧನ, ವಿಮಾನ ನಿಲ್ದಾಣ, ಸರಕು ಸಾಗಣೆ, ಸಿಮೆಂಟ್, ಮಾಧ್ಯಮ ಕ್ಷೇತ್ರಗಳ ತನಕ ಹರಡಿಕೊಂಡಿದೆ.

ಈ ಕುರಿತು ಮಂಗಳವಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅದಾನಿ ಗ್ರೂಪ್‌ನ ಮುಖ್ಯ ಹಣಕಾಸು ಅಧಿಕಾರಿ ಜುಗೆಶಿಂದರ್ ಸಿಂಗ್, ಶೇ.70ರಷ್ಟು ಬಂಡವಾಳವನ್ನು ಅಂತರಿಕ ಸಂಪನ್ಮೂಲದಿಂದಲೇ ಕ್ರೋಢೀಕರಿಸಲಾಗುತ್ತದೆ. ಉಳಿದ ಮೊತ್ತವನ್ನು ಸಾಲದ ಮೂಲಕ ಪಡೆಯಲಾಗುವುದು ಎಂದು ತಿಳಿಸಿದ್ದಾರೆ. ಕಂಪನಿ ಈ ವರ್ಷ 3 ರಿಂದ 4 ಬಿಲಿಯನ್ ಡಾಲರ್ (ಸುಮಾರು 25,000 ದಿಂದ 33,400 ಕೋಟಿ ರೂ.) ಸಾಲವನ್ನು ಮರುಪಾವತಿಸುವ ಗುರಿ ಹೊಂದಿದೆ. ಹೆಚ್ಚುವರಿಯಾಗಿ 1 ಬಿಲಿಯನ್ ಡಾಲರ್ (ಸುಮಾರು 8,300 ಕೋಟಿ ರೂ.) ಸಾಲ ಪಡೆಯಲು ನಿರ್ಧರಿಸಲಾಗಿದೆ. ಜತೆಗೆ ಹೊಸ ಹೂಡಿಕೆದಾರರನ್ನು ಸೆಳೆಯುವ ಮೂಲಕ 2 ರಿಂದ 2.5 ಬಿಲಿಯನ್ ಡಾಲರ್ (16,700 ರಿಂದ 20,000 ಕೋಟಿ ರೂ.) ಬಂಡವಾಳ ಹೆಚ್ಚಿಸುವ ಯೋಜನೆ ಇದೆ ಎಂದು ಸಿಂಗ್ ತಿಳಿಸಿದ್ದಾರೆ.

96,000 ಕೋಟಿ ಮೌಲ್ಯದ 5ಜಿ ತರಂಗಗಳ ಹರಾಜಲ್ಲಿ ಜಿಯೋ, ಏರ್‌ಟೆಲ್, ವಿ ನಡುವೆ ಭಾರೀ ಪೈಪೋಟಿ



ನವದೆಹಲಿ, ಜೂ.25–ಭಾರತೀಯ ದೂರ ಸಂಪರ್ಕ ಇಲಾಖೆ ಮಂಗಳವಾರ ಎಂಟು ಬ್ಯಾಂಡ್‌ಗಳಲ್ಲಿ 96,000 ಕೋಟಿ ರೂ. ಹೆಚ್ಚು ಮೌಲ್ಯದ ತರಂಗಗಳ ಹರಾಜು ಆರಂಭಿಸಿದೆ. ಈ ತರಂಗಗಳಿಗೆ ಟೆಲಿಕಾಂ ಸೇವಾ ಪೂರೈಕೆದಾರ ಮತ್ತು ನಿರ್ವಾಹಕ ಕಂಪನಿಗಳಾದ ರಿಲಯನ್ಸ್ ಜಿಯೋ, ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ನಡುವೆ ಭಾರೀ ಸ್ಪರ್ಧೆ ಏರ್ಪಡಲಿದೆ ಎಂದು ನಿರೀಕ್ಷಿಸಲಾಗಿದೆ. ಈ ಪ್ರಮುಖ ರೇಡಿಯೋ ತರಂಗಗಳನ್ನು 5ಜಿ ಮೊಬೈಲ್ ಸೇವೆಗಳಿಗಾಗಿ ಪಡೆದುಕೊಳ್ಳಲು ಈ ಕಂಪನಿಗಳು ತೀವ್ರ ಪೈಪೋಟಿ ನಡೆಸಲಿವೆ. ಈ ಹಿಂದೆ ಕೊನೆಯ ತರಂಗಗಳ ಹರಾಜನ್ನು ಆಗಸ್ಟ್ 2022ರಲ್ಲಿ ನಡೆಸಲಾಗಿತ್ತು. ಇದರಲ್ಲಿ ಮೊದಲ ಬಾರಿಗೆ 5ಜಿ ಸೇವೆಗಳಿಗೆ ರೇಡಿಯೋ ತರಂಗಗಳನ್ನು ಸೇರಿಸಲಾಗಿದೆ.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಡೇವಿಡ್ ವಾರ್ನರ್!



ಸಿಡ್ನಿ: ಆಸ್ಟ್ರೇಲಿಯಾದ ಅನುಭವಿ ಆರಂಭಿಕ ಬ್ಯಾಟ್ಸ್‌ಮನ್ ಡೇವಿಡ್ ವಾರ್ನರ್ 2024ರ ಟಿ20 ವಿಶ್ವಕಪ್ ಟೂರ್ನಿಯಿಂದ ಆಸ್ಟ್ರೇಲಿಯಾ ಹೊರಬಂದ ಬೆನ್ನಲ್ಲೇ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಆಸ್ಟ್ರೇಲಿಯನ್ ಕ್ರಿಕೆಟ್‌ನ ಇತಿಹಾಸದಲ್ಲಿ ವಾರ್ನರ್ ಎಲ್ಲಾ ಸ್ವರೂಪಗಳಲ್ಲಿ ಅತ್ಯುತ್ತಮ ಆಟಗಾರರಲ್ಲಿ ಒಬ್ಬರಾಗಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದರು. ಒಂದು ದಶಕದ ಸುಪ್ರಸಿದ್ಧ ವೃತ್ತಿಜೀವನದ ಅಂತ್ಯದ ನಂತರ ಈ ನಿರ್ಧಾರವು ಬಂದಿದೆ. 37 ವರ್ಷದ ವಾರ್ನರ್ ಅವರು ಜನವರಿ 1, 2024ರಂದು ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಅಲ್ಲದೆ ಜನವರಿ 6 ರಂದು ಕೊನೆಯ ಪಂದ್ಯವಾಡುವ ಮೂಲಕ ಟೆಸ್ಟ್ ಕ್ರಿಕೆಟ್‌ಗೂ ಗುಡ್ ಬೈ ಹೇಳಿದ್ದರು. ಆದರೆ, ವಾರ್ನರ್ ಅವರ ಕೊನೆಯ ಪಂದ್ಯವು ಯೋಜಿಸಿದಂತೆ ನಡೆಯಲಿಲ್ಲ, ಏಕೆಂದರೆ ಆರು ಎಸೆತಗಳಲ್ಲಿ ಕೇವಲ ಆರು ರನ್ ಗಳಿಸಿ ಅರ್ಷದೀಪ್ ಸಿಂಗ್ ಬೌಲಿಂಗ್‌ನಲ್ಲಿ ಔಟಾದರು. ಈ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ಭಾರತ ಸೋಲಿಸಿತ್ತು. ಡೇವಿಡ್ ವಾರ್ನರ್ ಆಸ್ಟ್ರೇಲಿಯಾ ಪರ 112 ಟೆಸ್ಟ್ ಪಂದ್ಯಗಳನ್ನಾಡಿದ್ದಾರೆ. 205 ಇನಿಂಗ್ಸ್ ಆಡಿರುವ ಅವರು 3 ದ್ವಿಶತಕ, 26 ಶತಕ ಹಾಗೂ 37 ಅರ್ಧಶತಕಗಳೊಂದಿಗೆ ಒಟ್ಟು 8786 ರನ್ ಕಲೆಹಾಕಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಆಸೀಸ್ ಪರ 161 ಪಂದ್ಯಗಳಲ್ಲಿ 159 ಇನಿಂಗ್ಸ್ ಆಡಿರುವ ಡೇವಿಡ್ ವಾರ್ನರ್ 6,932 ರನ್ ಕಲೆಹಾಕಿದ್ದಾರೆ. ಈ ವೇಳೆ 22 ಭರ್ಜರಿ ಶತಕ ಹಾಗೂ 33 ಅರ್ಧಶತಕಗಳನ್ನು ಬಾರಿಸಿದ್ದಾರೆ. ಆಸ್ಟ್ರೇಲಿಯಾ ಪರ 110 ಟಿ20 ಪಂದ್ಯಗಳನ್ನಾಡಿರುವ ಡೇವಿಡ್ ವಾರ್ನರ್ 3,277 ರನ್ ಕಲೆಹಾಕಿದ್ದಾರೆ. ಟಿ20 ಒಂದು ಶತಕ ಹಾಗೂ 28 ಅರ್ಧಶತಕಗಳನ್ನು ಬಾರಿಸಿದ್ದಾರೆ.

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ತನಿಖೆಗೆ ಪೋಷಕರು ಸಮಾಧಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿಯಾಗಿ ಜೀವನೋಪಾಯಕ್ಕೆ ಸೊಸೆಗೆ ಉದ್ಯೋಗಕ್ಕೆ ಮನವಿ

ಬೆಂಗಳೂರು, ಜೂ.25(ಕೆಎಂಶಿ)– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸರ ತನಿಖೆ ಬಗ್ಗೆ ಪೋಷಕರು ಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಬುಧವಾರ ಭೇಟಿ ಮಾಡಿದ ರೇಣುಕಾಸ್ವಾಮಿ ತಂದೆ–ತಾಯಿ, ಇದುವರೆಗೂ ಚಿತ್ರ ನಟ ದರ್ಶನ್ ಮತ್ತು ಇತರರ ವಿರುದ್ಧ ತನಿಖಾಧಿಕಾರಿಗಳು ಒಳ್ಳೆ ಕೆಲಸ ಮಾಡುತ್ತಿದ್ದು, ನಮಗೆ ನ್ಯಾಯ ದೊರಕುವ ವಿಶ್ವಾಸವಿದೆ ಎಂದಿದ್ದಾರೆ.

ಮಗನ ಹತ್ಯೆ ನಂತರ ಕುಟುಂಬ ನಿರ್ವಹಣೆ ಕಷ್ಟಕರವಾಗಿದ್ದು, ಸೊಸೆಗೆ ಸರ್ಕಾರಿ ಉದ್ಯೋಗ ಕೊಡಿಸುವಂತೆ ಮಾಡಿದ ಮನವಿಗೆ ಮುಖ್ಯಮಂತ್ರಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಮಂಗಳವಾರ ರೇಣುಕಾ ಸ್ವಾಮಿ ತಂದೆ–ತಾಯಿ, ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ವೇಳೆ ಸಚಿವ ಚೆಲುವರಾಯ ಸ್ವಾಮಿ ಇದ್ದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಚಿತ್ರ ನಟ ದರ್ಶನ್ ಅವರನ್ನು ರಕ್ಷಿಸಲು ಸಂಪುಟದ ಹಿರಿಯ ಸಹೋದ್ಯೋಗಿ ಸೇರಿದಂತೆ ಕಾಂಗ್ರೆಸ್ ಮತ್ತು ಬಿಜೆಪಿಯ ಐವರು ಶಾಸಕರು ಪ್ರಯತ್ನ ಮಾಡಿದರೂ ಅದಕ್ಕೆ ಸರ್ಕಾರ ತಲೆಬಾಗಲಿಲ್ಲ.

ಚಿತ್ರನಟ ದರ್ಶನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಒತ್ತಡ ತೀವ್ರವಾಗುತ್ತಿರುವುದನ್ನು ಗಮನಿಸಿದ ಮುಖ್ಯಮಂತ್ರಿ ಅವರು, ಸಚಿವ ಸಂಪುಟ ಸಭೆಯಲ್ಲೇ ಈ ವಿಚಾರದ ಬಗ್ಗೆ ಯಾರೂ ಬಹಿರಂಗ ಹೇಳಿಕೆ ನೀಡಬೇಡಿ ಮತ್ತು ಆತನ ಪರ ವಕಾಲತ್ತು ವಹಿಸಿ ಮಾತನಾಡಬೇಡಿ ಎಂದು ಕಿವಿಮಾತು ಹೇಳಿದ್ದರು.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ದರ್ಶನ್, ಆತನ ಗೆಳತಿ ಪವಿತ್ರಾ ಗೌಡ ಸೇರಿದಂತೆ 17 ಆರೋಪಿಗಳು ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ.

ಇದೆಲ್ಲವನ್ನು ಗಮನಿಸಿ ರೇಣುಕಾಸ್ವಾಮಿ ಕುಟುಂಬದವರು ಕೃತಜ್ಞತೆ ಸಲ್ಲಿಸಿ, ಸೊಸೆಗೆ ಸರ್ಕಾರಿ ಕೆಲಸ ನೀಡುವಂತೆ ಅವರು ಮನವಿ ಮಾಡಿದ್ದಾರೆ.

ಡೆಂಗ್ಯೂ ಗಂಭೀರವಾಗಿ ಪರಿಗಣಿಸಿ: ಸಿಎಂ ಸೂಚನೆ

ಅಗತ್ಯ ಚಿಕಿತ್ಸೆ, ಚುಚ್ಚುಮದ್ದು, ಪ್ಲೇಟ್‌ಲೆಟ್ಸ್‌ಗಳ ಸಂಗ್ರಹಕ್ಕೆ ಸಲಹೆ



ರಾಜ್ಯದಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ಪ್ರಕರಣಗಳ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

ಬೆಂಗಳೂರು, ಜೂ.25– ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರು ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳ ಸಭೆ ನಡೆಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿದರು.

ರಾಜ್ಯದಲ್ಲಿ ನಿನ್ನೆಯವರೆಗೆ 5374 ಪ್ರಕರಣ ವರದಿಯಾಗಿದ್ದು, ಐವರು ಸಾವಿಗೀಡಾಗಿದ್ದಾರೆ. ಭಾರತ ಸರ್ಕಾರವು ಡೆಂಗ್ಯೂ ಪ್ರಕರಣಗಳಲ್ಲಿ ಮರಣ ಪ್ರಮಾಣ ಶೇ.0.5 ಅನ್ನು ಮೀರುವಂತಿಲ್ಲ ಎಂದು ನಿಗದಿಪಡಿಸಿದೆ ರಾಜ್ಯದಲ್ಲಿ ಮರಣ ಪ್ರಮಾಣ ಇನ್ನೂ ಕಡಿಮೆ ಪ್ರಮಾಣದಲ್ಲಿದೆ. ಅಂದರೆ, ಸಾವಿನ ಪ್ರಕರಣ ಪ್ರಮಾಣ 0.09% ಇದೆ.

ಬೆಂಗಳೂರು, ಚಿಕ್ಕಮಗಳೂರು, ಮೈಸೂರು, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಕಾಣಿಸಿಕೊಂಡಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1230 ಪ್ರಕರಣಗಳು ವರದಿಯಾಗಿವೆ.

ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ನಿಯಂತ್ರಣಕ್ಕೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯಗಳು, ಔಷಧಿಗಳು ಲಭ್ಯವಿರುವುದನ್ನು ಖಾತರಿಪಡಿಸಲು ಸೂಚಿಸಲಾಗಿದೆ. ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮತ್ತಿತರ ಸ್ವಯಂ ಸೇವಕರ ನೆರವಿನೊಂದಿಗೆ ಮನೆ ಮನೆ ಸಮೀಕ್ಷೆ ನಡೆಸಿ ಅರಿವು ಮೂಡಿಸಲು ಸೂಚಿಸಲಾಗಿದೆ. ಪ್ರತಿ ಶುಕ್ರವಾರ ರೋಗ ಹರಡುವ ಮೂಲ ಪತ್ತೆ ಮತ್ತು ನಾಶ ವಿಶೇಷ ಅಭಿಯಾನ ಮಾಡಲಾಗುವುದು. ಪ್ರತಿ ವಾರ ಬಿಬಿಎಂಪಿ, ನಗರಾಭಿವೃದ್ಧಿ ಮತ್ತು ಆರೋಗ್ಯ ಇಲಾಖೆಯವರು ಜಂಟಿಯಾಗಿ ಡೆಂಗ್ಯೂ ನಿಯಂತ್ರಣ ಕುರಿತು ಪರಿಶೀಲನೆ ನಡೆಸಬೇಕು ಎಂದು ಸಿಎಂ ಸೂಚನೆ ನೀಡಿದ್ದಾರೆ.

ಸ್ವಚ್ಛತೆ ಹಾಗೂ ನೀರು ನಿಲ್ಲದಂತೆ ನಗರ ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಡೆಂಗ್ಯೂ ನಿಯಂತ್ರಣಕ್ಕೆ ಸಾರ್ವಜನಿಕರು ಸಹಕಾರ ನೀಡುವುದು ಅತೀ ಅಗತ್ಯ. ಡೆಂಗ್ಯೂ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯಿಂದ ಹರಡುತ್ತದೆ. ಇದರ ಲಾರ್ವಾ ಮತ್ತು ಮೊಟ್ಟೆಗಳನ್ನು ಮೂಲದಲ್ಲಿಯೇ ನಾಶ ಮಾಡಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕವಾಗಿ ಅರಿವು ಮೂಡಿಸಲು ಸೂಚಿಸಲಾಗಿದೆ.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.25–ಶೈಕ್ಷಣಿಕ ಸಾಲಿನಲ್ಲಿ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸಂಸ್ಥೆಯಲ್ಲಿ ಬಾಕಿ ಉಳಿದಿರುವ ಸೀಟುಗಳಿಗೆ ಸಂಬಂಧಪಟ್ಟಂತೆ ಪ್ರಥಮ ಬ್ಯಾಚುಲಾರ್ ಆಫ್ ವಿಜುಯಲ್ ಆರ್ಟ್ಸ್ (ಬಿ.ವಿ.ಎ) ದೃಶ್ಯಕಲೆ ಪ್ರವೇಶಾತಿಗಾಗಿ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 8 ಅಂತಿಮ ದಿನ. ಆಸಕ್ತರು ಅರ್ಜಿಯನ್ನು ನಗದು ರೂಪದಲ್ಲಿ ರೂ.200 ಪಾವತಿಸಿ ಕಚೇರಿಯಲ್ಲಿ ಅರ್ಜಿ ಪಡೆಯಬಹುದು. ಜು.9ರಂದು ಬೆಳಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ ಇರುತ್ತದೆ. ಸಂದರ್ಶನಕ್ಕೆ ಹಾಜರಾಗುವ ಆಸಕ್ತರು ಮೂಲ ದಾಖಲಾತಿ ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ ಹಾಜರಾಗುವುದು. ಹೆಚ್ಚಿನ ಮಾಹಿತಿಗಾಗಿ http://www.mysore.nic.in ಮತ್ತು http://www.cavamysore.Karnataka.gov.in ವೆಬ್‌ಸೈಟ್ ಮೂಲಕ ಅಥವಾ ಕಚೇರಿಯ ದೂ.ಸಂ: 0821–2438931 ಅನ್ನು ಸಂಪರ್ಕಿಸಬಹುದು.

ಸಿಪೆಟ್‌ನಲ್ಲಿ ಉದ್ಯೋಗ ಭರವಸೆ ಕೋರ್ಸ್‌ಗಳು

ಮೈಸೂರು, ಜೂ.25(ಎಂಟಿವೈ)– ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಕೇಂದ್ರೀಯ ಪೆಟ್ರೋ ಕೆಮಿಕಲ್ಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಶಿಕ್ಷಣ ಕೌಶಲ ಮತ್ತು ತಾಂತ್ರಿಕ ತರಬೇತಿ ಕೇಂದ್ರ (ಸಿಪೆಟ್)ದಲ್ಲಿ ಉದ್ಯೋಗ ಭರವಸೆಯುಳ್ಳ ವಿವಿಧ ಕೋರ್ಸ್ ಆರಂಭಿಸಲಾಗಿದೆ ಎಂದು ಸಂಸ್ಥೆಯ ಸಹಾಯಕ ತಾಂತ್ರಿಕ ಅಧಿಕಾರಿ ಲಕ್ಷ್ಮಣ್ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಪೆಟ್ ಸಂಸ್ಥೆಯಲ್ಲಿ ಡಿಪ್ಲೊಮಾ ಇನ್ ಪ್ಲಾಸ್ಟಿಕ್ ಮೌಲ್ಡ್ ಟೆಕ್ನಾಲಜಿ, ಡಿಪ್ಲೊಮಾ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ, ಮೈಸೂರು ವಿವಿ ಸಹಯೋಗದಲ್ಲಿ ಪಾಲಿಮರ್ ಸೈನ್ಸ್ ಸಂಸ್ಥೆಯಲ್ಲಿ ಎಂಎಸ್ಸಿ ಕೋರ್ಸ್ ಆರಂಭಿಸುತ್ತಿದ್ದು ಅರ್ಹರು ಅರ್ಜಿ ಸಲ್ಲಿಸಬಹುದು ಎಂದರು.



ಸಿಪೆಟ್‌ನ ಸಹಾಯಕ ತಾಂತ್ರಿಕ ಅಧಿಕಾರಿ ಲಕ್ಷ್ಮಣ್ ಮಾತನಾಡಿದರು.

ಡಿಪ್ಲೊಮಾ ಕೋರ್ಸ್‌ಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿಜ್ಞಾನ ವಿಷಯದಲ್ಲಿ ತೇರ್ಗಡೆ ಹೊಂದಿದವರು ಪ್ರವೇಶ ಪಡೆಯಬಹುದು. ಇದೇ ರೀತಿ ಎಂಎಸ್ಸಿ ಕೋರ್ಸ್‌ಗೆ ರಸಾಯನಶಾಸ್ತ್ರ ವಿಷಯದಲ್ಲಿ ಪದವಿ ಪಡೆದಿರುವವರು ಪ್ರವೇಶಕ್ಕೆ ಅರ್ಹರಾಗಿದ್ದಾರೆ. ಸರ್ಕಾರ ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಿರುವುದರಿಂದ ನಮ್ಮ ಸಂಸ್ಥೆಯಲ್ಲಿ ಬಳಸುವ ಎಲ್ಲ ಸಾಧನಗಳಲ್ಲಿಯೂ ಪ್ಲಾಸ್ಟಿಕ್ ಅನಿವಾರ್ಯವಾಗಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಉತ್ತಮ ಉದ್ಯೋಗಾವಕಾಶವಿದೆ. ಮಾಹಿತಿಗೆ ದೂ. 0821–2510618 ಅನ್ನು ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ಸಹಾಯಕ ತಾಂತ್ರಿಕ ಅಧಿಕಾರಿ ಶ್ರೀನಾಥ್ ಉಪಸ್ಥಿತರಿದ್ದರು.

ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ



ಫೈಲ್ ಚಿತ್ರ

ಮೈಸೂರು, ಜೂ.25–ಜೂನ್ 25 ರಿಂದ ಜುಲೈ 1ರವರೆಗೆ ಮೈಸೂರು ನಗರದ 6 ಕೇಂದ್ರಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ–2ರ ಮೌಲ್ಯಮಾಪನ ಕಾರ್ಯ ನಡೆಯಲಿದ್ದು, ಮೌಲ್ಯಮಾಪನದ ಪಾವಿತ್ರ್ಯತೆಯನ್ನು ಕಾಪಾಡುವ ಸಲುವಾಗಿ, ಮೌಲ್ಯಮಾಪನ ಕೇಂದ್ರಗಳಿಗೆ ಅನಗತ್ಯ ವ್ಯಕ್ತಿಗಳು ಮತ್ತು ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಬೇಕಾಗಿರುವುದರಿಂದ ಮೌಲ್ಯಮಾಪನ ಕಾರ್ಯ ಮುಗಿಯುವವರೆಗೂ ಮೌಲ್ಯಮಾಪನ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶು ವಿಹಾರ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ, ಕುವೆಂಪುನಗರದ ಎ.ಸಿ ರಸ್ತೆಯ ಕಾವೇರಿ ಪದವಿ ಪೂರ್ವ ಕಾಲೇಜ್, ಕುವೆಂಪುನಗರದ ಜ್ಞಾನಗಂಗಾ ಪ್ರೌಢಶಾಲೆ, ಲಷ್ಕರ್ ಮೊಹಲ್ಲಾದ ಗುಡ್ ಶೆಫರ್ಡ್ ಕಾನ್ವೆಂಟ್ ಪ್ರೌಢಶಾಲೆ, ಎನ್.ಆರ್.ಮೊಹಲ್ಲಾದ ಸೇಂಟ್ ಫಿಲೋಮಿನಾ ಪ್ರೌಢಶಾಲೆ ಹಾಗೂ ವಿ.ವಿ. ಮೊಹಲ್ಲಾದ ನಿರ್ಮಲ ಪ್ರೌಢಶಾಲೆಗಳಲ್ಲಿ ಮೌಲ್ಯ ಮಾಪನ ನಡೆಯಲಿದೆ.

ಮೌಲ್ಯಮಾಪನ ನಡೆಯುವ ಆರು ಕೇಂದ್ರಗಳ ಸುತ್ತಲೂ ಜೂನ್ 25ರಿಂದ 30ರವರೆಗೆ ಬೆಳಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಕಲಂ 144ರ ಅನ್ವಯ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಹಾಗೂ ಜುಲೈ 1ರಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆಯನ್ನು ಘೋಷಿಸಲಾಗಿರುವುದರಿಂದ, ಕೇಂದ್ರಗಳ ಬಳಿ ಮೌಲ್ಯಮಾಪನಕ್ಕೆ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರು ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿಶೋರ ಕಾರ್ಮಿಕ ಮಕ್ಕಳ ರಕ್ಷಣಾ ಅಭಿಯಾನ: ಐವರ ರಕ್ಷಣೆ



ಐವರು ಕಿಶೋರ ಕಾರ್ಮಿಕ ಮಕ್ಕಳನ್ನು ರಕ್ಷಿಸಿ ಕೆಲಸದಿಂದ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜೂ.25–ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ–2024ರ ಅಂಗವಾಗಿ ಜೂ.1ರಿಂದ 30ರವರೆಗೆ ಜಿಲ್ಲೆಯಾದ್ಯಂತ ಜಿಲ್ಲಾ ಕಾರ್ಯಪಡೆ ಹಾಗೂ ಅಧಿಕಾರಿಗಳನ್ನೊಳಗೊಂಡಂತೆ ಒಂದು ತಿಂಗಳ ಬಾಲ/, ಕಿಶೋರ ಕಾರ್ಮಿಕ ರಕ್ಷಣಾ ಅಭಿಯಾನ ಹಮ್ಮಿಕೊಂಡಿದ್ದು, ಅದರಂತೆ ಮೈಸೂರು ನಗರ ಪ್ರದೇಶದಲ್ಲಿ ಜೂನ್ 24ರಂದು ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣಾ ಅಭಿಯಾನವನ್ನು ನಡೆಸಿ, ವಿವಿಧ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಐವರು ಕಿಶೋರ ಕಾರ್ಮಿಕ ಮಕ್ಕಳನ್ನು ರಕ್ಷಿಸಿ ಕೆಲಸದಿಂದ ಬಿಡುಗಡೆಗೊಳಿಸಲಾಯಿತು. ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ ಸದರಿ ಕಿಶೋರ ಕಾರ್ಮಿಕ ಮಕ್ಕಳನ್ನು ಬಾಲಕರ ಬಾಲ ಮಂದಿರಕ್ಕೆ ದಾಖಲಿಸಲಾಯಿತು.

ಕರಾಮುವಿ ಆವರಣದಲ್ಲಿ ಅನುಮತಿ ಪಡೆಯದ ಪ್ರಾಥಮಿಕ ಆರೋಗ್ಯ ಕೇಂದ್ರ

ಮೈಸೂರು, ಜೂ.25(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅನುಮತಿ ಇಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರ ನಡೆಸುತ್ತಿರುವ ದೂರಿನ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳ ಕಾರ್ಯಾಲಯ ಸೂಚನೆ ನೀಡಿದೆ. ಮೈಸೂರಿನ ವಿಜಯನಗರ ವಾಸಿ ಆರ್.ಎನ್.ಸತ್ಯನಾರಾಯಣ ನೀಡಿದ ದೂರಿನ ಮೇರೆಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಬಿಎಎಂಎಸ್ ವೈದ್ಯರು ರೋಗಿಗಳಿಗೆ ಆಧುನಿಕ ವೈದ್ಯ ಪದ್ಧತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸತ್ಯನಾರಾಯಣ ದೂರಿದ್ದರು. ದೂರಿನ ಹಿನ್ನೆಲೆ ನಿಯಮಾನುಸಾರ ಪರಿಶೀಲನೆ ನಡೆಸಿ, ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಅರ್ಜಿದಾರರಿಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ಡಿಹೆಚ್‌ಓಗೆ ಸೂಚನೆ ನೀಡಿದೆ.

ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ

ಮೈಸೂರು, ಜೂ. 25– ಮೈಸೂರಿನ ಶ್ರೀ ವಿಶ್ವಕರ್ಮ ವಿದ್ಯಾವರ್ಧಕ ಸಂಘದ ವಿದ್ಯಾರ್ಥಿ ನಿಲಯವು 2024–25ನೇ ಸಾಲಿಗಾಗಿ ಪ್ರವೇಶ ಬಯಸುವ ವಿಶ್ವಕರ್ಮ ಜನಾಂಗದ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ನಿಲಯದ ಕಾರ್ಯಾಲಯದಲ್ಲಿ ಅರ್ಜಿ ನಮೂನೆಗಳನ್ನು ಪಡೆದು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ಕಳೆದ ವರ್ಷ ನಿಲಯದಲ್ಲಿದ್ದ ವಿದ್ಯಾರ್ಥಿಗಳೂ ಈ ವರ್ಷ ಪ್ರವೇಶಕ್ಕಾಗಿ ಅರ್ಜಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಆಯ್ಕೆಯಾದ ವಿದ್ಯಾರ್ಥಿಗಳು ಕೂಡಲೇ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಮೊ. 9880777103, 9591445325 ಸಂಪರ್ಕಿಸಬಹುದು.

ಶ್ರವಣದೋಷ ಸಂಪೂರ್ಣ ನಿವಾರಣೆಗೆ ವಾಕ್ ಥೆರಪಿ ಅವಶ್ಯ

ಮೈಸೂರು,ಜೂ.25(ಎಂಟಿವೈ)– ಶ್ರವಣ ದೋಷ ನಿವಾರಣೆಗೆ ಯಾವುದೇ ಔಷಧಿ ಇಲ್ಲದಿರುವುದರಿಂದ ದೋಷ ಕಂಡು ಬಂದರೆ ಶ್ರವಣ ಸಾಧನ ಬಳಸುವುದರೊಂದಿಗೆ ವಾಕ್ ಥೆರಪಿ ಆಯಿಷ್ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುವಂತೆ ಆಯಿಷ್ ನಿರ್ದೇಶಕರಾದ ಡಾ.ಎಂ. ಪುಷ್ಪಾವತಿ ಸಲಹೆ ನೀಡಿದ್ದಾರೆ.

ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಫ್ರೌಶರ್ ಸೆನ್ಸಾರ್ ಟೆಕ್ನಾಲಜಿ ಆಫ್ ಇಂಡಿಯಾ ಸಹಯೋಗದಲ್ಲಿ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳು ಹಾಗೂ ವೃದ್ಧರು ಶ್ರವಣ ಸಾಧನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಶ್ರವಣ ಸಾಧನ ಬಳಸುವುದರಿಂದ ಶಬ್ದಗಳೂ ಕೇಳಿಸುತ್ತವೆ. ಅದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ವಾಕ್ ಥೆರಪಿ ಪಡೆದುಕೊಳ್ಳಬೇಕು. ಜೀವನದಲ್ಲಿ ಕಷ್ಟ ಎದುರಾಗುವುದು ಸಹಜ. ವಾಕ್ ಮತ್ತು ಶ್ರವಣ ಸಮಸ್ಯೆ ಬಗೆಹರಿಸಲು ಕೇಂದ್ರ ಸರ್ಕಾರ ಕಾರ್ಯಕ್ರಮ ರೂಪಿಸಿದೆ. ಆಯುಷ್ ಸಂಸ್ಥೆಯಲ್ಲಿ ವಾಸ್ತವ್ಯ ಹೂಡಿ, ವಾಕ್ ಥೆರಪಿ ಪಡೆಯಬೇಕು. ಇದರಿಂದ 2–3 ವರ್ಷದಲ್ಲಿ ಮಕ್ಕಳು ಸಾಮಾನ್ಯರಂತೆಯೇ ಕಲಿಯಲಿದ್ದಾರೆ. ಎಲ್ಲರೂ ತರಬೇತಿಯಲ್ಲಿ ಪಾಲ್ಗೊಂಡು ಮಕ್ಕಳಿಗೆ ಉಜ್ವಲ ಭವಿಷ್ಯ ರೂಪಿಸುವ ಜವಾಬ್ದಾರಿಯನ್ನು ನಿರೂಪಿಸಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೆ ಶ್ರವಣ ಸಾಧನ ವಿತರಿಸಲಾಯಿತು.

ಮಕ್ಕಳ ಕಲಿಕೆಗೆ ಶೇ.10ರಷ್ಟು ಸಹಾಯವನ್ನು ಶ್ರವಣ ಸಾಧನ ಮಾಡಲಿದೆ. ಉಳಿದ ಶೇ.90ರಷ್ಟು ಶ್ರಮ ಹಾಗೂ ಸಮಯವನ್ನು ಪೋಷಕರು ಮಕ್ಕಳ ಕಲಿಕೆಗೆ ನೀಡಬೇಕಿದೆ ಎಂದು ಹೇಳಿದರು.

ಫ್ರೌಶರ್ ಸೆನ್ಸಾರ್ ಟೆಕ್ನಾಲಜಿ ಆಫ್ ಇಂಡಿಯಾ ಮುಖ್ಯಸ್ಥ ಅಲೋಕ್ ಸಿನ್ಹಾ ಮಾತನಾಡಿ, ವಾಕ್ ಮತ್ತು ಶ್ರವಣ ಸಮಸ್ಯೆಯನ್ನು ಎದುರಿಸುತ್ತಿರುವ ಮಕ್ಕಳಿಗೆ ನೆರವಾಗಲು ಆಯಿಷ್ ಜೊತೆ ಸದಾ ಇದ್ದೇವೆ. ನಮ್ಮ ಕಾಣಿಕೆ ಅತ್ಯಲ್ಪ. ಮಾನವೀಯತೆ ಗೆಲ್ಲಿಸಲು ಪ್ರತಿಯೊಬ್ಬರ ಕಾಣಿಕೆ ಇದೆ. ಎಲ್ಲ ಚಿಣ್ಣರಂತೆ ದಿವ್ಯಾಂಗರಿಗೂ ಸಮಾನ ಅವಕಾಶ ಸಿಗಬೇಕು. ಪೋಷಕರು ಆರಂಭದ ಈ ಕಠಿಣ ಸಂದರ್ಭವನ್ನು ಸವಾಲಾಗಿ ಸ್ವೀಕರಿಸಿ, ಮಕ್ಕಳನ್ನು ಉನ್ನತ ಸ್ಥಾನಗಳತ್ತ ಒಯ್ಯಲು, ಸ್ವಾವಲಂಬಿ ಜೀವನ ರೂಪಿಸಲು ಶ್ರಮಿಸಬೇಕು. ಉದ್ಯಮ, ಕಂಪನಿಯ ಲಾಭಾಂಶವು ಶ್ರೀಮಂತಿಕೆಗಾಗಿ ಅಲ್ಲ. ಸಮಾಜ ಸೇವೆಗಾಗಿ. ಕಂಪನಿಯು ಆಯಿಷ್‌ನ ಕಾರ್ಯಗಳಿಗೆ ಬೆಂಬಲವಾಗಿ ನಿಲ್ಲಲಿದೆ. ಸೇವೆಗೆ ಎಲ್ಲರೂ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಡೆಲಾಚ ವಾಕ್ಸ್ ಕಂಪನಿ ಸಿಇಒ ಗೈ ಟಾಲ್ಬೊ ವಾರ್ಡೆಟ್, ಫ್ರೌಶರ್ ಸಮೂಹ ಸಂಸ್ಥೆಗಳ ಸಿಇಒ ಮೈಕಲ್ ಥಾಯ್ಸ್, ವ್ಯವಸ್ಥಾಪಕ ನಿರ್ದೇಶಕ ಅಖಿಲೇಶ್ ಯಾದವ್, ಆಯಿಷ್ ಶ್ರವಣ ವಿಭಾಗದ ಮುಖ್ಯಸ್ಥೆ ಡಾ.ಎನ್. ದೇವಿ ಇನ್ನಿತರರು ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಅಂಗವಾಗಿ

ನಾಳೆ ಪ್ರಬಂಧ, ಚಿತ್ರಕಲೆ ಸ್ಪರ್ಧೆ ಏರ್ಪಡಿಸಿ

ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕೆಂಪೇಗೌಡ ಜಯಂತಿ ಆಚರಣೆ ಪೂರ್ವಭಾವಿ ಸಭೆಯಲ್ಲಿ ಡಿಸಿ ವೆಂಕಟ್ ರಾಜಾ ಮಾತನಾಡಿದರು. ಎಡಿಸಿ ಬಿ.ಎನ್.ವೀಣಾ ಇದ್ದರು.

ಮಡಿಕೇರಿ, ಜೂ.25– ಆದರ್ಶ ಆಡಳಿತಗಾರ ರಾದ ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಜೂ.27 ರಂದು ಪ್ರಬಂಧ ಹಾಗೂ ಚಿತ್ರಕಲೆ ಸ್ಪರ್ಧೆ ಏರ್ಪಡಿಸಬೇಕು ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಕೆಂಪೇಗೌಡ ಜಯಂತಿ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಈ ಬಾರಿ ಜೂ.27 ರಂದು ಕೆಂಪೇಗೌಡರ ಆಡಳಿತ ಹಾಗೂ ಅವರ ಜೀವನ ಚರಿತ್ರೆ ಪರಿಚಯಿಸುವ ನಿಟ್ಟಿನಲ್ಲಿ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಕೆಂಪೇಗೌಡರ ಆಡಳಿತ ವ್ಯವಸ್ಥೆ ಪರಿಚಯಿಸಲು ಶಾಲಾ–ಕಾಲೇಜು ಹಂತದಲ್ಲಿ ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಏರ್ಪಡಿಸಿ, ವರದಿ ನೀಡುವಂತೆ ನಿರ್ದೇಶನ ನೀಡಿದರು. ತಾಲೂಕು ಮಟ್ಟದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಮೂವರನ್ನು ಜಿಲ್ಲಾ ಮಟ್ಟಕ್ಕೆ ಆಯ್ಕೆ ಮಾಡಬೇಕು. ಸ್ಥಳೀಯ ಸಂಸ್ಥೆಗಳು ತಾಲೂಕು ಹಾಗೂ ಜಿಲ್ಲಾಡಳಿತದೊಂದಿಗೆ ಕೆಂಪೇಗೌಡರ ಜಯಂತಿ ಆಚರಣೆ ಯಶಸ್ವಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಅಪರ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಮಾತನಾಡಿ, ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಲು ಪ್ರತಿಯೊಬ್ಬರೂ ಕೈಜೋಡಿಸುವಂತೆ ಮನವಿ ಮಾಡಿದರು. ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷ ಅಂಬೆಕಲ್ಲು ನವೀನ್, ಕೊಡಗು ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಎಸ್.ಎಲ್. ಬಸವರಾಜು ಮಾತನಾಡಿ, ಕೆಂಪೇಗೌಡ ಜಯಂತಿ ಆಚರಣೆಗೆ ಅಗತ್ಯ ಸಹಕಾರ ನೀಡಲಾಗುವುದು ಎಂದು ಹೇಳಿದರು.

> ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕರಾದ ರಂಗಧಾಮಪ್ಪ ಅವರು ಕೆಂಪೇಗೌಡ ಜಯಂತಿ ಆಚರಣೆ ಸಂಬಂಧ ಪ್ರಬಂಧ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿ ಆಯ್ಕೆ ಮಾಡಿ ವರದಿ ನೀಡಲಾಗುವುದು.
> -ಪುಟ್ಟರಾಜು, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಎಸ್.ಧನರಾಜ್, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಬಿ.ಬಸಪ್ಪ, ಸೈನಿಕ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಾಲಸುಬ್ರಹ್ಮಣ್ಯ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್, ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಲಿಂಗರಾಜು ದೊಡ್ಡಮನಿ, ಜಿಪಂ ಇಂಜಿನಿಯರ್ ಮುತ್ತುರಾಜ್, ಸುರೇಶ್ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಟರಾಜು, ಪಿಎಂಜಿಎಸ್‌ವೈ ಇಂಜಿನಿಯರ್ ಪ್ರಭು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ, ವಿಕಲಚೇತನಾಧಿಕಾರಿ ವಿಮಲಾ, ಜಿಲ್ಲಾ ದೈಹಿಕ ಶಿಕ್ಷಾಧಿಕಾರಿ ಸದಾಶಿವ ಪಲ್ಲೇದ್, ಶಿಕ್ಷಣಾಧಿಕಾರಿ ಕೃಷ್ಣಪ್ಪ, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ದಿವಾಕರ ಇತರರು ಇದ್ದರು.

ಭಾಗಮಂಡಲ ಭಗಂಡೇಶ್ವರ ದೇವಸ್ಥಾನದಲ್ಲಿ ಪೂಜೆ



ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಸ್ಥಾನದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ನಾಪೋಕ್ಲು, ಜೂ.25–ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಸ್ಥಾನದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರ ದೋಷ ನಿವಾರಣೆಗಾಗಿ ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು. ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎ.ಇಸ್ಮಾಯಿಲ್ ನೇತೃತ್ವದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಶ್ರೇಯೋಭಿವೃದ್ಧಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ತೀರ್ಥಪ್ರಸಾದ ವಿತರಿಸಲಾಯಿತು.

ಈ ಸಂದರ್ಭ ಭಾಗಮಂಡಲ ವಲಯಾಧ್ಯಕ್ಷ ಕೋಳಿಬೈಲ್ ವೆಂಕಟೇಶ್, ಮಾಜಿ ಅಧ್ಯಕ್ಷ ದೇವಂಗೋಡಿ ಹರ್ಷ, ನಾಪೋಕ್ಲು ವಲಯಾಧ್ಯಕ್ಷ ಮಾಚೇಟಿರ ಕುಸು ಕುಶಾಲಪ್ಪ, ಡಿಸಿಸಿ ಸದಸ್ಯ ಸುನೀಲ್ ಪತ್ರ, ಅಕ್ರಮ ಸಕ್ರಮ ಸಮಿತಿ ಮಡಿಕೇರಿ ತಾಲೂಕು ಅಧ್ಯಕ್ಷ ನೆರವಂಡ ಉಮೇಶ್, ಚೆಯಂಡಾಣೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ, ವಿನೋದ್ ಕೋಡಿರ, ಸದಸ್ಯರಾದ ಬಿಂದು, ಕುಲ್ಲೇಟಿರ ಅರುಣ ಬೇಬ, ಭಾಗಮಂಡಲ ಕೊಟ್ಟುಕತ್ತಿರ ದಿವ್ಯ ಹಾಜರಿದ್ದರು.

ಪ್ರಕರಣ ದಾಖಲಿಸಿದರೆ ಪ್ರತಿಭಟನೆ ಎಚ್ಚರಿಕೆ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ ಮಾತನಾಡಿದರು.

ಮಡಿಕೇರಿ, ಜೂ.25– ಶಾಸಕರ ಕುಮ್ಮಕ್ಕಿನಿಂದ ಕಾಂಗ್ರೆಸ್‌ನವರು ಬಿಜೆಪಿ ಕಾರ್ಯಕರ್ತರ ವಿರುದ್ಧ ವಿನಾಕಾರಣ ಪ್ರಕರಣ ದಾಖಲಿಸಿದರೆ, ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ ಎಚ್ಚರಿಕೆ ನೀಡಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷದ ವಿರುದ್ಧ ಪ್ರತಿಭಟಿಸುವ ಹಕ್ಕು ವಿರೋಧ ಪಕ್ಷಗಳಿಗಿದೆ. ಆದರೆ, ಜಿಲ್ಲೆಯ ಕಾಂಗ್ರೆಸ್ಸಿಗರು ಪ್ರತಿಭಟನೆ ನಡೆಸುವವರ ವಿರುದ್ಧ ಸುಳ್ಳು ದೂರು ದಾಖಲಿಸುತ್ತಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಆದರೆ, ವಿರಾಜಪೇಟೆಯಲ್ಲಿ ಸಾರ್ವಜನಿಕರ ಆಸ್ತಿಗೆ ಹಾನಿ ಮಾಡಲಾಗಿದೆ ಎಂದು ಸುಳ್ಳು ದೂರು ನೀಡಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲು ಮುಂದಾಗಿರುವುದು ಖಂಡನೀಯ ಎಂದರು.

ಬಿಜೆಪಿಯ ಮಾಜಿ ಶಾಸಕರಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ಅವರ ಪ್ರತಿಕೃತಿಯನ್ನು ಹಿಂದೆ ಕಾಂಗ್ರೆಸ್ಸಿಗರು ದಹಿಸಿದ್ದಾರೆ. ವಿರೋಧ ಪಕ್ಷದ ಪ್ರತಿಭಟಿಸುವ ಸ್ವತಂತ್ರವನ್ನು ಗೌರವಿಸಿದ್ದ ಅಂದಿನ ಬಿಜೆಪಿ ಸರ್ಕಾರ ಪ್ರತಿಭಟನಾಕಾರರ ವಿರುದ್ಧ ಯಾವುದೇ ಮೊಕದ್ದಮೆ ದಾಖಲಿಸಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮಾಚಿಮಂಡ ಪ್ರಸಾದ್ ಚಂಗಪ್ಪ, ಪೊನ್ನಚೆಟ್ಟೀರ ವಿನೋದ್, ಮಡಿಕೇರಿ ಗ್ರಾಮಾಂತರ ಅಧ್ಯಕ್ಷ ಚೇತನ್ ಬಂಗೇರ, ಮಡಿಕೇರಿ ನಗರಾಧ್ಯಕ್ಷ ಪಾಂಡೀರ ಪೂಣಚ್ಚ ಮತ್ತಿತರರು ಉಪಸ್ಥಿತರಿದ್ದರು.

ಶಾಸಕರಿಂದ ಜಿಲ್ಲೆಯಲ್ಲಿ ಜನಸ್ನೇಹಿ ಕಾರ್ಯ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೊಲ್ಯದ ಗಿರೀಶ್ ಮಾತನಾಡಿದರು.

ಮಡಿಕೇರಿ, ಜೂ.25– ಜಿಲ್ಲೆಯ ಕಾಂಗ್ರೆಸ್‌ನ ಇಬ್ಬರೂ ಶಾಸಕರು ಅಲ್ಪಾವಧಿ ಅಧಿಕಾರದಲ್ಲಿ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ 200 ಕೋಟಿ ರೂ.ಗೂ ಹೆಚ್ಚು ವೆಚ್ಚದ ಅಭಿವೃದ್ಧಿ ಕೆಲಸ ನಡೆಸುವ ಮೂಲಕ ಜನಸ್ನೇಹಿ ಕಾರ್ಯನಿರ್ವಹಿಸಿದ್ದಾರೆ ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೊಲ್ಯದ ಗಿರೀಶ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಧನ ದರ ಹೆಚ್ಚಳ ವಿಚಾರವಾಗಿ ಪ್ರತಿಭಟನೆ ನಡೆಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಶಾಸಕ ಎ.ಎಸ್.ಪೊನ್ನಣ್ಣ ಅವರ ಪ್ರತಿಕೃತಿ ದಹಿಸಿರುವುದು ಬೇಸರದ ವಿಚಾರ. ಆರ್ಥಿಕ ಕ್ರೋಢೀಕರಣಕ್ಕೆ ಯಾವುದೇ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ದರ ಹೆಚ್ಚಳ ಮಾಡುವುದು ಸಾಮಾನ್ಯ. ಸುಮಾರು 70 ರೂ. ಇದ್ದ ಇಂಧನ ದರ 100 ರೂ. ಗಡಿ ದಾಟಿದಾಗಲೂ ಕಾಂಗ್ರೆಸ್‌ನವರು ಬಿಜೆಪಿಯವರ ಪ್ರತಿಕೃತಿ ದಹಿಸುವಂತಹ ಕಾರ್ಯಕ್ಕೆ ಮುಂದಾಗಿಲ್ಲ ಎಂದು ಹೇಳಿದರು.

ವಿಶೇಷ ಪೂಜೆ: ಬಿಜೆಪಿ ಪ್ರತಿಭಟನೆ ವೇಳೆ ಶಾಸಕರ ಪ್ರತಿಕೃತಿ ದಹಿಸಿದವರಿಗೆ ಒಳ್ಳೆಯ ಬುದ್ಧಿ ನೀಡುವಂತೆ ಕಾಂಗ್ರೆಸ್‌ನಿಂದ ಭಾಗಮಂಡಲದಲ್ಲಿ ವಿಶೇಷ ಪೂಜೆ ನಡೆಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ವೃತ್ತಿ ಘಟಕದ ಅಧ್ಯಕ್ಷ ನವೀನ್ ಅಂಬೆಕಲ್ಲು, ವಿರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಪ್ರಮುಖ ಸುರೇಶ್ ಸಂಪಾಜೆ, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಮೋಹನ್ ದಾಸ್, ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಸೂರಜ್ ಹೊಸೂರು ಉಪಸ್ಥಿತರಿದ್ದರು.

ಕೊಡವ ಲ್ಯಾಂಡ್ ರಕ್ಷಣೆಗೆ ಎಲ್ಲರೂ ಒಗ್ಗೂಡಬೇಕು



ಗೋಣಿಕೊಪ್ಪದಲ್ಲಿ ನಡೆದ ಜನಜಾಗೃತಿ ಕಾರ್ಯಕ್ರಮದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿದರು.

ಮಡಿಕೇರಿ, ಜೂ.25– ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಮಾಫಿಯಾದಿಂದ ಕೊಡವ ಲ್ಯಾಂಡ್ ಅನ್ನು ರಕ್ಷಿಸಿಕೊಳ್ಳಲು ಸಮಸ್ತ ಕೊಡವರು ಒಗ್ಗೂಡಿ ಹೋರಾಟ ನಡೆಸಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದರು.

ಕೊಡಗು ಜಿಲ್ಲಾದ್ಯಂತ ಸುಮಾರು 2400 ಎಕರೆ ಕಾಫಿ ತೋಟ ಸೇರಿದಂತೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ತಕ್ಷಣ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಗೋಣಿಕೊಪ್ಪ ಬಸ್ ನಿಲ್ದಾಣದಲ್ಲಿ ನಡೆದ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೂ ಮಾಫಿಯಾಗಳು ಹಾಗೂ ರಾಜಕೀಯ ಬೆಂಬಲಿತರು ಕೊಡಗಿನ ಕಾವೇರಿ ಜಲಾನಯನ ಪ್ರದೇಶದ ಭೂಮಿಗಳನ್ನು ದೊಡ್ಡ ಮಟ್ಟದಲ್ಲಿ ಖರೀದಿಸುತ್ತಿದ್ದಾರೆ. ಇದರಿಂದ ಕಪ್ಪು ಹಣ ಚಲಾವಣೆಯಾಗುತ್ತಿದೆ. ಬೃಹತ್ ಕಾಫಿ ತೋಟಗಳ ಖರೀದಿ ನಂತರ ಅಕ್ಕಪಕ್ಕದ ಸಣ್ಣ ಹಿಡುವಳಿದಾರರ ಭೂ ಮಿಯನ್ನು ಹಣದ ಆಮಿಷವೊಡ್ಡಿ ಕಬಳಿಸಲಾಗುತ್ತಿದೆ ಎಂದು ಆರೋಪಿಸಿದರು.

ಆದಾಯ ಕ್ರೋಢೀಕರಣಕ್ಕಾಗಿ ಸರ್ಕಾರ ಪ್ರವಾಸೋದ್ಯಮ ಹೆಸರಿನಲ್ಲಿ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಯಂತಹ ಪ್ರಕೃತಿಗೆ ವಿರುದ್ಧವಾದ ಪ್ರಕ್ರಿಯೆಗಳಿಗೆ ಅವಕಾಶ ಹಾಗೂ ಅನುಕೂಲ ಕಲ್ಪಿಸುತ್ತಿದೆ. ಇದರ ಪರಿಣಾಮ ಪ್ರವಾಸಿಗ ರಿಂದ ಮೂಲನಿವಾಸಿಗಳಿಗೆ ರಕ್ಷಣೆ ಮತ್ತು ನೆಮ್ಮದಿ ಇಲ್ಲದಾಗಿದೆ. ಪ್ರವಾಸಿಗರ ದೌರ್ಜನ್ಯಕ್ಕೆ ಸಂಬಂಧಪಟ್ಟ ಇಲಾಖೆಗಳು ಕಡಿವಾಣ ಹಾಕಬೇಕು. ತಪ್ಪಿದಲ್ಲಿ ಸ್ಥಳೀಯರಿಗೆ ಉಳಿಗಾಲ ವಿಲ್ಲದಂತಾಗುತ್ತದೆ ಎಂದು ಒತ್ತಾಯಿಸಿದರು.

ಜಾಗೃತಿ ಕಾರ್ಯಕ್ರಮದಲ್ಲಿ ಚೇಂದಿರ ಶೈಲ, ಬಟ್ಟಿಯಂಡ ಕೃಪ ಸೋಮಯ್ಯ, ಅನನ್ಯ ಸೋಮಯ್ಯ, ಅನಿಂದ್ಯ ಸೋಮಯ್ಯ, ಕರ್ನಲ್ ಬಿ.ಎಂ.ಪಾರ್ವತಿ, ಬಲ್ಲಡಿಚಂಡ ಬೇಬಿ ಮೇದಪ್ಪ, ಮುದ್ದಿಯಡ ಲೀಲಾವತಿ, ಡಾ.ಕಾಳಿಮಾಡ ಶಿವಪ್ಪ, ಕೊಲ್ಲಿರ ಗಯಾ, ಕಂಬಿರಂಡ ಬೋಪಣ್ಣ, ಕಾಡ್ಯಮಾಡ ಗೌತಮ್, ಬಾಚರಣಿಯಂಡ ಚಿಪ್ಪಣ್ಣ ಜಮ್ಮಡ ಮೋಹನ್, ಮದ್ರಿರ ಕರುಂಬಯ್ಯ, ಬುಟ್ಟಿಯಂಡ ಹರೀಶ್, ಕೋದೇಂಗಡ ನರೇನ್, ಸುಳ್ಳಿಮಾಡ ಪ್ರಭು, ಜಮ್ಮಡ ಜಯ, ಕಾಂಡೇರ ಸುರೇಶ್, ಅಜ್ಜಿಕುಟ್ಟಿರ ಲೋಕೇಶ್, ಬೊಟ್ಟಂಗಡ ಜಪ್ಪು, ಅಪ್ಪೆಂಗಡ ಮಾಲೆ, ಕಿರಿಯಮಾಡ ಶರೀನ್, ಅರೆಯಡ ಗಿರೀಶ್, ಚಂಬಂಡ ಜನತ್, ಪಾರುವಂಗಡ ನವೀನ್, ಮಚ್ಚಮಾಡ ಬೋಸ್, ಮಚ್ಚಮಾಡ ಸುರೇಶ್, ಪಟ್ರಪಂಡ ಕುಟ್ಟಪ್ಪ, ಬೆಪ್ಪಡಿಯಂಡ ದಿನು, ಕೋಣಿಯಂಡ ಸಂಜು, ಪೊನ್ನಲ್ ತಂಡ ಕಿರಣ್, ಮೂಕೊಂಡ ದಿಲೀಪ್, ಮಲ್ಲಂಡ ತಮ್ಮಿ, ಮೇದಪ್ಪ ಇದ್ದರು.

ಕಬ್ಬಿನ ಬಾಕಿ ಹಣ ನೀಡಿಲ್ಲ

ಕುಂದುಕೊರತೆ ನಿವಾರಣಾ ಸಭೆಯಲ್ಲಿ ಕಾರ್ಖಾನೆಗಳ ವಿರುದ್ಧ ರೈತರ ಆಕ್ರೋಶ



ಚಾಮರಾಜನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ರೈತರ ಕುಂದುಕೊರತೆ ನಿವಾರಣಾ ಸಭೆಯಲ್ಲಿ ತಹಸೀಲ್ದಾರ್ ಈ.ಬಸವರಾಜು ಮಾತನಾಡಿದರು.

ಚಾಮರಾಜನಗರ, ಜೂ.25– ಟನ್ ಕಬ್ಬಿಗೆ ಬಾಕಿ 150 ರೂ. ನೀಡುವಂತೆ ಸರ್ಕಾರದ ಆದೇಶವಿದ್ದರೂ ಸಕ್ಕರೆ ಕಾಖಾನೆಗಳು ಇನ್ನೂ ನೀಡಿಲ್ಲ ಎಂದು ಸಭೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಮೂಕಳ್ಳಿ ಮಹದೇವಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಮಂಗಳವಾರ ತಹಸೀಲ್ದಾರ್ ಈ.ಬಸವರಾಜು ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಮಟ್ಟದ ರೈತರ ಕುಂದುಕೊರತೆ ನಿವಾರಣಾ ಸಭೆಯಲ್ಲಿ ಮಾತನಾಡಿದ ಅವರು, ಕುಂತೂರು ಹಾಗೂ ಅಳಗಂಚಿ ಸಕ್ಕರೆ ಕಾರ್ಖಾನೆಗಳು ಈ ಭಾಗದ ರೈತರಿಗೆ ಒಟ್ಟು 25 ಕೋಟಿ ರೂ. ಬಾಕಿ ನೀಡಬೇಕಿದೆ. ಬಾಕಿ ಹಣವನ್ನು ಆದಷ್ಟು ಬೇಗ ಕೊಡಿಸಬೇಕು. ವೇಬ್ರಿಡ್ಜ್‌ಗಳನ್ನು ಕಾರ್ಖಾನೆ ಆವರಣದಲ್ಲೇ ನಿರ್ಮಿಸಿ ಉಚಿತವಾಗಿ ಕಬ್ಬು ತೂಕ ಮಾಡುವ ವ್ಯವಸ್ಥೆ ಯಾಗಬೇಕು. ಹೊಸ ಪಡಿತರ ಚೀಟಿ ಅರ್ಜಿ ಸಲ್ಲಿಕೆಗೆ ಆಗುತ್ತಿರುವ ತೊಂದರೆ ಯನ್ನು ಸರಿಪಡಿಸುವಂತೆ ಮನವಿ ಮಾಡಿದರು.

ನಂತರ ಈ ಸಂಬಂಧ ಉತ್ತರಿಸಿದ ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ, ಕಬ್ಬು ದರ ನಿಗದಿ, ಕಟಾವು, ಸಾಗಣೆ ಕುರಿತು ಆಯುಕ್ತರೊಂದಿಗೆ ಪತ್ರವ್ಯವಹಾರ ನಡೆಸಲಾಗಿದೆ. ಬಾಕಿ ಹಣ ಪಾವತಿಸುವ ಬಗ್ಗೆ ಜಿಲ್ಲಾಧಿಕಾರಿ ಗಮನಕ್ಕೆ ತಂದು ಮಾರ್ಗದರ್ಶನ ಕೋರಲಾಗುವುದು. ಈ ಬಾರಿ ಕಬ್ಬು ಕಟಾವಿಗೆ ಮೊದಲೇ ಕಾರ್ಖಾನೆಗಳ ಮಾಲೀಕರೊಂದಿಗೆ ಸಭೆ ನಡೆಸಲಾಗುವುದು. ಅಲ್ಲದೆ, ಹೊಸ ಪಡಿತರ ಚೀಟಿಗಳನ್ನು ತುರ್ತು ಅಗತ್ಯವಿರುವವರಿಗೆ ಮಾತ್ರ ವೈದ್ಯಕೀಯ ಕಾರಣದ ಆಧಾರದ ಮೇಲೆ ನೀಡಲಾಗುತ್ತಿದೆ ಎಂದರು.

> ಪ್ರತಿ ಗ್ರಾಮಗಳಲ್ಲೂ ಸ್ಮಶಾನ ಅಭಿವೃದ್ಧಿಪಡಿಸಲು 20 ಗುಂಟೆ ಜಾಗವನ್ನು ಸರ್ಕಾರ ಮಂಜೂರು ಮಾಡಿದೆ. ಸಂಬಂಧಿಸಿದ ಅಧಿಕಾರಿಗಳು ಸಮಸ್ಯೆಯನ್ನು ಅದಷ್ಟು ಬೇಗ ಇತ್ಯರ್ಥ ಪಡಿಸಿ, ಸ್ಮಶಾನಕ್ಕೆ ಅವಕಾಶ ನೀಡಬೇಕು.
> -ಈ.ಬಸವರಾಜು, ತಹಸೀಲ್ದಾರ್

ಎಪಿಎಂಸಿ ಕಾರ್ಯದರ್ಶಿ ಪ್ರಕಾಶ್ ಮಾತನಾಡಿ, ಸರ್ಕಾರ ಈಗಾಗಲೇ ಉಚಿತವಾಗಿ ಕಬ್ಬು ತೂಕ ಮಾಡಲು ಎಲ್ಲಾ ಎಪಿಎಂಸಿ ಆವರಣದಲ್ಲಿ ಅವಕಾಶ ಕಲ್ಪಿಸಿದೆ. ಅಲ್ಲದೆ, ಸಕ್ಕರೆ ಕಾರ್ಖಾನೆ ಬಳಿ 10 ಕಿ.ಮೀ. ಅಂತರದೊಳಗೆ ವೇಬ್ರಿಡ್ಜ್‌ಗಳನ್ನು ಸ್ಥಾಪಿಸಲು ಅವಕಾಶವಿದೆ. ಮುಂದಿನ ದಿನಗಳಲ್ಲಿ ರೈತರಿಗೆ ಅನುಕೂಲವಾಗುವಂತೆ ಕಾರ್ಖಾನೆ ಬಳಿಯೇ ವೇಬ್ರಿಡ್ಜ್ ನಿರ್ಮಿಸಲು ಚಿಂತಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಬ್ಬು ಬೆಳೆಗಾರರ ಸಂಘದ ತಾಲೂಕು ಉಪಾಧ್ಯಕ್ಷ ಮೇಲಾಜೀಪುರದ ಮಲ್ಲೇಶ್ ಮಾತನಾಡಿ, ಗ್ರಾಮದಲ್ಲಿ ಸ್ಮಶಾನಕ್ಕೆ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಎರಡೆರಡು ಬಾರಿ ಜಾಗ ಅಳತೆ ಮಾಡಿದ್ದರೂ ಸ್ಮಶಾನಕ್ಕೆ ಸ್ಥಳ ನಿಗದಿಪಡಿಸಿಲ್ಲ. ಇದೇ ಸಮಸ್ಯೆ ಗೋವಿಂದವಾಡಿ ಹಾಗೂ ಹರವೆ ಗ್ರಾಮದಲ್ಲೂ ಇದೆ. ಇದನ್ನು ತುರ್ತಾಗಿ ಸರಿಪಡಿಸಬೇಕು ಎಂದು ಮನವಿ ಮಾಡಿದರು.

ಬಳಿಕ ಮಾತನಾಡಿದ ಸಂಘದ ಗ್ರಾಮ ಘಟಕದ ಕಾರ್ಯದರ್ಶಿ ಅಶೋಕ್, ಬದನಗುಪ್ಪೆ 224 ಸರ್ವೇ ನಂಬರ್‌ನ ದುರಸ್ತಿ ಸಂಬಂಧ 2016ರ ಸರ್ಕಾರದ ಸುತ್ತೋಲೆ ಪ್ರಕಾರ ಸಾಕಷ್ಟು ಗೊಂದಲಗಳಿವೆ ಅದನ್ನು ಪರಿಹರಿಸಬೇಕು ಎಂದರು. ಇದಕ್ಕೆ ಉತ್ತರಿಸಿದ ತಹಸೀಲ್ದಾರ್ ಈ.ಬಸವರಾಜು, 1920ರಿಂದ ಇದುವರೆಗೂ ಸರ್ಕಾರ ರೈತರಿಗೆ ವಿವಿಧ ಹಂತಗಳಲ್ಲಿ ಜಮೀನು ಮಂಜೂರು ಮಾಡಿದ ದಾಖಲೆಗಳು ಕೈಬರಹದಲ್ಲಿದ್ದವು. ಪ್ರಸ್ತುತ ಎಲ್ಲಾ ದಾಖಲೆಗಳು ಡಿಜಿಟಲೀಕರಣಗೊಂಡಿವೆ. ಈ ಹಂತದ ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಪರಿಸರ ಅಧಿಕಾರಿ ಉಮಾಶಂಕರ್, ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಚಿಕ್ಕರಾಜಶೆಟ್ಟಿ, ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರವೀಣ್, ರೈತ ಆಲೂರು ಚೆನ್ನಂಜಪ್ಪ ಇದ್ದರು.

ವಿವಿಧ ಕುಂದುಕೊರತೆ ಸಲ್ಲಿಕೆ

ಗ್ರಾಮಗಳಿಗೆ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ, ಸಾಮಾಜಿಕ ಅರಣ್ಯ ವಿಭಾಗದಿಂದ ರಸ್ತೆಬದಿಯಲ್ಲಿ ಗಿಡ ನೆಡುವುದು, ಕೆರೆ ತುಂಬಿಸುವ ಯೋಜನೆ, ಬಸ್ ನಿಲ್ದಾಣಗಳಲ್ಲಿ ಕುಡುಕರ ಹಾವಳಿ, ಕಾಡುಪ್ರಾಣಿಗಳಿಂದ ಬೆಳೆ ನಾಶ, ರೈತರು ಜಮೀನಿನಲ್ಲಿ ಬೆಳೆದ ತೇಗದ ಮರಗಳ ಮಾರಾಟಕ್ಕೆ ಡಿಪೋ ವ್ಯವಸ್ಥೆ, ಸಾಲ ಮರುಪಾವತಿಗೆ ಬ್ಯಾಂಕ್‌ಗಳಿಂದ ತೊಂದರೆ, ತಾಲೂಕಿನಲ್ಲಿ ತೆಂಗು ಖರೀದಿ ಕೇಂದ್ರ ಸೇರಿದಂತೆ ವಿವಿಧ ಕುಂದುಕೊರತೆಗಳು ಸಭೆಯಲ್ಲಿ ಸಲ್ಲಿಕೆಯಾದವು.

ಗ್ಯಾರಂಟಿ ಪರಿಣಾಮಕಾರಿ ಅನುಷ್ಠಾನಗೊಳಿಸಿ



ಚಾಮರಾಜನಗರ, ಜೂ.25–ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಮಹತ್ತರ ಐದು ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಅಧಿಕಾರಿಗಳು ವಿಶೇಷ ಗಮನ ಹರಿಸಬೇಕು ಎಂದು ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಪಂನಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ ಯೋಜನೆ, ಯುವನಿಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಯೋಜನೆಗಳು ಫಲಾನುಭವಿಗಳಿಗೆ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಐದು ಗ್ಯಾರಂಟಿ ಯೋಜನೆಗಳು ಜನತೆಗೆ ಮುಟ್ಟಿಸುವ ನಿಟ್ಟಿನಲ್ಲಿ ವಿವಿಧ ಹಂತಗಳಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಕಾರ್ಯನಿರ್ವಹಿಸಲಿದೆ. ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಕಾರ್ಯೋನ್ಮುಖರಾಗಲಿದ್ದಾರೆ ಎಂದರು.

ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಹೆಚ್.ವಿ.ಚಂದ್ರು, ಚೂಡ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಸೋಮೇಶ್ವರ, ಸಿದ್ದರಾಜು, ಎಸ್.ಪ್ರಭುಪ್ರಸಾದ್, ಎಸ್.ಆರ್.ಎಸ್.ರಾಜಶೇಖರ, ಕೆ.ಎನ್.ಪ್ರದೀಪ್ ಕುಮಾರ್, ಸದಸ್ಯರಾದ ಆರ್.ಉಮೇಶ್, ಶಿವಮೂರ್ತಿ, ಪಿ.ಪಿ.ನಾಗರಾಜಮೂರ್ತಿ, ಕೆ.ಬಿ.ಚಿನ್ನಸ್ವಾಮಿ, ಉಮಾಪತಿ, ಎಂ.ಪ್ರದೀಪ್, ರವಿಕುಮಾರ್, ರಾಚಪ್ಪ, ದಯಾನಿಧಿ, ರವಿ, ಅಕ್ಬರ್ ಪಾಷ, ರಾಜೇಂದ್ರ. ಆರ್, ಹೆಚ್.ಎನ್.ಜಯರಾಜು, ಭಾಗ್ಯ, ಎಂ.ದೇವರಾಜು ಉಪಸ್ಥಿತರಿದ್ದರು.

ಇಂದು ಹರದನಹಳ್ಳಿಯಲ್ಲಿ ಜನಸ್ಪಂದನಾ ಕಾರ್ಯಕ್ರಮ

ಚಾಮರಾಜನಗರ, ಜೂ.25– ಸಾರ್ವಜನಿಕರ ಅಹವಾಲು, ಕುಂದುಕೊರತೆ ಆಲಿಸಿ ಪರಿಹರಿಸುವ ಸಲುವಾಗಿ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಜೂ.26 ರಂದು ಬೆಳಗ್ಗೆ 11 ಗಂಟೆಗೆ ತಾಲೂಕಿನ ಹರದನಹಳ್ಳಿ ಗ್ರಾಮದ ವಾಲ್ಮೀಕಿ ಭವನದಲ್ಲಿ ಜನಸ್ಪಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಹಾಗೂ ಮತ್ತಿತರ ಇಲಾಖೆ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಹಸೀಲ್ದಾರ್ ಈ.ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

8 ದಿನಗಳ ಕರು ಚಿರತೆಗೆ ಆಹಾರ



ಬೇಗೂರು, ಜೂ.25–ಕಳೆದ 8 ದಿನಗಳ ಹಿಂದೆಯಷ್ಟೇ ಜನಿಸಿದ ಕರುವೊಂದನ್ನು ಚಿರತೆ ಎಳೆದೊಯ್ದು ತಿಂದು ಹಾಕಿರುವ ಘಟನೆ ಸಮೀಪದ ಕುರುಬರ ಹುಂಡಿ (ಶಿವಕುಮಾರ್ ಪುರ) ಗ್ರಾಮದಲ್ಲಿ ನಡೆದಿದೆ. ಗ್ರಾಮದ ಗುರುಸ್ವಾಮಿ ಅವರಿಗೆ ಸೇರಿದ ಹಸುವಿನ ಕರುವನ್ನು ಮನೆ ಆವರಣದ ಶೆಡ್‌ನಲ್ಲಿ ಕಟ್ಟಿ ಹಾಕಲಾಗಿತ್ತು. ಆದರೆ, ಚಿರತೆ ಕರುವನ್ನು ಎಳೆದೊಯ್ದು ಅರ್ಧ ಭಾಗವನ್ನು ತಿಂದು ಹಾಕಿದೆ. ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಬಂಡೀಪುರ ವಲಯ ವ್ಯಾಪ್ತಿಯ ಓಂಕಾರ ಅರಣ್ಯದಿಂದ ಕಾಡುಪ್ರಾಣಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಾಡುಪ್ರಾಣಿಗಳ ಹಾವಳಿ ತಪ್ಪಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಯೋಗ ಪ್ರಕಾಶ್‌ಗೆ ಗಡಿನಾಡು ಯೋಗರತ್ನ ಬಿರುದು



ಚಾಮರಾಜನಗರದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಯೋಗ ಪ್ರಕಾಶ್‌ಗೆ ಗಡಿನಾಡು ಯೋಗರತ್ನ ಬಿರುದು ನೀಡಿ ಅಭಿನಂದಿಸಲಾಯಿತು.

ಚಾಮರಾಜನಗರ, ಜೂ.25–ಕಳೆದ 18 ವರ್ಷಗಳಿಂದ ಯೋಗದ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿ, ಉಚಿತವಾಗಿ ಯೋಗಾಭ್ಯಾಸ ಕಲಿಸುತ್ತಿರುವ ಯೋಗ ವಿ.ಪಿ.ಪ್ರಕಾಶ್‌ಗೆ ಚಾ.ನಗರದ ಸಂಜೀವಿನಿ ಟ್ರಸ್ಟ್ ವತಿಯಿಂದ ಗಡಿನಾಡು ಯೋಗರತ್ನ ಬಿರುದು ನೀಡಿ ಅಭಿನಂದಿಸಲಾಯಿತು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣದಲ್ಲಿ ಪತಂಜಲಿ ಯೋಗ ಶಿಕ್ಷಣಾ ಸೇವಾ ಸಮಿತಿ ಸಹಯೋಗದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಸಂಜೀವಿನ ಟ್ರಸ್ಟ್ ಯೋಗ ಪ್ರಕಾಶ್‌ಗೆ ಬಿರುದು ನೀಡಿ, ಅಭಿನಂದಿಸಿದೆ. ಟ್ರಸ್ಟ್ ಅಧ್ಯಕ್ಷ ಸತೀಶ್ ಮಾತನಾಡಿ, ಯೋಗ ಪ್ರಕಾಶ್ ನಿರಂತರವಾಗಿ ಯೋಗಾಭ್ಯಾಸ ಮೂಲಕ ಇತರರಿಗೆ ಮಾದರಿ ಆಗಿದ್ದಾರೆ. ಪಂತಜಲಿ ಯೋಗ ಶಿಕ್ಷಣ ಸೇವಾ ಸಮಿತಿ ಆರಂಭಿಸಿ, ವರ್ಷಪೂರ್ತಿ ಉಚಿತ ಯೋಗಾಭ್ಯಾಸ ಸೇವೆ ಪ್ರಶಂಸನೀಯ ಎಂದರು.

ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಮಹದೇವಸ್ವಾಮಿ, ಯೋಗ ಶಿಕ್ಷಕರಾದ ದೊರೆಸ್ವಾಮಿ, ಲೋಕೇಶ್ವರಿ, ದೈಹಿಕ ಶಿಕ್ಷಣ ಶಿಕ್ಷಕರಾದ ಮಂಜು, ಉಮೇಶ್, ಶಿಕ್ಷಕರಾದ ಕುಮಾರಸ್ವಾಮಿ, ಗೌರಿ, ಅಕ್ಷತಾ ಜೈನ್, ನಾಗು ಮೊದಲಾದವರು ಇದ್ದರು.

ಮೂವರು ವಾಹನ ಕಳ್ಳರ ಬಂಧನ

8.95 ಲಕ್ಷ ರೂ. ಬೆಲೆ ಬಾಳುವ ವಾಹನಗಳ ವಶ



ಕೊಳ್ಳೇಗಾಲ ಪಟ್ಟಣ ಠಾಣೆ ಹಾಗೂ ಡಿವೈಎಸ್ಪಿ ಅಪರಾಧ ಪತ್ತೆ ದಳದ ಪೊಲೀಸರು ಬಂಧಿತರಿಂದ ಬೈಕ್ ಹಾಗೂ ಪಿಕ್‌ಅಪ್ ವಾಹನ ವಶಪಡಿಸಿಕೊಂಡಿರುವುದು.

ಕೊಳ್ಳೇಗಾಲ, ಜೂ.25–ವಾಹನ ಹಾಗೂ ಜಾನುವಾರಗಳ ಮೂವರು ಕಳ್ಳರನ್ನು ಬಂಧಿಸಿರುವ ಪಟ್ಟಣ ಠಾಣೆ ಹಾಗೂ ಡಿವೈಎಸ್ಪಿ ಅಪರಾಧ ಪತ್ತೆ ದಳದ ಪೊಲೀಸರು, 5 ವಾಹನ, 2 ಹಸು, 15 ಸಾವಿರ ರೂ. ನಗದನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನ ಆನೇಕಲ್ ಮೂಲದ ಫೈರೋಜ್ ಪಾಷ (40), ಸಾದಿಕ್ ಪಾಷ (30) ಮತ್ತು ಚಿಂತಾಮಣಿಯ ಸಬೀರ್ (35) ಬಂಧಿತರು. ಜೂ.24ರಂದು ಮಧ್ಯಾಹ್ನ ಪಟ್ಟಣ ಪೊಲೀಸ್ ಠಾಣೆ ಪಿಎಸ್‌ಐ ಉಮಾವತಿ ಹಾಗೂ ಕೊಳ್ಳೇಗಾಲ ಉಪವಿಭಾಗ ಡಿವೈಎಸ್ಪಿ ಅಪರಾಧ ಪತ್ತೆ ದಳದ ಪೊಲೀಸರು ಗಸ್ತಿನಲ್ಲಿದ್ದರು. ಈ ವೇಳೆ ಈ ಮೂವರು ತಾಲೂಕಿನ ದಾಸನಪುರ ರಸ್ತೆಯಲ್ಲಿ ಅನುಮಾನಸ್ಪದವಾಗಿ ಬೊಲೆರೋ ವಾಹನ, ಬೈಕ್‌ನಲ್ಲಿ ನಿಂತಿದ್ದರು. ಬಳಿಕ ಮೂವರನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ವಿವಿಧೆಡೆ ಕಳ್ಳತನ ಮಾಡಿರುವುದು ಪತ್ತೆಯಾಗಿದೆ. ಬಂಧಿತರಿಂದ 3 ಬೊಲೆರೋ ಪಿಕ್‌ಅಪ್ ವಾಹನ, 2 ಬೈಕ್, 2 ಹಸುಗಳು ಹಾಗೂ 15 ಸಾವಿರ ನಗದು ಸೇರಿದಂತೆ ಒಟ್ಟು 8.95 ಲಕ್ಷ ರೂ. ಬೆಲೆ ಬಾಳುವ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದು, ಬಂಧಿತ ಮೂವರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿದರು.

ಕಾರ್ಯಾಚರಣೆಯಲ್ಲಿ ವೃತ್ತ ನಿರೀಕ್ಷಕ ಶಿವಮಾದಯ್ಯ, ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆ ಅಪರಾಧ ವಿಭಾಗದ ಪಿಎಸ್‌ಐ ಉಮಾವತಿ, ರಾಮಪುರ ಪೊಲೀಸ್ ಠಾಣೆ ಪಿಎಸ್‌ಐ ರಾಧಾ, ಡಿವೈಎಸ್ಪಿ ಅಪರಾಧ ಪತ್ತೆ ದಳದ ಎಎಸ್‌ಐ ತಕ್ಕಿವುಲ್ಲಾ, ಸಿಬ್ಬಂದಿ ಅಮರೇಶ್ ರೆಡ್ಡಿ, ಸವಿರಾಜು, ಬಸವರಾಜು, ವೆಂಕಟೇಶ್, ಕಿಶೋರ್, ಬಿಳಿಗೌಡ, ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಒಂದನೇ ಪುಟದಿಂದ

2 ರೂ. ಹೆಚ್ಚಳ

ಅದೇ ರೀತಿ ಅರ್ಧ ಲೀಟರ್ ಹಾಲಿನ ಬೆಲೆ 22 ರೂ.ನಿಂದ 24ಕ್ಕೆ ಏರಿಕೆ ಮಾಡಲಾಗಿದೆ.

ಹಾಲಿನ ದರ ಹೆಚ್ಚಳ ಸಮರ್ಥಿಸಿಕೊಂಡಿರುವ ಒಕ್ಕೂಟ, ಹಾಲು ಉತ್ಪಾದನೆಯಲ್ಲಿ ಪ್ರತಿನಿತ್ಯ ಒಂದು ಕೋಟಿ ಲೀಟರ್ ಮೀರಿ ಸಂಗ್ರಹವಾಗುತ್ತಿದ್ದು, ಹೆಚ್ಚುವರಿ ಹಾಲನ್ನು ಗ್ರಾಹಕರಿಗೆ ತಲುಪಿಸಲು ಈ ನಿರ್ಣಯ ಅನಿವಾರ್ಯ ಎಂದಿದೆ.

ಇದುವರೆಗೂ ಗ್ರಾಹಕರಿಗೆ 500 ಎಂಎಲ್ ಹಾಲು ನೀಡುತ್ತಿದ್ದ ಜಾಗದಲ್ಲಿ ಇನ್ನು ಮುಂದೆ 550 ಎಂಎಲ್ ನೀಡಲಾಗುವುದು, ಅದೇ ರೀತಿ 1000 ಎಂಎಲ್ ಜಾಗದಲ್ಲಿ 1050 ಎಂಎಲ್ ಹೆಚ್ಚುವರಿ ಹಾಲನ್ನು ಗ್ರಾಹಕರಿಗೆ ನೀಡುವುದಾಗಿ ತಿಳಿಸಿದೆ. ಆದರೆ, ಮೊಸರಿನ ದರದಲ್ಲಿ ಯಾವುದೇ ಹೆಚ್ಚಳ ಮಾಡಿಲ್ಲ ಎಂದು ಒಕ್ಕೂಟ ಸ್ಪಷ್ಟಪಡಿಸಿದೆ. ಅರ್ಧಲೀಟರ್ ಹಾಲಿನ ಪ್ಯಾಕೇಟ್‌ನಲ್ಲಿ ಇನ್ನು ಮುಂದೆ 550 ಎಂಎಲ್ ಹಾಲು ಹಾಗೂ ಲೀಟರ್ ಪ್ಯಾಕೇಟ್‌ನಲ್ಲಿ 1,050 ಎಂಎಲ್ ಹಾಲು ಸಿಗಲಿದೆ. ಹಾಲು ಸಂಗ್ರಹಣಾ ಕೇಂದ್ರಗಳಿಗೆ ರೈತರು ಹೆಚ್ಚುವರಿಯಾಗಿ ತರುತ್ತಿರುವ ಹಾಲನ್ನು ನಿರಾಕರಿಸಬಾರದೆಂಬ ಸದುದ್ದೇಶದಿಂದ ಕೆಎಂಎಫ್ ಸಂಸ್ಥೆ ಪ್ಯಾಕೇಟ್ ಹಾಲಿನ ಪ್ರಮಾಣ ಹೆಚ್ಚಳ ತೀರ್ಮಾನ ಕೈಗೊಂಡಿದೆ. ರಾಜ್ಯದಲ್ಲಿ ಹಾಲಿನ ಉತ್ಪಾದನೆ ಶೇ.15 ಹೆಚ್ಚಳವಾಗಿದೆ, ಈ ಬಾರಿ ಸರಾಸರಿ 99 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ. ಹೆಚ್ಚುವರಿ ಉತ್ಪಾದಿತ ಹಾಲನ್ನು ರೈತರಿಂದ ಖರೀದಿ ಮಾಡಬೇಕಿದೆ.

ನಾಡಿನ ಲಕ್ಷಾಂತರ ಹೈನುಗಾರರ ಹಿತದೃಷ್ಟಿಯಿಂದ ಕೆ.ಎಂ.ಎಫ್ ಸಂಸ್ಥೆ ತೆಗೆದುಕೊಂಡ ನಿರ್ಣಯವಾಗಿದ್ದು, ಹೆಚ್ಚುವರಿ ಉದ್ಪಾದಿತ ಹಾಲನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುವ ಸದುದ್ದೇಶ ಹೊಂದಿದೆ. ಈಗಾಗಲೇ ಗರಿಷ್ಟ ಪ್ರಮಾಣದ ಹಾಲನ್ನು ಹಾಲಿನ ಪೌಡರ್ ತಯಾರಿಕೆ ಉದ್ದೇಶಕ್ಕೆ ಬಳಕೆ ಮಾಡಲಾಗುತ್ತಿದೆ, ನಿತ್ಯ ಸುಮಾರು 30 ಲಕ್ಷ ಲೀಟರ್ ಹಾಲು ಪೌಡರ್ ತಯಾರಿಕೆಗೆ ಬಳಸಲ್ಪಡುತ್ತಿದ್ದು, 250 ಮೆಟ್ರಿಕ್ ಟನ್ ಹಾಲಿನ ಪೌಡರ್ ತಯಾರಿಸಲಾಗುತ್ತಿದೆ. ಇದು ಹಾಲಿನ ಪೌಡರ್‌ಗೆ ಇರುವ ಬೇಡಿಕೆಗೆ ಅನುಗುಣವಾಗಿದೆ. ಈ ಹಿಂದೆ ಹಾಲಿನ ಬೆಲೆಯಲ್ಲಿ 3 ರೂ. ಹೆಚ್ಚಳ ಮಾಡಿ ಆ ಹಣವನ್ನು ರೈತರಿಗೆ ನೇರವಾಗಿ ವರ್ಗಾಯಿಸುವ ಪ್ರೋತ್ಸಾಹದಾಯಕ ಕ್ರಮ ಕೈಗೊಂಡಿದ್ದರಿಂದ ಹೈನೋದ್ಯಮ ಹಿಂದಿಗಿಂತ ಲಾಭ ತಂದುಕೊಡುವ ಉದ್ಯೋಗವಾಗಿದೆ, ಈ ಬಾರಿ ಉತ್ತಮ ಮಳೆಯಾಗಿ ಜಾನುವಾರುಗಳಿಗೆ ಹಸಿರು ಮೇವು ಲಭ್ಯವಾಗುತ್ತಿದೆ, ಈ ಕಾರಣಗಳಿಂದ ಹಾಲಿನ ಉತ್ಪಾದನೆ ನಿತ್ಯ ಸರಿ ಸುಮಾರು ಒಂದು ಕೋಟಿ ಲೀಟರ್ ತಲುಪುವ ಹಂತಕ್ಕೆ ಬಂದಿದೆ.

ಹೆಚ್ಚುವರಿ ಉತ್ಪಾದಿತ ಹಾಲನ್ನು ರೈತರಿಂದ ಖರೀದಿಸಿ, ಗ್ರಾಹಕರಿಗೂ ಹೊರೆಯಾಗದಂತೆ ಮಾರಾಟ ಮಾಡಲು ಕೆ.ಎಂ.ಎಫ್ ಸಂಸ್ಥೆ ಹಾಲಿನ ದರ ಹೆಚ್ಚಳ ನಿರ್ಧಾರ ಕೈಗೊಂಡಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಆಯ್ಕೆಯಾದ ಕೂಡಲೇ ಮಾಹಿತಿ ನೀಡಲಾಗುವುದು. ಜಿಲ್ಲಾಡಳಿತ, ಸಾಹಿತ್ಯ ಪರಿಷತ್ತಿನವರು ಸಾಹಿತಿಗಳ ಪಟ್ಟಿ ಒದಗಿಸಿದ ನಂತರ ಸರ್ಕಾರದೊಂದಿಗೆ ಚರ್ಚಿಸಿ ಅಂತಿಮಗೊಳಿಸಲು ತೀರ್ಮಾನಿಸಲಾಯಿತು ಎಂದು ತಿಳಿಸಿದರು.

ಮಂಡ್ಯದಲ್ಲಿ 48ನೇ ಸಾಹಿತ್ಯ ಸಮ್ಮೇಳನ 1974ರಲ್ಲಿ ಜಯದೇವಿ ತಾಯಿಲಿಗಾಡೆ ಅವರ ಅಧ್ಯಕ್ಷತೆಯಲ್ಲಿ, 63ನೇ ಸಾಹಿತ್ಯ ಸಮ್ಮೇಳನ 1994ರಲ್ಲಿ ಡಾ.ಚದುರಂಗ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಇದೀಗ ಮೂರನೇ ಬಾರಿ ಸಮ್ಮೇಳನ ಆಯೋಜಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಎಲ್ಲರೂ ಸೇರಿ ಸಮ್ಮೇಳನವನ್ನು ಯಶಸ್ವಿಯಾಗಿ ಅಯೋಜಿಸುವ ವಿಶ್ವಾಸ ನನಗಿದ್ದು, ಮಂಡ್ಯ ಜಿಲ್ಲೆಯ ಸಾಹಿತಿಗಳು, ಸಂಘಟಕರು, ನಾಗರೀಕರು ಕೈಜೋಡಿಸಿ ಅದ್ಧೂರಿಯಾಗಿ ಸಮ್ಮೇಳನ ನಡೆಸಲು ಮುಂದಾಗಬೇಕೆಂದು ಮನವಿ ಮಾಡಿದರು. ಸಭೆಯಲ್ಲಿ ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಶಿ, ಮಂಡ್ಯ ಜಿಲ್ಲೆಯ ಶಾಸಕರಾದ ಪಿ.ರವಿಕುಮಾರ್ ಗಣಿಗ, ಎ.ಬಿ.ರಮೇಶ ಬಂಡಿಸಿದ್ದೇಗೌಡ, ಕೆ.ವಿವೇಕಾನಂದ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಗಳಾದ ಕೆ.ಗೋವಿಂದರಾಜು, ನಸೀರ್ ಅಹ್ಮದ್, ಜಿಲ್ಲಾಧಿಕಾರಿ ಡಾ.ಕುಮಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯದವರನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಲು ಒತ್ತಾಯ

ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಮಂಡ್ಯ ಜಿಲ್ಲೆಯವರನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕೆಂದು ಜಿಲ್ಲೆಯ ಸಾಹಿತ್ಯ ವಲಯದಲ್ಲಿ ಒಕ್ಕೊರಲ ಒತ್ತಾಯ ಕೇಳಿ ಬಂದಿದೆ. ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಸಾಂಸ್ಕೃತಿಕ ಚಿಂತಕ ಪ್ರೊ.ಬಿ.ಜಯಪ್ರಕಾಶ್‌ಗೌಡ, ಕವಯತ್ರಿ ಡಾ.ಲತಾ ರಾಜಶೇಖರ್ ಸೇರಿದಂತೆ ಜಿಲ್ಲೆಯಲ್ಲಿ ಹಲವು ಹಿರಿಯ ಸಾಹಿತಿಗಳಿದ್ದು, ಈ ಪೈಕಿ ಒಬ್ಬರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕೆಂಬ ಕೂಗು ಎದ್ದಿದೆ. ಆದರೆ ಆ ಜಿಲ್ಲೆಯಲ್ಲಿ ಸಮ್ಮೇಳನ ನಡೆಯುತ್ತಿದೆ ಎಂದ ಮಾತ್ರಕ್ಕೆ ಅದೇ ಜಿಲ್ಲೆಯವರಿಗೆ ಅವಕಾಶ ಕೊಡಬೇಕೆಂದೇನಿಲ್ಲ. ಆದ್ದರಿಂದ ರಾಜ್ಯದ ಯಾವುದೇ ಸಾಹಿತಿಗಳನ್ನಾದರೂ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಸಾಧ್ಯತೆ ಇದ್ದು, ಸಿಎಂ ಸಿದ್ದರಾಮಯ್ಯ, ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಸೇರಿದಂತೆ ಹಲವರು ಈ ಬಗ್ಗೆ ಚರ್ಚಿಸಿ, ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ.

ಮಾಜಿ ಶಾಸಕ ಪ್ರೀತಂಗೌಡ ವಿರುದ್ಧ ಎಸ್‌ಐಟಿ FIR

ನೀಡಿರುವ ದೂರಿನ ಆಧಾರದ ಮೇಲೆ ಎಸ್‌ಐಟಿ ಪ್ರಕರಣ ದಾಖಲು ಮಾಡಿಕೊಂಡು ಮೊಕದ್ದಮೆ ಹೂಡಿದೆ. ಇದರಿಂದ ಪ್ರೀತಂ ಗೌಡ ಬಂಧನದ ಭೀತಿಯಲ್ಲಿದ್ದಾರೆ. ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ವಿರುದ್ಧ ಇದು ನಾಲ್ಕನೇ ಪ್ರಕರಣವಾಗಿದೆ. ನ್ಯಾಯಾಂಗ ಬಂಧನದಲ್ಲಿರುವ ಪ್ರಜ್ವಲ್ ಅವರನ್ನು ಎಸ್‌ಐಟಿ ಕಸ್ಟಡಿಗೆ ತೆಗೆದುಕೊಂಡಿದೆ. ಇದರ ಮಧ್ಯೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಜೂನ್ 29ರವರೆಗೂ ಪ್ರಜ್ವಲ್ ಅವರನ್ನು ಎಸ್‌ಐಟಿ ಕಸ್ಟಡಿಗೆ ನ್ಯಾಯಾಲಯ ನೀಡಿದೆ.

ಡಿಸಿಎಂ ಡಿಕೆಶಿ ಆದೇಶ

ಡಿ.ಕೆ. ಶಿವಕುಮಾರ್ ಸೇರಿದಂತೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಅರಣ್ಯ ಸಚಿವ ಈಶ್ವರ ಖಂಡ್ರೆಗೆ ದೂರು ನೀಡಿ ಇದರ ದುಷ್ಪರಿಣಾಮವನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

ಕೊಡಗು ಜಿಲ್ಲೆಯಲ್ಲಿ ಉಗಮಿಸುವ ಕಾವೇರಿ ನದಿ ಹರಿಯುವ ಮಾರ್ಗದ ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಶ್ರೀರಂಗಪಟ್ಟಣ, ಮೈಸೂರು, ನಂಜನಗೂಡು, ಟಿ.ನರಸೀಪುರ, ಕೊಳ್ಳೆಗಾಲ ಸೇರಿದಂತೆ ಇತರೆಡೆಯ ತ್ಯಾಜ್ಯ ನೀರು ಕಾವೇರಿ ನದಿ ಸೇರುತ್ತಿದೆ. ಈ ಭಾಗದ ನದಿ ಅಕ್ಕ ಪಕ್ಕದಲ್ಲಿ ಸ್ಥಾಪನೆಯಾಗಿರುವ ಕೈಗಾರಿಕೆಗಳ ರಾಸಾಯನಿಕಯುಕ್ತ ಕಲುಷಿತ ನೀರು ಕೂಡ ಕಾವೇರಿ ನದಿ ಒಡಲು ಸೇರುತ್ತಿದೆ ಎಂದು ದಿನೇಶ್ ಗೂಳಿಗೌಡ ಸರ್ಕಾರಕ್ಕೆ ಮನದಟ್ಟು ಮಾಡಿದ್ದರು. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ ಪ್ರತಿ ಲೀಟರ್ ಶುದ್ಧ ನೀರಿನಲ್ಲಿ 1 ಎಂ.ಜಿ.ಗಿಂತ ಕಡಿಮೆ ಬಯೋಕೆಮಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಓಡಿ) ಪ್ರಮಾಣ ಇರಬೇಕು. ಆದರೆ ಕಾವೇರಿ ನದಿ ನೀರಿನಲ್ಲಿ ಇದು 6 ಎಂ.ಜಿ.ಯಷ್ಟಿದೆ ಎಂಬ ವೈಜ್ಞಾನಿಕ ಅಂಶವನ್ನು ದಿನೇಶ್ ಗೂಳೀಗೌಡ ಮನವರಿಕೆ ಮಾಡಿಕೊಟ್ಟಿದ್ದರು. ತ್ಯಾಜ್ಯ ನೀರು ಕಾವೇರಿ ನದಿ ನೀರು ಸೇರುತ್ತಿರುವ ಸ್ಥಳದಲ್ಲಿ ಪರಿಶೀಲನೆ ನಡೆಸಬೇಕು. ತರುವಾಯ ತ್ಯಾಜ್ಯ ನೀರು ನದಿ ಸೇರದಂತೆ ಸ್ಥಳೀಯ ಪ್ರಾಧಿಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚೆ ನಡೆಸಿ ವರದಿ ನೀಡುವಂತೆ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಡಿ.ಕೆ.ಶಿವಕುಮಾರ್ ತಾಕೀತು ಮಾಡಿದ್ದಾರೆ.


ನದಿ ನೀರು ನೈರ್ಮಲ್ಯಗೊಳ್ಳದಂತೆ ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಲಿಖಿತ ಸೂಚನೆ ನೀಡಿದ್ದಾರೆ. ಜೊತೆಗೆ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ಸಮಿತಿ ರಚನೆ ಮಾಡಿ ಎರಡು ವಾರದಲ್ಲಿ ಸಮಗ್ರ ವರದಿ ನೀಡುವಂತೆ ಆದೇಶ ನೀಡಿದ್ದಾರೆ. ಒಟ್ಟಾರೆ ಜೀವನದಿ ಕಾವೇರಿ ಮಲೀನವಾಗದಂತೆ ಸರ್ಕಾರದ ಹಂತದಲ್ಲಿ ಈಗ ಪತ್ರಗಳ ಪ್ರಕ್ರಿಯೆ ಆರಂಭವಾಗಿದೆ. ಈಗ ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಿ ನದಿ ನೀರು ಕಲುಷಿತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳುತ್ತಾರೆ, ಸಚಿವರ ಆದೇಶವನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಾರೆ, ಕಾದು ನೋಡಬೇಕಿದೆ.

ಏನಿದು ಬಿಓಡಿ

ಜೈವಿಕ ಆಮ್ಲಜನಕ ಬೇಡಿಕೆ(ಬಿಓಡಿ) ನೀರಿನಲ್ಲಿನ ಮಾಲಿನ್ಯಕಾರಕ ಸಾವಯವ ವಸ್ತುಗಳ ಸಾಮಾನ್ಯ ಅಳತೆಗಳಲ್ಲಿ ಒಂದಾಗಿದೆ. ಇದು ನೀರಿನಲ್ಲಿ ಕೊಳೆಯುವ ಸಾವಯವ ಪದಾರ್ಥದ ಪ್ರಮಾಣವನ್ನು ಸೂಚಿಸುತ್ತದೆ. ಜೊತೆಗೆ ನೀರಿನ ಗುಣಮಟ್ಟದ ಸೂಚಕವೂ ಹೌದು. ಬಿಓಡಿ ಮಟ್ಟ ಹೆಚ್ಚಾದರೆ, ಕರಗಿದ ಆಮ್ಲಜನಕ(ಡಿಓ) ಮಟ್ಟವು ಕಡಿಮೆಯಾಗುತ್ತದೆ. ಏಕೆಂದರೆ, ನೀರಿನಲ್ಲಿ ಲಭ್ಯವಿರುವ ಆಮ್ಲಜನಕವನ್ನು ಬ್ಯಾಕ್ಟೀರಿಯಾಗಳು ಸೇವಿಸುತ್ತವೆ. ಇದರಿಂದ ನೀರಿನಲ್ಲಿ ಕರಗಿದ ಆಮ್ಲಜನಕ ಕ್ಷೀಣಿಸಿ ಮೀನು ಮತ್ತಿತರ ಜಲಚರಗಳ ಜೀವಕ್ಕೆ ಕುತ್ತಾಗುತ್ತದೆ. ಬಿಓಡಿ 1 ಎಂ.ಜಿ ಗಿಂತ ಕಡಿಮೆ ಇರಬೇಕು. ಈ ಪ್ರಮಾಣ ಜಾಸ್ತಿಯಾದರೆ ಜಲಚರಗಳಿಗೆ ಕಂಟಕವಾಗುವುದರ ಜೊತೆಗೆ ನದಿನೀರು ಬಳಸುವ ಮನುಷ್ಯರ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ ಎನ್ನಲಾಗಿದೆ.

ದೇಶಕ್ಕಾಗಿಯಲ್ಲ, ಜನರಿಗಾಗಿ ಅಲ್ಲ ಕೇವಲ ಅಧಿಕಾರ ಉಳಿಸಿಕೊಳ್ಳುವ ಸಲುವಾಗಿ ಶ್ರೀಮತಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದರು!

● ಮೈಸೂರಲ್ಲಿ 'ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ' ಸಂವಾದದಲ್ಲಿ ಪಿ.ರಾಜೀವ್ ಸವಿಸ್ತಾರ ವಿವರಣೆ ● ಅಂದು ಭಾರತದ ಶ್ರೇಷ್ಠ ಸಂವಿಧಾನ ದುರ್ಬಳಕೆ ಆಯಿತು; ಈಗ ಸಂವಿಧಾನ ರಕ್ಷಣೆ ಕೂಗು ಹಾಕುವವರು ಒಮ್ಮೆ ಇದರ ಬಗ್ಗೆ ಯೋಚಿಸಲಿ





ಮೈಸೂರಿನ ಕಲಾಮಂದಿರದಲ್ಲಿ ಸಿಟಿಜನ್ ಫಾರ್ ಸೋಷಿಯಲ್ ಜಸ್ಟೀಸ್ ಸಂಘಟನೆ ವತಿಯಿಂದ ಮಂಗಳವಾರ ಏರ್ಪಡಿಸಿದ್ದ 'ತುರ್ತು ಪರಿಸ್ಥಿತಿ– ಸಂವಿಧಾನಕ್ಕೆ ಮಾಡಿದ ಅಪಚಾರ' ಸಂವಾದ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ನೆರೆದಿದ್ದ ಸಭಿಕರು 'ವಂದೇ ಮಾತರಂ...' ಪ್ರಸ್ತುತಿ ವೇಳೆ ಎದ್ದುನಿಂತು ಗೌರವ ಸೂಚಿಸಿದ್ದನ್ನು ಕಾಣಬಹುದು.

ಮೈಸೂರು, ಜೂ25(ಎಸ್‌ಬಿಡಿ)– ಅಧಿಕಾರ ಉಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ಇಂದಿರಾಗಾಂಧಿ ಅವರು ತುರ್ತು ಪರಿಸ್ಥಿತಿ ಹೇರುವ ಮೂಲಕ ಶ್ರೇಷ್ಠ ಸಂವಿಧಾನವನ್ನು ದುರ್ಬಳಕೆ ಮಾಡಿಕೊಂಡರು ಎಂದು ಕುಡುಚಿ ಕ್ಷೇತ್ರದ ಮಾಜಿ ಶಾಸಕ ಹಾಗೂ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದರು.

ಸಿಟಿಜನ್ ಫಾರ್ ಸೋಷಿಯಲ್ ಜಸ್ಟೀಸ್ ಸಂಘಟನೆ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಏರ್ಪಡಿಸಿದ್ದ 'ತುರ್ತು ಪರಿಸ್ಥಿತಿ– ಸಂವಿಧಾನಕ್ಕೆ ಮಾಡಿದ ಅಪಚಾರ' ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸ್ವಾತಂತ್ರ್ಯ ಪುಕ್ಕಟೆಯಾಗಿ ಸಿಕ್ಕಿರುವ ಬಳುವಳಿಯಲ್ಲ. ಲಕ್ಷಾಂತರ ಮಂದಿ ಹುತಾತ್ಮರು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಆದರೆ ರಕ್ತದ ಕೋಡಿ ಹರಿಸಿ ಪಡೆದ ಸ್ವಾತಂತ್ರ್ಯದ ಹರಣ ತುರ್ತು ಪರಿಸ್ಥಿತಿಯಲ್ಲಿ ನಡೆಯಿತು ಎಂದರು.

ದೇಶಕ್ಕೆ ಆಘಾತ ಎದುರಾದಾಗ ಅಥವಾ ಬೇರೆ ರಾಷ್ಟ್ರಗಳು ಆಕ್ರಮಣ ಮಾಡಿದಾಗ ನಮ್ಮ ದೇಶದ ರಕ್ಷಣೆಗೆ ತುರ್ತು ಪರಿಸ್ಥಿತಿ ಕ್ರಮವನ್ನು ಅನುಸರಿಸಬಹುದು. ಆದರೆ ಅದು ಎಂದೂ ಬಳಕೆಯಾಗದಿರಲಿ ಎಂದು ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದರು. ಆದರೆ ದೇಶದ ಜನರ ಹಿತದೃಷ್ಟಿಯಲ್ಲಿ ಯಾವ ಗಂಭೀರ ಕಾರಣವೂ ಇಲ್ಲದೆ 1975ರ ಜೂನ್ 25ರಂದು ಅಂದಿನ ಪ್ರಧಾನಿ ಇಂದಿರಾಗಾಂಧಿ, ತಮ್ಮ ಅಧಿಕಾರ ಉಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ತುರ್ತು ಪರಿಸ್ಥಿತಿ ಹೇರಿದರು. ಬೆಳಗ್ಗೆ 8 ಗಂಟೆಗೆ ರೇಡಿಯೋದಲ್ಲಿ ಒಂದೇ ವಾಕ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದರು ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಪ್ರಗತಿಯ ತೇರನ್ನು ಇಲ್ಲಿಯವರೆಗೆ ನಾನು ಎಳೆದು ತಂದಿದ್ದೇನೆ. ಸಾಧ್ಯವಾದರೆ ಮುಂದಕ್ಕೆ ಎಳೆದೊಯ್ಯಲಿ, ದಯವಿಟ್ಟು ಹಿಂದಕ್ಕೆ ತಳ್ಳುವ ಪ್ರಯತ್ನ ನಡೆಯದಿರಲಿ ಎಂದಿದ್ದರು. ಆದರೆ ಇಂದಿರಾಗಾಂಧಿ ಅವರು 352ನೇ ವಿಧಿಯನ್ನು ದುರುಪಯೋಗ ಮಾಡುವ ಮೂಲಕ ಅಂಬೇಡ್ಕರ್ ಅವರು ಯಾವುದನ್ನು ಬೇಡ ಎಂದಿದ್ದರೋ ಅದನ್ನೇ ಮಾಡಿದರು. ಪ್ರತಿಯೊಬ್ಬ ಪ್ರಜೆಗಾಗಿ ಇರುವಂತಹ ಸಂವಿಧಾನವನ್ನು ಕೇವಲ ತಮ್ಮ ಪದವಿ ಉಳಿಕೊಳ್ಳಲು ಉಲ್ಲಂಘನೆ ಮಾಡಿದರು. ಕ್ಯಾಬಿನೆಟ್ ಒಪ್ಪಿಗೆಯನ್ನೂ ಪಡೆಯದೆ, ಯಾರಿಗೂ ಮಾಹಿತಿ ನೀಡದೆ ತುರ್ತು ಪರಿಸ್ಥಿತಿ ಹೇರಿದರು. ಅದಕ್ಕೆ ಮಧ್ಯರಾತ್ರಿ ಸಹಿ ಹಾಕಿದ ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರು ತಮ್ಮ ವಿವೇಚನಾ ಅಧಿಕಾರ ಬಳಸಿ ಕ್ಯಾಬಿನೆಟ್ ಅನುಮೋದನೆ ಕೇಳಿದ್ದರೆ ದೇಶದ ಇತಿಹಾಸವೇ ಬದಲಾಗುತ್ತಿತ್ತು ಎಂದು ಅಭಿಪ್ರಾಯಿಸಿದರು.

ಕರಾಳ ದಿನವದು: ಇಂದಿರಾಗಾಂಧಿ ಅವರು ಬೆಳಗ್ಗೆ 6ಕ್ಕೆ ಸಚಿವ ಸಂಪುಟದ ಸಭೆ ಕರೆದು ತುರ್ತು ಪರಿಸ್ಥಿತಿ ಜಾರಿ, ಜಯಪ್ರಕಾಶ್ ನಾರಾಯಣ್ ಬಂಧನದ ವಿಷಯ ತಿಳಿಸಿದರು. ಆ ಬಗ್ಗೆ ಪ್ರಶ್ನಿಸುವ ಧೈರ್ಯ ಒಬ್ಬರಿಗೂ ಇರಲಿಲ್ಲ. ಅರ್ಧ ಗಂಟೆಯಲ್ಲಿ ಸಭೆ ಮುಗಿಸಿ ನಂತರ ಆಕಾಶವಾಣಿ ಮೂಲಕ ದೇಶದ ಜನರಿಗೆ ಘೋಷಣೆ ಮಾಡಿದರು. ತಮ್ಮ ಪಟ್ಟಿಯಲ್ಲಿದ್ದ ಎಲ್ಲರನ್ನೂ ಬಂಧನ ಮಾಡಿಸಿದರು. ಯಾವ ಪತ್ರಿಕೆಯೂ ಮುದ್ರಣವಾಗದಂತೆ ವಿದ್ಯುತ್ ಸಂಪರ್ಕವನ್ನೇ ಕಡಿತ ಮಾಡಿಸಿದ್ದರು. ಆ ವೇಳೆಗೆ ಇಡೀ ದೇಶ ಸಂಪೂರ್ಣ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತು. ಬ್ರಿಟಿಷರು ಕೂಡ ಬದುಕುವ ಹಕ್ಕು ರದ್ದು ಮಾಡಿರಲಿಲ್ಲ. ಆದರೆ ತುರ್ತು ಪರಿಸ್ಥಿತಿಯಿಂದ ಮೌಲ್ಯಗಳ ಮೇಲೆ ನಡೆದ ದೌರ್ಜನ್ಯವನ್ನು ಎಂದಿಗೂ ಮರೆಯಲಾಗದು ಎಂದರು.

ಸಂವಿಧಾನ ದುರ್ಬಲಗೊಳಿಸಿದರು: ಸಂವಿಧಾನ, ಕಾನೂನು, ನ್ಯಾಯಾಂಗದ ಮೇಲಿನ ಆತಂಕ ಇಂದಿರಾಗಾಂಧಿಯವರನ್ನು ಕಾಡುತ್ತಿತ್ತು. ಯಾವುದಾದರೂ ನ್ಯಾಯಾಲಯ ತುರ್ತು ಪರಿಸ್ಥಿತಿಗೆ ತಡೆಯಾಜ್ಞೆ ನೀಡಬಹುದೇ? ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ತನ್ನ ಪ್ರಕರಣದಿಂದ ನಾನು ಅಧಿಕಾರ ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗಬಹುದೇ? ರಾಜಕೀಯ ನಾಯಕರನ್ನು ಬಂಧಿಸಿದ್ದರೂ ಜನ ದಂಗೆ ಏಳಬಹುದೇ? ಎಂಬ ಆತಂಕದಿಂದ ಸಂವಿಧಾನವನ್ನೇ ದುರ್ಬಲಗೊಳಿಸಲು ಮುಂದಾದರು. ತುರ್ತು ಪರಿಸ್ಥಿತಿ ಮೂಲಕ ಜನಸಾಮಾನ್ಯರಿಗಿಂತ ಸಂವಿಧಾನದ ಮೇಲೆ ಘೋರ ದಾಳಿ ನಡೆಸಿದರು ಎಂದು ಆರೋಪಿಸಿದರು.

ನಾಲ್ಕು ತಿದ್ದುಪಡಿಗಳು: ಸಂವಿಧಾನದಲ್ಲಿ 38ನೇ ತಿದ್ದುಪಡಿ ಮೂಲಕ ರಾಷ್ಟ್ರಪತಿಗಳ ತೀರ್ಮಾನವೇ ಅಂತಿಮವಾಗಿದ್ದು, ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ ಎಂಬ ಕಾನೂನು ತಂದರು. 39ನೇ ತಿದ್ದುಪಡಿ ಮೂಲಕ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಸ್ಪೀಕರ್ ಆಯ್ಕೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸದಂತೆ ಮಾಡಿದರು. ತಮ್ಮ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದ್ದ ಕಾರಣ ಈ ಕಾನೂನನ್ನು 40ನೇ ತಿದ್ದುಪಡಿ ಮೂಲಕ ಪೂರ್ವಾನ್ವಯಗೊಳಿಸಿದ್ದಲ್ಲದೆ, ಈ ಹಿಂದಿನ ಪ್ರಕರಣಗಳನ್ನು ರದ್ದಾಗುವಂತೆ ಮಾಡಿದರು. 41 ಹಾಗೂ 42ನೇ ತಿದ್ದುಪಡಿ ಮೂಲಕ ತಮ್ಮ ರಕ್ಷಣೆಗೆ ಬೇಕಾದನ್ನೆಲ್ಲಾ ಮಾಡಿದರು. ತುರ್ತು ಪರಿಸ್ಥಿತಿ ವೇಳೆಯ ಈ ನಾಲ್ಕು ತಿದ್ದುಪಡಿ ಆಗಿದ್ದು, ಓರ್ವ ವ್ಯಕ್ತಿಯ ಅಧಿಕಾರ ಉಳಿಸುವ ಕಾರಣದಿಂದ ಮಾತ್ರ ಎಂದರು.

44ನೇ ತಿದ್ದುಪಡಿ ರಕ್ಷಣೆ: ನಾಲ್ಕು ತಿದ್ದುಪಡಿ ಮೂಲಕ ಮೂಲಭೂತ ಹಕ್ಕುಗಳನ್ನು ಕಸಿಯಲಾಗಿತ್ತು. ಬಂಧಿಸಲಾದ ವ್ಯಕ್ತಿ, ಬದುಕಿದ್ದಾನೋ ಸಾವನ್ನಪ್ಪಿದ್ದಾನೋ ಎಂದು ತಿಳಿಯುವುದಕ್ಕೂ ಅವಕಾಶವಿರಲಿಲ್ಲ. ಬ್ರಿಟಿಷರ ಕಾಲದಲ್ಲೂ ಜನಸಾಮಾನ್ಯರ ಮೇಲೆ ಇಷ್ಟೊಂದು ದೌರ್ಜನ್ಯ ಮಾಡಿರಲಿಲ್ಲ. ಮತ್ತೆ ನೀವೇ ಅಧಿಕಾರಕ್ಕೆ ಬರುತ್ತೀರೆಂದು ಆಂತರಿಕ ವರದಿ ಲಭ್ಯವಾಗಿದ್ದರಿಂದ ಇಂದಿರಾಗಾಂಧಿ ಅವರು ತುರ್ತು ಪರಿಸ್ಥಿತಿ ವಾಪಸ್ ಪಡೆದು, ಚುನಾವಣೆಗೆ ಹೋಗಿ ಸೋತರು. ನಂತರ ಮೊರಾರ್ಜಿ ದೇಸಾಯಿ ಹಾಗೂ ವಾಜಪೇಯಿ ನಾಯಕತ್ವದ ಸರ್ಕಾರ ತುರ್ತು ಪರಿಸ್ಥಿತಿ ವೇಳೆ ಆದ ಎಲ್ಲಾ ತಿದ್ದುಪಡಿಗಳನ್ನೂ ವಾಪಸ್ ಪಡೆದರು. ಅಲ್ಲದೆ 44ನೇ ತಿದ್ದುಪಡಿ ಮೂಲಕ ಇಂತಹ ಸಂದರ್ಭದಲ್ಲಿ ಪಾರ್ಲಿಮೆಂಟ್ ಅನುಮೋದನೆ ಕಡ್ಡಾಯ ಹಾಗೂ ಆ ಬಗ್ಗೆ ಯಾರಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶ ಕಲ್ಪಿಸಿದರು. ಈ ಮೂಲಕ ಶ್ರೇಷ್ಠ ಸಂವಿಧಾನ ಸುರಕ್ಷಿತ ವಲಯಕ್ಕೆ ಮರಳಿತು ಎಂದು ತಿಳಿಸಿದರು.

ಜನತೆ ಕ್ಷಮೆಯಾಚಿಸಿ: ಇಂದು ಸಂವಿಧಾನ ಅಪಾಯದಲ್ಲಿದೆ ಎನ್ನುತ್ತಾರೆ. ಆದರೆ ಸಂವಿಧಾನದ ಮೂಲ ಆಶಯಗಳಿಗೆ ಕೊಡಲಿ ಪೆಟ್ಟು ಬಿದ್ದಿದ್ದು, ಅಪಚಾರ ಆಗಿದ್ದು ಯಾರಿಂದ? ಅಧಿಕಾರ ರಕ್ಷಣೆಗೆ ಸಂವಿಧಾನ ದುರ್ಬಳಕೆ ಮಾಡಿಕೊಂಡಿದ್ದು ಯಾರು? ಎಂದು ಜನರಿಗೆ ತಿಳಿಸಿ, ಅವರ ಕ್ಷಮೆಯಾಚಿಸಬೇಕು. ಸಂವಿಧಾನದ ದುರುಪಯೋಗ ಮತ್ತೆ ಆಗಬಾರದು ಎಂಬ ಜಾಗೃತೆಯ ಜನತೆಯಲ್ಲಿ ಇರಬೇಕು. ಸಂವಿಧಾನದ ಶ್ರೇಷ್ಠತೆಯನ್ನು ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಮೈಸೂರು ವಿವಿ ಅರ್ಥಶಾಸ್ತ್ರ ವಿಭಾಗದ ಡಾ.ಕೆ.ಸಿ.ಬಸವರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಭೈರತಿ ಬಸವರಾಜು, ಟಿ.ಎಸ್.ಶ್ರೀವತ್ಸ, ಮಾಜಿ ಕಾರ್ಪೊರೇಟರ್ ವೇದಾವತಿ ವೇದಿಕೆಯಲ್ಲಿದ್ದರು. ಮಾಜಿ ಎಂಎಲ್‌ಸಿ ತೋಂಟದಾರ್ಯ, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಮಾಜಿ ಶಾಸಕರಾದ ಎಸ್.ಬಾಲರಾಜ್, ನಿರಂಜನ್ ಕುಮಾರ್, ಆರ್‌ಎಸ್‌ಎಸ್ ಹಿರಿಯ ಮುಖಂಡ ಮಾ.ವೆಂಕಟರಾಮು, ವಕೀಲ ಅರುಣ್ ಕುಮಾರ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್, ಮುಖಂಡರಾದ ರಘು ಕೌಟಿಲ್ಯ, ಎಲ್.ಆರ್.ಮಹದೇವಸ್ವಾಮಿ, ಎನ್.ವಿ.ಫಣೀಶ್, ಬಿ.ಎಂ.ರಘು, ಜಯಪ್ರಕಾಶ್(ಜೆಪಿ), ವಿ.ಶೈಲೇಂದ್ರ, ಎಸ್.ಕೆ.ದಿನೇಶ್, ಗಿರಿಧರ್, ಜೋಗಿ ಮಂಜು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಾಗೃತ ಭೂಮಿ....

ಮೈಸೂರೆಂದರೆ ವಿಶೇಷ. 12ನೇ ಶತಮಾನದಲ್ಲಿ ಬಸವಾದಿ ಶರಣರ ಅನುಭವ ಮಂಟಪವನ್ನು ಮೊದಲ ಪಾರ್ಲಿಮೆಂಟ್ ಎನ್ನುತ್ತಾರೆ. ಹಾಗೆಯೇ ಸ್ವಾತಂತ್ರ್ಯ ಪೂರ್ವದಲ್ಲೇ ಸಾಮಾಜಿಕ ನ್ಯಾಯದ ಚಿಂತನೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಲ್ಲಿತ್ತು. ಮಿಲ್ಲರ್ ಕಮಿಷನ್ ಮೂಲಕ ದಲಿತ ಹಾಗೂ ಎಲ್ಲಾ ಶೋಷಿತ ಸಮುದಾಯಗಳಿಗೆ ಮೀಸಲಾತಿ ನೀಡಿದರು. ಅಂತಹ ಜಾಗೃತ ಭೂಮಿ ಮೈಸೂರು. ಅಲ್ಲದೆ 2003ರಲ್ಲಿ ಇಲ್ಲಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನಾನು ಎಸ್‌ಐ ತರಬೇತಿ ಪಡೆದಿದ್ದೆ ಎಂದು ಶಾಸಕ ಪಿ.ರಾಜೀವ್ ತಿಳಿಸಿದರು.

> ಭಾರತದ ಇತಿಹಾಸದಲ್ಲಿ ತುರ್ತು ಪರಿಸ್ಥಿತಿ ಒಂದು ಕರಾಳ ಅಧ್ಯಾಯ. ಯಾವುದೇ ಪ್ರಬಲ ಕಾರಣವಿಲ್ಲದೆ ಕೇವಲ ಅಧಿಕಾರದ ಉಳಿವಿಗಾಗಿ ತುರ್ತು ಪರಿಸ್ಥಿತಿ ಹೇರಿದರು ಹೋರಾಟಗಾರರಿಗೆ ಚಿತ್ರಹಿಂಸೆ ನೀಡಿದರು. ಹಕ್ಕುಗಳನ್ನು ಕಿತ್ತು ಗುಲಾಮಿ ಪರಿಸ್ಥಿತಿ ನಿರ್ಮಾಣ ಮಾಡಿದ್ದು ಒಂದು ಮುಖ. ಆದರೆ ಭಾರತದ ನೆಲಕ್ಕೆ ಅಗತ್ಯವಾದ ಶ್ರೇಷ್ಠ ಸಂವಿಧಾನದ ಮೇಲೆ ನಡೆದ ಘೋರ ಗದಾಪ್ರಹಾರ, ಅಪಚಾರ, ವಿಕೃತಗೊಳಿಸುವ ಪ್ರಯತ್ನ ತುರ್ತು ಪರಿಸ್ಥಿತಿಯ ಮತ್ತೊಂದು ಮುಖವಾಗಿದೆ. ಅಂದು ಸಂವಿಧಾನಕ್ಕೆ ಅಪಚಾರ ಮಾಡಿದವರು ಇಂದು ಸಂವಿಧಾನ ರಕ್ಷಕರು ಎಂದು ಬೀಗುತ್ತಿದ್ದಾರೆ.
>
> -ಎನ್.ವಿ.ಫಣೀಶ್, ಸಹ ಸಂಚಾಲಕ ಸಿಟಿಜನ್ ಫಾರ್ ಸೋಷಿಯಲ್ ಜಸ್ಟೀಸ್

> ನಾವೆಂದೂ ಸಂವಿಧಾನಕ್ಕೆ ಅಪಚಾರ ಮಾಡಿಲ್ಲ. ಆದರೆ ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂದು ಸುಳ್ಳು ಹರಡಿ, ಷಡ್ಯಂತ್ರ ಮಾಡಿದರು. ಇಂದಿರಾಗಾಂಧಿ ಅವರು ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಿದ್ದರು ಎಂಬುದಕ್ಕೆ ತುರ್ತು ಪರಿಸ್ಥಿತಿ ಒಂದು ಉದಾಹರಣೆ. ಹಲವರ ಹೋರಾಟದಿಂದ ಸಂವಿಧಾನ ರಕ್ಷಣೆಯಾಗಿದೆ. ಅಂದಿನ ಕಾಂಗ್ರೆಸ್ ಸರ್ಕಾರ ಅಧಿಕಾರ ದಾಹದಿಂದ ತುರ್ತು ಪರಿಸ್ಥಿತಿ ಹೇರಿತು ಎಂಬ ಜಾಗೃತಿ ವ್ಯಾಪಕವಾಗಬೇಕು.
>
> -ಭೈರತಿ ಬಸವರಾಜ್, ಶಾಸಕ

ಹೆಚ್.ಡಿ.ಕೋಟೆ ಸಮೀಪದ 'ಮಲ್ಲೇಶ್ವರ ಗುಡ್ಡ' ಸದ್ಯದಲ್ಲೇ ಮೀಸಲು ಅರಣ್ಯ!

● ಜಯಪುರ, ಹಂಪಾಪುರ ಹೋಬಳಿ ವ್ಯಾಪ್ತಿಗೆ ಸೇರುವ ಗುಡ್ಡ ● 243.84 ಹೆಕ್ಟೇರ್ ಪ್ರದೇಶ, ಆ.22ರೊಳಗೆ ಹಕ್ಕು, ಋಣದ ಬಗ್ಗೆ ಆಕ್ಷೇಪಕ್ಕೆ ಅವಕಾಶ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜೂ.25– ಭವಿಷ್ಯದ ಉತ್ತಮ ಪರಿಸರದ ದೃಷ್ಟಿಯಿಂದ ಅರಣ್ಯ ಇಲಾಖೆ ಈಗಾಗಲೇ ವಿವಿಧ ಕಾರ್ಯಕ್ರಮ ರೂಪಿಸಿದ್ದು, ರಾಜ್ಯದ ವಿವಿಧೆಡೆ ಇರುವ ಪ್ರಾದೇಶಿಕ ವಿಭಾಗ ಅರಣ್ಯವನ್ನು ಮೀಸಲು ಅಥವಾ ಸಂರಕ್ಷಿತ ಅರಣ್ಯವಾಗಿ ಮಾರ್ಪಡಿಸಲು ಕ್ರಮ ಕೈಗೊಂಡಿರುವ ಬೆನ್ನಲ್ಲೇ ಹೆಚ್.ಡಿ.ಕೋಟೆ ತಾಲೂಕಿನ 'ಮಲ್ಲೇಶ್ವರ ಗುಡ್ಡ'ವನ್ನೊಳಗೊಂಡ ವಿವಿಧ ಬ್ಲಾಕ್‌ಗಳನ್ನು ಮೀಸಲು ಅರಣ್ಯವಾಗಿಸಲು ಉದ್ದೇಶಿಸಲಾಗಿದೆ.

ಕಳೆದ ಕೆಲ ವರ್ಷಗಳಿಂದ ಹವಾಮಾನದಲ್ಲಾಗುತ್ತಿರುವ ವೈಪರೀತ್ಯಕ್ಕೆ ಪರಿಸರ ಮಾಲಿನ್ಯ, ಅರಣ್ಯ ನಾಶವೇ ಕಾರಣ ಎಂದು ಮನವರಿಕೆಯಾಗಿದ್ದು, ಇದೀಗ ಅರಣ್ಯ ಪ್ರದೇಶ ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಪ್ರದೇಶ ಒತ್ತುವರಿ ತೆರವು ಸೇರಿದಂತೆ ಪ್ರಾದೇಶಿಕ ಅರಣ್ಯ ಪ್ರದೇಶವನ್ನು ಮೀಸಲು ಅರಣ್ಯವಾಗಿ ಮೇಲ್ದರ್ಜೆಗೇರಿಸಿ, ಅಲ್ಲಿನ ಸಸ್ಯ ಹಾಗೂ ಪ್ರಾಣಿ ಸಂಪತ್ತನ್ನು ಕಾಪಾಡಲು ಅರಣ್ಯ ಇಲಾಖೆ ದಿಟ್ಟ ಹೆಜ್ಜೆ ಇಟ್ಟಿದೆ. ಮೈಸೂರಿನ ದಟ್ಟಗಳ್ಳಿಯಲ್ಲಿರುವ ಲಿಂಗಾಂಬುದಿ ಕೆರೆ ಆವರಣದ 216.23 ಎಕರೆ ಅರಣ್ಯ ಪ್ರದೇಶವನ್ನು ಮೀಸಲು ಅರಣ್ಯವಾಗಿ ಘೋಷಿಸುವ ಪ್ರಕ್ರಿಯೆ ಬೆನ್ನಲ್ಲೇ ಇದೀಗ 'ಮಲ್ಲೇಶ್ವರ ಗುಡ್ಡ'ಕ್ಕೆ ಹೊಂದಿಕೊಂಡಂತಿರುವ ಪ್ರಾದೇಶಿಕ ವಿಭಾಗದ ಅರಣ್ಯ ಇಲಾಖೆಗೆ ಸೇರಿದ ವಿವಿಧ ಬ್ಲಾಕ್‌ಗಳನ್ನು ಮೀಸಲು ಅರಣ್ಯವಾಗಿ ಘೋಷಿಸುವ ಪ್ರಕ್ರಿಯೆ ಆರಂಭಿಸಲಾಗಿದೆ.

243.84 ಹೆಕ್ಟೇರ್ ಪ್ರದೇಶ: ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ, ಜಯಪುರ ಹೋಬಳಿ ವ್ಯಾಪ್ತಿಯ ವಿವಿಧ ಬ್ಲಾಕ್(ಕರ) ಕ್ಷೇತ್ರವನ್ನು 1994ರ ಜ.19ರಂದು ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್–4ರ ಅರಣ್ಯ ಎಂದು ಘೋಷಿಸಲಾಗಿತ್ತು. ಆ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಮದ್ದೂರು ಸರ್ವೆ ನಂ.173, ಚಾಮಲಾಪುರ ಸರ್ವೆ ನಂ.3 ಮತ್ತು 3ಎ, ಹೊಸಮಾಳ ಕರಗಳ ಸರ್ವೆ ನಂ 189 ಮತ್ತು 200ರ ವ್ಯಾಪ್ತಿಗೆ ಸೇರಿದ 243.84 ಎಕರೆ ಪ್ರಾದೇಶಿಕ ಅರಣ್ಯ ಪ್ರದೇಶವನ್ನು ಇದೀಗ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್–5ಕ್ಕೆ ಸೇರಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಆಕ್ಷೇಪಗಳಿದ್ದರೆ ಸ್ವೀಕರಿಸಲು ಸರ್ಕಾರ ಅರಣ್ಯ ವ್ಯವಸ್ಥಾಪನಾಧಿಕಾರಿಯೊಬ್ಬರನ್ನು ನಿಯೋಜಿಸಿದೆ.




ಮೀಸಲು ಅರಣ್ಯ ಘೋಷಣೆಗಾಗಿ ಗುರುತಿಸಿರುವ ಹೆಚ್.ಡಿ.ಕೋಟೆ ತಾಲೂಕಿನ ಮಲ್ಲೇಶ್ವರ ಗುಡ್ಡ.

ಅರಣ್ಯ ಇಲಾಖೆ ವಶದಲ್ಲಿ: ಮೀಸಲು ಅರಣ್ಯ ಪ್ರದೇಶವಾಗಿಸಲು ಉದ್ದೇಶಿಸಿರುವ ಮಲ್ಲೇಶ್ವರ ಗುಡ್ಡ ಸೇರಿದಂತೆ ವಿವಿಧ ಬ್ಲಾಕ್(ಕರ)ಗಳ ಅರಣ್ಯ ಪ್ರದೇಶ ಮೈಸೂರು ಪ್ರಾದೇಶಿಕ ವಿಭಾಗದ ಅರಣ್ಯ ಇಲಾಖೆಯ ಸುಪರ್ದಿಯಲ್ಲಿದೆ. ಗಿಡ–ಮರಗಳಿಂದ ಹಚ್ಚ ಹಸಿರಾಗಿರುವ ಈ ಪ್ರಾದೇಶಿಕ ಅರಣ್ಯ ಪ್ರದೇಶ ಸುತ್ತಮುತ್ತಲಿನ ಗ್ರಾಮಗಳ ಜಾನುವಾರುಗಳಿಗೆ ಮೇವು ಒದಗಿಸುವ ತಾಣವೂ ಆಗಿದೆ. ಈಗಾಗಲೇ ಅರಣ್ಯ ಪ್ರದೇಶದಂತಿರುವ ಈ ಬ್ಲಾಕ್‌ಗಳಲ್ಲಿ ಜಿಂಕೆ, ಚಿರತೆ, ಕಾಡುಹಂದಿ, ಮೊಲ, ನವಿಲು, ಸೀವೆಟ್ ಕ್ಯಾಟ್ ಸೇರಿದಂತೆ ಇನ್ನಿತರ ಪ್ರಾಣಿಗಳ ಆವಾಸ ಸ್ಥಾನವಾಗಿಯೂ ಮಾರ್ಪಟ್ಟಿದೆ.

ಎರಡು ಹಂತದಲ್ಲಿ ಕ್ರಮ: ಪ್ರಸ್ತುತ ಉದ್ದೇಶಿತ ಅರಣ್ಯ ಪ್ರದೇಶ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್–4ರ ವ್ಯಾಪ್ತಿಗೆ ಸೇರಿರುವ ಅರಣ್ಯ ಪ್ರದೇಶವಾಗಿದೆ. ಅದನ್ನು ಮೀಸಲು ಅರಣ್ಯ ಪ್ರದೇಶವಾಗಿಸಲು ಎರಡು ಹಂತದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಮೊದಲು ಆ ಪ್ರದೇಶವನ್ನು ಸೆಕ್ಷನ್–5ಕ್ಕೆ ಸೇರಿಸಬೇಕಾಗಿದೆ. ಆ ನಂತರ ಸೆಕ್ಷನ್–17ಕ್ಕೆ ಸೇರಿಸಿದರೆ ಅಧಿಕೃತವಾಗಿ ಮೀಸಲು ಅರಣ್ಯ ಪ್ರದೇಶ. ಅದಕ್ಕಾಗಿ ಮೊದಲ ಹಂತದ ಪ್ರಕ್ರಿಯೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.





ಮದ್ದೂರು ಸರ್ವೆ ನಂ.173, ಚಾಮಲಾಪುರ ಸರ್ವೆ ನಂ.3 ಮತ್ತು 3ಎ, ಹೊಸಮಾಳ ಕರಗಳ ಸರ್ವೆ ನಂ 189 ಮತ್ತು 200ರ ವ್ಯಾಪ್ತಿಗೆ ಸೇರಿದ 243.84 ಎಕರೆ ಪ್ರಾದೇಶಿಕ ಅರಣ್ಯ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್–5ಕ್ಕೆ ಸೇರಿಸಲು ಆಕ್ಷೇಪ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಪ್ರದೇಶದ ಹಕ್ಕು, ಋಣ, ಕ್ಲೇಮ್‌ಗಳಿದ್ದರೆ ಅಗತ್ಯ ದಾಖಲೆಗಳೊಂದಿಗೆ 'ಅರಣ್ಯ ವ್ಯವಸ್ಥಾಪನಾಧಿಕಾರಿ', ಕೆಎಸ್‌ಡಿಎಲ್ ಕಾಂಪೌಂಡ್, ಡಾ.ಬಿ.ಆರ್.ಅಂಬೇಡ್ಕರ್ ಮುಖ್ಯರಸ್ತೆ, ಎನ್‌ಐಇ ಕಾಲೇಜು ಹಿಂಭಾಗ, ಅಶೋಕಪುರಂ, ಮೈಸೂರು–570008 ಈ ವಿಳಾಸಕ್ಕೆ ಅಂಚೆ ಅಥವಾ ಖುದ್ದಾಗಿ ಆ.22ರೊಳಗೆ ಸಲ್ಲಿಸಬಹುದಾಗಿದೆ.

ಆಗುವ ಲಾಭ: ಪ್ರಾದೇಶಿಕ ವಿಭಾಗದ ಅರಣ್ಯ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶವಾಗಿ ಘೋಷಿಸುವುದರಿಂದ, ಅಲ್ಲಿನ ಅರಣ್ಯ ಸಂಪತ್ತನ್ನು ಕಾಪಾಡಿಕೊಳ್ಳಲು ಬಿಗಿ ಕ್ರಮ ಕೈಗೊಳ್ಳಲಾಗುತ್ತದೆ. ಇದರಿಂದ ಮುಂದಿನ 5–10 ವರ್ಷದಲ್ಲಿ ಆ ಪ್ರದೇಶದಲ್ಲಿ ಹೇರಳವಾಗಿ ಗಿಡ–ಮರ ಬೆಳೆಯುವುದರಿಂದ ಸುತ್ತಮುತ್ತಲಿನ ಗ್ರಾಮಗಳ ವಾತಾವರಣ ತಂಪಾಗಿರುವುದಲ್ಲದೆ, ಆ ಭಾಗದಲ್ಲಿ ಮಳೆ ಕೊರತೆ ನೀಗಲು ಕಾರಣವಾಗುತ್ತದೆ. ಅಲ್ಲದೆ, ಅಂತರ್ಜಲ ಪ್ರಮಾಣವೂ ವೃದ್ಧಿಯಾಗಿ ಕೃಷಿ ಚಟುವಟಿಕೆ ಸರಾಗವಾಗಲಿದೆ.

ಪ್ರಜಾಪ್ರಭುತ್ವ ಉಳಿವಿಗೆ ಸಂವಿಧಾನ ರಕ್ಷಣೆ ಅಗತ್ಯ

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಹುಲ್ಲಹಳ್ಳಿಯಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ನಂಜನಗೂಡು, ಜೂ.25– ಡಾ.ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನದಿಂದ ನಮ್ಮೆಲ್ಲರ ಬದುಕು ಹಸನಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿಯಲ್ಲಿ ಮಂಗಳವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ಉಳಿಸಲು ನಾವೆಲ್ಲರೂ ಸಂವಿಧಾನ ರಕ್ಷಣೆ ಮಾಡಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಶಾಲಾ, ಕಾಲೇಜುಗಳಲ್ಲಿ ನಿತ್ಯ ಸಂವಿಧಾನ ಪೀಠಿಕೆ ಓದಬೇಕೆಂಬ ಸೂಚನೆ ನೀಡಲಾಯಿತು. ಇದರಿಂದ 3 ವರ್ಷದ ಮಕ್ಕಳು ಸಹ ಮಗ್ಗಿ ಹೇಳುವ ರೀತಿ ಸಂವಿಧಾನ ಹೇಳುತ್ತಿದ್ದಾರೆ ಎಂದರು.

ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಪೋಷಕರು ಅವರಿಗೆ ಗುಣಮಟ್ಟದ ಶಿಕ್ಷಣ ಕೊಡಿಸಲು ಮುಂದಾಗಬೇಕು. ಸದೃಢ ದೇಶ ನಿರ್ಮಾಣಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಿದ್ಧಾಂತದಲ್ಲಿ ನಂಬಿಕೆ ಇಟ್ಟು ಸಾಗಬೇಕು. ಆ ಮೂಲಕ ಸಮೃದ್ಧ ಭಾರತ ನಿರ್ಮಾಣವಾಗಲಿದ್ದು, ಆ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಸಚಿವರು ಆಕರ್ಷಕ ಮೆರವಣಿಗೆಗೆ ಚಾಲನೆ ನೀಡಿದರು. ಅಂಬೇಡ್ಕರ್ ಜಯಂತಿ ಪ್ರಯುಕ್ತ ನಡೆದ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಶಾಸಕ ದರ್ಶನ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕೇಶವಮೂರ್ತಿ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಮಹಾಪೌರ ಪುರುಷೋತ್ತಮ್, ಗ್ರಾಪಂ ಅಧ್ಯಕ್ಷೆ ದೇವಮ್ಮ ಹುಚ್ಚಯ್ಯ, ಉಪಾಧ್ಯಕ್ಷ ಹೆಚ್.ಪಿ.ಲೋಕೇಶ್, ಸದಸ್ಯರಾದ ಹೆಚ್.ಜೆ.ಮಲ್ಲಿಕಾರ್ಜುನ, ಕುಮಾರ್, ಚೌಡಯ್ಯ, ಅನ್ಸರ್ ಅಹಮದ್, ಪ್ರತಾಪ್, ಸೋಮಶೇಖರ್, ನಾಗೇಂದ್ರ ಮಾಜಿ ಸದಸ್ಯ ನದೀಮ್ ಅಹಮದ್, ಮರಿಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜು, ಜಿಪಂ ಮಾಜಿ ಸದಸ್ಯ ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ ಸೇರಿದಂತೆ ಭೀಮ ಬಳಗ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಚುಂಚನಕಟ್ಟೆ ಶ್ರೀಕೋದಂಡರಾಮ ದೇವಾಲಯದಲ್ಲಿ 9.45 ಲಕ್ಷ ಸಂಗ್ರಹ



ದೇವಾಲಯದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು.

ಚುಂಚನಕಟ್ಟೆ, ಜೂ.25– ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಶ್ರೀಕೋದಂಡ ರಾಮ ದೇವಾಲಯದ ಹುಂಡಿಯಲ್ಲಿ 9.45 ಲಕ್ಷ ರೂ. ಸಂಗ್ರಹವಾಗಿದೆ.

ಸಾಲಿಗ್ರಾಮ ತಹಸೀಲ್ದಾರ್ ನರಗುಂದ, ಉಪ ತಹಸೀಲ್ದಾರ್ ಶರತ್ ಕುಮಾರ್ ನೇತೃತ್ವದ ತಂಡ ಹುಂಡಿ ಎಣಿಕೆ ಕಾರ್ಯ ಕೈಗೊಂಡಿದ್ದು, ಹುಂಡಿಯಲ್ಲಿದ್ದ 9,45,605 ರೂ.ಗಳನ್ನು ದೇವಾಲಯದ ಎಸ್‌ಬಿಐ ಹಳೆಯೂರು ಶಾಖೆಯ ಖಾತೆಗೆ ಜಮಾ ಮಾಡಲಾಗಿದೆ.

ಈ ವೇಳೆ ದೇವಾಲಯದ ಇಓ ರಘು, ಚಿದಾನಂದ, ಪಾರು ಪತ್ತೇದಾರ ಯತಿರಾಜ್ ಸಿಬ್ಬಂದಿ ಐಶ್ವರ್ಯ, ರಾಕೇಶ್, ಆದಿ, ರೇಖಾ, ದೇವಾಲಯದ ಅರ್ಚಕ ನಾರಾಯಣ ಅಯ್ಯಂಗಾರ್, ವಾಸುದೇವನ್, ಅನಂತು, ಹರೀಶ, ಚಂದ್ರ ನಾಯಕ, ತಿಮ್ಮಣ್ಣ, ಶಿವಣ್ಣ ಇತರರಿದ್ದರು.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.69 ಕೋಟಿ ರೂ. ಸಂಗ್ರಹ



ದೇವಾಲಯದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು

ನಂಜನಗೂಡು, ಜೂ.25– ಇಲ್ಲಿನ ಶ್ರೀಕಂಠೇಶ್ವರ ದೇವಾಲಯದ ಹುಂಡಿಯಲ್ಲಿ 1.69 ಕೋಟಿ ರೂ. ಸಂಗ್ರಹವಾಗಿದೆ ಎಂದು ದೇವಾಲಯದ ಇಓ ಜಗದೀಶ್ ಕುಮಾರ್ ತಿಳಿಸಿದರು. ಶ್ರೀಕಂಠೇಶ್ವರ ದೇವಾಲಯದಲ್ಲಿ ಮಂಗಳವಾರ ನಡೆದ 35 ಹುಂಡಿಗಳ ಪರ್ಕಾವಣೆಯಲ್ಲಿ 1 ಕೋಟಿ 69 ಲಕ್ಷ 70 ಸಾವಿರ ನಗದು, 134 ಗ್ರಾಂ ಚಿನ್ನ, 2 ಕೆಜಿ 350 ಗ್ರಾಂ ಬೆಳ್ಳಿ, 23 ವಿದೇಶಿ ಕರೆನ್ಸಿಗಳು ಸಂಗ್ರಹವಾಗಿದೆ. ಕಳೆದ ತಿಂಗಳ ಮೇ 14 ರಂದು ಎಣಿಕೆ ಕಾರ್ಯ ನಡೆಸಲಾಗಿತ್ತು. ಈಗ ಮತ್ತೆ ದೇವಾಲಯಕ್ಕೆ 1 ಕೋಟಿ 69 ಲಕ್ಷ ಆದಾಯ ಬಂದಿದೆ. ಎಣಿಕೆ ಕಾರ್ಯದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರು ನೆರವಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಈ ವೇಳೆ ದೇವಾಲಯದ ಎಇಓ ಸತೀಶ್, ಮುಜರಾಯಿ ತಹಸೀಲ್ದಾರ್ ವಿದ್ಯುಲತಾ, ವೆಂಕಟೇಶ್ ಪ್ರಸಾದ್, ಗುರುಮಲ್ಲಯ್ಯ, ಬ್ಯಾಂಕ್ ವ್ಯವಸ್ಥಾಪಕ ಟಿ.ಕೆ.ನಾಯಕ್ ಮತ್ತು ದೇವಾಲಯದ ಸಿಬ್ಬಂದಿ ಇದ್ದರು.

ಜೂ.29, ಹಲ್ಲರೆಯಲ್ಲಿ ಅಂಬೇಡ್ಕರ್ ನಾಮಫಲಕ ಅಳವಡಿಕೆ

ನಂ.ಗೂಡಿನಿಂದ ಗ್ರಾಮದವರೆಗೆ ಕಾಲ್ನಡಿಗೆ ಜಾಥಾ: ಕಾರ್ಯ ಬಸವಣ್ಣ

ನಂಜನಗೂಡು, ಜೂ.25– ದಲಿತ ಸಂಘಟನೆಗಳ ಒಕ್ಕೂಟದಿಂದ ಜೂ.29 ರಂದು ನಗರದ ಅಂಬೇಡ್ಕರ್ ವೃತ್ತದಿಂದ ತಾಲೂಕಿನ ಹಲ್ಲರೆ ಗ್ರಾಮದವರೆಗೆ ಕಾಲ್ನಡಿಗೆ ಜಾಥಾ ನಡೆಸಿ ಡಾ.ಬಿ.ಆರ್. ಅಂಬೇಡ್ಕರ್ ಅವರ ನಾಮಫಲಕ ಅಳವಡಿಸಲು ತೀರ್ಮಾನಿಸಲಾಗಿದೆ ಎಂದು ದಲಿತ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ ಕಾರ್ಯ ಬಸವಣ್ಣ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ ಕಾರ್ಯ ಬಸವಣ್ಣ ಮಾತನಾಡಿದರು

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಹಲ್ಲರೆ ಗ್ರಾಮದಲ್ಲಿ ನಾಮಫಲಕ ಅಳವಡಿಕೆ ವಿಚಾರವಾಗಿ 2 ಕೋಮಿನ ನಡುವೆ ಘರ್ಷಣೆ ಉಂಟಾಗಿ, ನಾಮಫಲಕ ಧ್ವಂಸ ಮಾಡಲಾಗಿತ್ತು. ಈ ಸಂಬಂಧ ಸಾವಿರಾರು ಮಂದಿ ಪ್ರತಿಭಟನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ತಾಲೂಕು ಮತ್ತು ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರೂ ಕ್ರಮ ವಹಿಸುವಲ್ಲಿ ವಿಫಲವಾಗಿವೆ. ಈ ಬಗ್ಗೆ ಒಕ್ಕೂಟವು ಅಧಿಕಾರಿಗಳ ಗಮನಕ್ಕೆ ತಂದು ನಾಮಫಲಕ ಅಳವಡಿಕೆಗೆ ಕ್ರಮ ವಹಿಸುವಂತೆ ಮನವಿ ಮಾಡಿದರೂ ಸಹ ಅವರು ಸಕಾರಾತ್ಮಕವಾಗಿ ಸ್ಪಂದಿಸದೆ ಅಂಬೇಡ್ಕರ್ ವಿರೋಧಿಗಳಂತೆ ವರ್ತಿಸುತ್ತಿದ್ದಾರೆ. ಆದ್ದರಿಂದ ಜೂ.29ರಂದು ದಲಿತ ಸಂಘಟನೆಗಳ ಒಕ್ಕೂಟವು ಸಾವಿರಾರು ಜನರೊಂದಿಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಹಲ್ಲರೆ ಗ್ರಾಮದವರೆಗೆ ಕಾಲ್ನಡಿಗೆ ಜಾಥಾ ನಡೆಸಿ ಅಂಬೇಡ್ಕರ್ ನಾಮಫಲಕ ಅಳವಡಿಸಲಾಗುವುದು ಎಂದರು.

ಒಕ್ಕೂಟದ ಅಧ್ಯಕ್ಷ ನಗರ್ಲೆ ವಿಜಯ್‌ಕುಮಾರ್ ಮಾತನಾಡಿ, ನಾವು ಶಾಂತಿಯುತವಾಗಿ ನಾಮಫಲಕ ಅಳವಡಿಸಲು ಉದ್ದೇಶಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸಿದಲ್ಲಿ ಅದಕ್ಕೆ ಜಿಲ್ಲಾಡಳಿತವೇ ನೇರ ಹೊಣೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪುಟ್ಟಸ್ವಾಮಿ, ಜಯಶಂಕರ್, ಕುಮಾರ್, ಅಭಿನಾಗಭೂಷಣ್, ಪ್ರಶಾಂತ್, ಯಶವಂತ್, ಅನಿಲ್ ಇದ್ದರು.

ಶ್ರೀಮಂಟೇಸ್ವಾಮಿ ದೇವಸ್ಥಾನ ಕಾಮಗಾರಿಗೆ ಭೂಮಿಪೂಜೆ

ತಿ.ನರಸೀಪುರ, ಜೂ.25– ಪುರಸಭೆ ವ್ಯಾಪ್ತಿಯ ಮುದ್ದಬೀರನ ಹುಂಡಿ (ವಾರ್ಡ್ ನಂ.12) ಗ್ರಾಮದಲ್ಲಿ ಶ್ರೀಮಂಟೇಸ್ವಾಮಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಶ್ರೀಕ್ಷೇತ್ರ ಕುರುಬನಕಟ್ಟೆ ಮಠದ ಪೀಠಾಧ್ಯಕ್ಷ ವರುಣ್ ಲಿಂಗರಾಜೇ ಅರಸ್ ಭೂಮಿಪೂಜೆ ನೆರವೇರಿಸಿದರು.

ಶ್ರೀವರುಣ್ ಲಿಂಗರಾಜೇ ಅರಸ್ ಮಾತನಾಡಿ, ಗ್ರಾಮದಲ್ಲಿರುವ ಪುರಾತನ ದೇವಾಲಯವನ್ನು ಗ್ರಾಮಸ್ಥರು ಹೊಸದಾಗಿ ನಿರ್ಮಿಸಲು ಹೊರಟಿರುವುದು ಶ್ಲಾಘನೀಯ. ಗ್ರಾಮದ ಎಲ್ಲಾ ಮುಖಂಡರು, ಯುವಕರು ಸೇರಿ ಒಟ್ಟಾಗಿ ಶ್ರೀಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ, ಚನ್ನಾಜಮ್ಮ, ದೊಡ್ಡಮ್ಮ ತಾಯಿ ಅವರ ದೇವಸ್ಥಾನ ನಿರ್ಮಿಸಿ ಎಂದು ಸಲಹೆ ನೀಡಿದರು. ಇದಕ್ಕೂ ಮುನ್ನ ವರುಣ್ ಲಿಂಗರಾಜೇ ಅರಸ್ ಅವರನ್ನು ಗ್ರಾಮಸ್ಥರು ಗ್ರಾಮದ ಮುಖ್ಯ ದ್ವಾರದಿಂದ ತಮಟೆ, ಜಾಗಟೆ ಫಲತಾಂಬೂಲಗಳೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಿದರು. ಈ ವೇಳೆ ಗ್ರಾಮದ ಯಜಮಾನರು, ಮುಖಂಡರು, ಯುವಕರು, ಮಹಿಳೆಯರು ಹಾಜರಿದ್ದರು.



ದೇವಸ್ಥಾನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜೂ.25– ವೀರಶೈವ ಲಿಂಗಾಯತ ವಿದ್ಯಾರ್ಥಿ ಪ್ರೋತ್ಸಾಹಕರ ವೇದಿಕೆ ವತಿಯಿಂದ ದಾಸೋಹ ಚಕ್ರವರ್ತಿ ಶ್ರೀಗುರುಮಲ್ಲೇಶ್ವರ ಸಂಸ್ಮರಣೋತ್ಸವ ಜು.7ರಂದು ನಡೆಯಲಿದ್ದು, ಪ್ರತಿಭಾ ಪುರಸ್ಕಾರಕ್ಕೆ ಸಮಾಜದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.3 ಕೊನೆ ದಿನ. ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ತಾಲೂಕಿನ ವೀರಶೈವ ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿರುವ ಸಿಂಚನ ಕಂಪ್ಯೂಟರ್ ಸೆಂಟರ್‌ಗೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಕುಮಾರಸ್ವಾಮಿ 9986558253, ಜ್ಞಾನೇಂದ್ರ ಮೂರ್ತಿ 9071074715 ಸಂಪರ್ಕಿಸಿ.

ಸಂಚಾರ ನಿಯಮ ಉಲ್ಲಂಘನೆ ತಡೆಗಟ್ಟಲು ಕ್ಯಾಮರಾ ಅಳವಡಿಕೆ

ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್

ಹೆಚ್.ಡಿ.ಕೋಟೆ, ಜೂ.25– ಸಂಚಾರ ನಿಯಮ ಉಲ್ಲಂಘನೆ ತಡೆಗಟ್ಟಲು ಪಟ್ಟಣದ ಹ್ಯಾಂಡ್‌ಪೋಸ್ಟ್ ವೃತ್ತದಲ್ಲಿ ಪೊಲೀಸ್ ಇಲಾಖೆ ವತಿಯಿಂದ ಕ್ಯಾಮರಾ ಅಳವಡಿಸಲಾಗಿದೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ತಿಳಿಸಿದ್ದಾರೆ.

ಇನ್ನು ಮುಂದೆ ವಾಹನ ಚಾಲಕರು ಬಹಳ ಜಾಗ್ರತೆಯಿಂದ ವಾಹನ ಚಾಲನೆ ಮಾಡಬೇಕು. ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಕಾರು ಚಾಲಕರು ಸೀಟ್‌ಬೆಲ್ಟ್ ಧರಿಸಬೇಕು. ವಾಹನಗಳನ್ನು ಅಡ್ಡಾದಿಡ್ಡಿ ನಿಲ್ಲಿಸಬಾರದು ಮತ್ತು ಚಲಾಯಿಸಬಾರದು. ಅಲ್ಲದೇ ಚಾಲಕರು ವಾಹನ ದಾಖಲಾತಿಗಳನ್ನು ಸೂಕ್ತ ರೀತಿ ನಿರ್ವಹಣೆ ಮಾಡಬೇಕು. ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದವರನ್ನು ಪತ್ತೆ ಹಚ್ಚಿ, ವಾಹನ ಚಾಲನೆ ಮಾಡುತ್ತಿದ್ದವರ ವಿಳಾಸಕ್ಕೆ ದಂಡದ ರಶೀದಿ ಕಳಿಸಲಾಗುವುದು. ಒಂದು ವೇಳೆ ದಂಡ ಕಟ್ಟದೆ ಇರುವ ವಾಹನಗಳನ್ನು ವಶಕ್ಕೆ ಪಡೆದು ದಂಡ ವಸೂಲಿ ಮಾಡಲಾಗುವುದು. ಆದ್ದರಿಂದ ಸಾರ್ವಜನಿಕರು ಸಂಚಾರಿ ನಿಯಮ ಉಲ್ಲಂಘಿಸದೆ ಕಟ್ಟುನಿಟ್ಟಿನಿಂದ ಪಾಲಿಸಬೇಕು ಎಂದು ತಿಳಿಸಿದ್ದಾರೆ.



ಹೊರಗುತ್ತಿಗೆ ನೌಕರರ ಮರು ನೇಮಕಕ್ಕೆ ತಹಸೀಲ್ದಾರ್‌ಗೆ ಮನವಿ



ಕೆಆರ್.ನಗರ, ಜೂ.25– ಮಾಜಿ ಸಚಿವ ಸಾ.ರಾ. ಮಹೇಶ್ ಅವರ ಅಧಿಕಾರವಧಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಕೂಡಲೇ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್ ನೇತೃತ್ವದಲ್ಲಿ ತಹಸೀಲ್ದಾರ್ ಸಿ.ಎಸ್. ಪೂರ್ಣಿಮಾ ಅವರಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, 2008ರಿಂದ 2023ರವರೆಗೆ ಸುಮಾರು 15 ವರ್ಷಗಳ ಕಾಲ ಅಧಿಕಾರದಲ್ಲಿದ್ದಾಗ ಸಾ.ರಾ.ಮಹೇಶ್ ಅವರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಕುರುಬ ಸೇರಿದಂತೆ ಇತರ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡದವರನ್ನು ಕೆಲಸದಿಂದ ತೆಗೆದುಹಾಕಿ ಸ್ವಜಾತಿಯವರನ್ನು ನೇಮಕ ಮಾಡಿಕೊಂಡಿದ್ದಾರೆ ಎಂದು ದೂರಿದರು.

ತಾಲೂಕು ಕಚೇರಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ವಜಾಗೊಳಿಸಿದ ಕಾರಣ ಇದೀಗ ಅವರ ಜೀವನ ಅತಂತ್ರವಾಗಿದೆ. ತಾವು ಅಧಿಕಾರ ದರ್ಪದಿಂದ ಮಾಡಿದ ಕೆಲಸವನ್ನು ಮರೆಮಾಚಿ ಪ್ರತಿಭಟನೆ ಮಾಡಿ ಕ್ಷೇತ್ರದ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದೀರಿ ಎಂದು ಆರೋಪಿಸಿದರು.

ಸಚಿವರಾಗಿ ಕೆಲಸ ಮಾಡಿರುವ ನಿಮಗೆ ಸರ್ಕಾರಗಳು ಬದಲಾದಾಗ ವರ್ಗಾವಣೆ ಮಾಡುವುದು ಸಹಜ. ಇದನ್ನು ಅರಿಯದೆ ವಿಧಾನಸಭೆ ಚುನಾವಣೆ ಸೋಲಿನ ಹತಾಶೆಯಿಂದ ವಿಚಲಿತರಾಗಿ ಶಾಸಕ ಡಿ.ರವಿಶಂಕರ್ ವಿರುದ್ಧ ಹೋರಾಟ ಮಾಡುತ್ತಿರುವುದು ನಿಮ್ಮ ಘನತೆಗೆ ಶೋಭೆ ತರುವುದಿಲ್ಲ ಎಂದು ಹೇಳಿದರು.

ಈ ವೇಳೆ ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕಿ ಸರಿತಾ ಜವರಪ್ಪ, ಮುಖಂಡರಾದ ರಾಮಚಾರಿ, ಕುಮಾರ್, ವಿಜಯಕುಮಾರ್, ಜಗದೀಶ್, ಪ್ರಜ್ವಲ್, ಮೋಹನ್, ಗೋವರ್ಧನ್, ಐಶ್ವರ್ಯ, ಪುರುಷೋತ್ತಮ್, ಚಿಕ್ಕೇಗೌಡ, ಬಿ.ಡಿ. ಮಧು, ಪ್ರೀತಿ, ಅನುಪಮ ಇತರರಿದ್ದರು.

ಶಾಸಕ ಅನಿಲ್‌ಗೆ ಕಾಂಗ್ರೆಸ್ ಮುಖಂಡರಿಂದ ಅಭಿನಂದನೆ



ಸಂಸದ ಸುನೀಲ್ ಬೋಸ್ ಅವರು ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲು ಶ್ರಮಿಸಿದ ಶಾಸಕ ಅನಿಲ್ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಸಿದ್ದರಾಜು, ಜಿಪಂ ಮಾಜಿ ಸದಸ್ಯ ಹೆಚ್.ಸಿ.ಮಂಜುನಾಥ್, ಚಿಕ್ಕವೀರನಾಯಕ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಬಿ.ಸಿ.ಬಸಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು ಸೇರಿದಂತೆ ಇನ್ನಿತರರಿದ್ದರು.

ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ



ಮೈಸೂರಿನ ಕೆ.ಹೆಚ್.ರಾಮಯ್ಯ ಟ್ರಸ್ಟ್ ವತಿಯಿಂದ ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲಾ ಕಾಲೇಜಿನ 100 ವಿದ್ಯಾರ್ಥಿಗಳಿಗೆ ನೋಟ್ ಬುಕ್‌ಗಳನ್ನು ಉಚಿತವಾಗಿ ವಿತರಿಸಲಾಯಿತು. ಟ್ರಸ್ಟ್ ಅಧ್ಯಕ್ಷ ದೇವಿ ಪ್ರಸಾದ್, ಕಾರ್ಯದರ್ಶಿ ಲಿಂಗೇಗೌಡ, ಮೋಹನ್, ಕಾಲೇಜಿನ ಪ್ರಭಾರ ಪ್ರಾಂಶುಪಾಲ ಬಿ.ಮಹೇಶ್, ಹಿರಿಯ ಉಪನ್ಯಾಸಕರಾದ ಪುಟ್ಟಸ್ವಾಮಿ, ಎಸ್.ರಾಜೇಶ್, ಜಯಣ್ಣ ಸುತಾ, ಮಂಜುಳಾ, ಮಾದಪ್ಪ ಇದ್ದರು.

ಮಾದಕ ದ್ರವ್ಯ ವಿರೋಧಿ ದಿನದ ಅರಿವು



ಜಯಪುರದ ಶ್ರೀರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಯಲ್ಲಿ ಜಯಪುರ ಪೊಲೀಸ್ ಠಾಣೆ ಎಸ್‌ಐ ಸುರೇಶ್ ಬೋಪಣ್ಣ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನದ ಅರಿವು ಮೂಡಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಘಟಕಕ್ಕೆ ಚುನಾವಣೆ

ನಂಜನಗೂಡು, ಜೂ.25– ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಘಟಕಕ್ಕೆ ಅಧ್ಯಕ್ಷರು ಮತ್ತು ಕಾರ್ಯ ನಿರ್ವಾಹಕ ಸಮಿತಿ ಸದಸ್ಯರ ಆಯ್ಕೆಗಾಗಿ ಜು.21 ರಂದು ಮಲ್ಲನಮೂಲೆಯ ಕಂಬಳೀಶ್ವರ ಮಠದ ಆವರಣದಲ್ಲಿ ಚುನಾವಣೆ ನಡೆಸಲಾಗುವುದು ಎಂದು ಚುನಾವಣಾಧಿಕಾರಿ ಶಿವಲಿಂಗಪ್ಪ ಹೇಳಿದರು.



ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.27ರಿಂದ ನಾಮಪತ್ರ ಸ್ವೀಕರಿಸಲಾಗುವುದು. ನಾಮಪತ್ರ ಸಲ್ಲಿಕೆಗೆ ಜು.5ರಂದು ಕೊನೆ ದಿನ. ನಾಮಪತ್ರ ಹಿಂಪಡೆಯಲು ಜು.8 ಕೊನೆ ದಿನ. ಜು.21 ರಂದು ಮತದಾನ ನಡೆದು ಅಂದೇ ಮತ ಎಣಿಕೆ ಕಾರ್ಯವೂ ನಡೆಯಲಿದೆ. ಸಮಾಜದ ಎಲ್ಲಾ ಮತದಾರರು ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಖಿಲ ಭಾರತ ವೀರಶೈವ ಮಹಾಸಭಾ ಉತ್ತಮವಾಗಿ ಕಾರ್ಯ ನಿರ್ವಹಿಸಲು ಸಹಕಾರ ನೀಡಬೇಕೆಂದು ಅವರು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ತಾಲೂಕು ವೀರಶೈವ ಮಹಾಸಭಾದ ಅಧ್ಯಕ್ಷ ಬುಲೆಟ್ ಮಹದೇವಪ್ಪ, ಮಂಜುನಾಥ್, ಮಾಧು, ವಕೀಲರಾದ ಶಿವಬಸಪ್ಪ, ಬಸಚವಟ್ಟಿಗೆ ಬಸವರಾಜು, ಶೇಖರ್, ಇದ್ದರು.

ನಾಳೆ ಕೆಂಪೇಗೌಡ ಜಯಂತಿ

ಬನ್ನೂರು, ಜೂ.25– ತಿ.ನರಸೀಪುರದ ತಾಪಂ ಸಭಾಂಗಣದಲ್ಲಿ ಜು.27ರಂದು ಬೆಳಗ್ಗೆ 10.30ಕ್ಕೆ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರೂ ಆದ ತಹಸೀಲ್ದಾರ್ ಸುರೇಶ್ ಆಚಾರ್ ಅಧ್ಯಕ್ಷತೆಯಲ್ಲಿ ಕೆಂಪೇಗೌಡ ಜಯಂತಿ ನಡೆಯಲಿದೆ ಎಂದು ಒಕ್ಕಲಿಗ ಮುಖಂಡ ವೈ.ಎಸ್.ರಾಮಸ್ವಾಮಿ ತಿಳಿಸಿದ್ದಾರೆ. ಪಟ್ಟಣದ ತಮ್ಮ ಕಚೇರಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಕಾರ್ಯಕ್ರಮದಲ್ಲಿ ಗರ್ಗೇಶ್ವರಿ ಶಾಲೆ ಶಿಕ್ಷಕ ರಮೇಶ್ ಅವರು ಕೆಂಪೇಗೌಡರ ಬಗ್ಗೆ ಉಪನ್ಯಾಸ ನೀಡಲಿದ್ದು, ಲಾಯಲ್ ದೊಡ್ಡಲಿಂಗೇಗೌಡರನ್ನು ಸನ್ಮಾನಿಸಲಾಗುವುದು. ಹೀಗಾಗಿ ಒಕ್ಕಲಿಗ ಸೇರಿದಂತೆ ಎಲ್ಲಾ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಹಂಪಾಪುರದಲ್ಲಿ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟನೆ



ಕೆ.ಆರ್.ನಗರ, ಜೂ.25– ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದು ಉತ್ತಮ ಬದುಕು ಕಟ್ಟಿಕೊಂಡ ನಂತರ ಹಳೇ ವಿದ್ಯಾರ್ಥಿಗಳು ತಾವು ಶಿಕ್ಷಣ ಪಡೆದ ಶಾಲೆಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ದತ್ತಿ ಪ್ರಶಸ್ತಿ ಪುರಸ್ಕೃತ ಧೈರ್ಯ ರಾಮಕುಮಾರ್ ತಿಳಿಸಿದರು.

ತಾಲೂಕಿನ ಹಂಪಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ 2007–08ನೇ ಸಾಲಿನ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಬದುಕು ಕಟ್ಟಿಕೊಟ್ಟ ತಂದೆ–ತಾಯಿ, ಅಕ್ಷರ ಕಲಿಸಿದ ಗುರು, ಶಿಕ್ಷಣ ನೀಡಿದ ವಿದ್ಯಾಸಂಸ್ಥೆಗಳನ್ನು ಯಾರು ಮರೆಯಬಾರದು ಎಂದು ಸಲಹೆ ನೀಡಿದರು.

ತಾವು ಶಿಕ್ಷಣ ಕಲಿತ ಸಂಸ್ಥೆಗಳ ಅಭಿವೃದ್ಧಿಗೆ ಶ್ರಮಿಸಬೇಕು. ಆಗ ಮಾತ್ರ ಜೀವನ ಸಾರ್ಥಕತೆಗೊಳ್ಳುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ನಡೆದುಕೊಂಡಾಗ ಸರ್ಕಾರಿ ಶಾಲೆಗಳು ಉನ್ನತೀಕರಣಗೊಳ್ಳುವುದರ ಜೊತೆಗೆ ದಾಖಲಾತಿ ಸಂಖ್ಯೆಯೂ ಹೆಚ್ಚಾಗಲಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಸ್‌ಎಲ್‌ಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಹಳೇ ವಿದ್ಯಾರ್ಥಿ ಸಂಘದ ಸಂಚಾಲಕ ರಕ್ಷಿತ್ ಸನ್ಮಾನಿಸಿದರು. ಶಾಲೆ ಮುಖ್ಯ ಶಿಕ್ಷಕ ಕಿರಣ್ ಕುಮಾರ್, ಶಿಕ್ಷಕರಾದ ನಿರ್ಮಲ, ಅನೀಶ ಫಾತಿಮಾ, ಸುಗುಣ, ಜಗದೀಶ್, ನಟರಾಜ್, ವೇದ, ಸುನಂದ, ಸುರೇಶ್, ಹಳೇ ವಿದ್ಯಾರ್ಥಿಗಳಾದ ಶಿವಶಂಕರ್, ಮಂಜುನಾಥ್ ಮತ್ತಿತರರಿದ್ದರು.

ನಂಜನಗೂಡು ತಾಪಂಗೆ 166.49 ಕೋಟಿ ಅನುದಾನ

ತಾಪಂ ಆಡಳಿತಾಧಿಕಾರಿ ಕೃಷ್ಣರಾಜು ಮಾಹಿತಿ

ನಂಜನಗೂಡು, ಜೂ.25– ಇಲ್ಲಿನ ತಾಲೂಕು ಪಂಚಾಯಿತಿಗೆ 2024–25ನೇ ಸಾಲಿಗೆ 166.49 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಅದನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ. ಅಧಿಕಾರಿಗಳು ಅನುದಾನ ನಷ್ಟವಾಗದಂತೆ ನಿಗದಿತ ಕಾಲಮಿತಿಯೊಳಗೆ ಕ್ರಿಯಾಯೋಜನೆ ತಯಾರಿಸಿ ಸಮರ್ಪಕವಾಗಿ ಅನುದಾನ ಬಳಸುವಂತೆ ತಾಪಂ ಆಡಳಿತಾಧಿಕಾರಿ ಕೃಷ್ಣರಾಜು ತಿಳಿಸಿದರು.

ತಾಪಂ ಸಭಾಂಗಣದಲ್ಲಿ 2024–25ನೇ ಸಾಲಿನ ಬಜೆಟ್ ಮಂಡನೆ ಮಾಡಿ ಮಾತನಾಡಿದ ಅವರು, ಕಳೆದ ವರ್ಷ 154 ಕೋಟಿ 53 ಲಕ್ಷ ರೂ. ಅನುದಾನ ನಿಗದಿಯಾಗಿತ್ತು. ರಾಜ್ಯ ಹಾಗೂ ಕೇಂದ್ರ ವಲಯ



ತಾಪಂನಲ್ಲಿ ಬಜೆಟ್ ಮಂಡನೆ ಮಾಡಲಾಯಿತು.

ಕಾರ್ಯಕ್ರಮಗಳಲ್ಲಿ ಈ ಬಾರಿ 166 ಕೋಟಿ 49 ಲಕ್ಷ ರೂ. ಅನುದಾನ ಬಂದಿದೆ. ಅದನ್ನು ಸಾರ್ವಜನಿಕರಿಗೆ ಉಪಯೋಗವಾಗುವಂತೆ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ. ಅಧಿಕಾರಿಗಳು ನಿಗದಿತ ಸಮಯದಲ್ಲಿ ಕ್ರಿಯಾಯೋಜನೆ ತಯಾರಿಸಿ ಅನುದಾನ ಸದ್ಬಳಕೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ತಾಕೀತು ಮಾಡಿದರು.

ತಾಲೂಕಿನ ಇಬ್ಬಾಲ ಗ್ರಾಮದಲ್ಲಿ ಶಾಲಾ ಕಟ್ಟಡ ನೂತನವಾಗಿ ನಿರ್ಮಾಣಗೊಂಡಿದ್ದರೂ ಛಾವಣಿ ಸೋರಿಕೆಯಾಗುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುವ ಬಗ್ಗೆ ಕೆಂಡಾಮಂಡಲರಾದ ಕೃಷ್ಣಂರಾಜು ಕಟ್ಟಡವನ್ನು ರಿಪೇರಿ ಮಾಡಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕು ಎಂದು ಜಿಪಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ, ಸ್ಥಳ ಪರಿಶೀಲನೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮವಹಿಸುವುದಾಗಿ ತಿಳಿಸಿದರು.

ಈ ವೇಳೆ ತಾಪಂ ಇಓ ಜೆರಾಲ್ಡ್ ರಾಜೇಶ್, ತೋಟಗಾರಿಕಾ ಅಧಿಕಾರಿ ಚಂದ್ರು, ರವಿಚಂದ್ರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಮೈಸೂರಲ್ಲಿ ಡಾ.ಕಮಲಾ ಹಂಪನಾರಿಗೆ ನುಡಿನಮನ

ಹಲವು ಸಾಹಿತಿಗಳಿಂದ ಅಗಲಿದ ಹಿರಿಯ ಸಾಹಿತಿ ಗುಣಗಾನ



ಇತ್ತೀಚೆಗೆ ನಿಧನರಾದ ಹಿರಿಯ ಸಾಹಿತಿ ಡಾ.ಕಮಲಾ ಹಂಪನಾ ಅವರಿಗೆ ಮಂಗಳವಾರ ನುಡಿನಮನ ಸಲ್ಲಿಸಲಾಯಿತು.

ಮೈಸೂರು, ಜೂ.25(ಎಸ್‌ಪಿಎನ್)– ಮೈಸೂರು ಗಾಂಧಿನಗರದ ಉರಿಲಿಂಗ ಪೆದ್ದಿಮಠದಲ್ಲಿ ಜೈ ಭೀಮ್ ಜನಸ್ಪಂದನ ವೇದಿಕೆ ವತಿಯಿಂದ ಇತ್ತೀಚೆಗೆ ನಿಧನರಾದ ಹಿರಿಯ ಸಾಹಿತಿ ಡಾ.ಕಮಲ ಹಂಪನಾ ಅವರಿಗೆ ಮಂಗಳವಾರ ನುಡಿನಮನ ಸಲ್ಲಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಅಧ್ಯಯನ, ಅಧ್ಯಾಪನ, ಲೇಖನ, ಭಾಷಣ ಮತ್ತು ಸಂಶೋಧನೆಗಳ ಮೂಲಕ 60 ವರ್ಷಗಳ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಅವಿರತ ಸೇವೆ ಸಲ್ಲಿಸಿರುವ ಪ್ರೊ.ಕಮಲಾ ಹಂಪನಾ, ನಾಡಿನ ಅಗ್ರಗಣ್ಯ ಮಹಿಳಾ ಸಾಹಿತಿಗಳಲ್ಲಿ ಮೊದಲಿಗರು ಎಂದರು.

ಪ್ರೊ.ಕಮಲಾ ಹಂಪನಾ ಅವರ ಸಾಹಿತ್ಯ ಸೇವೆಗೆ ಅನೇಕ ಗೌರವಗಳು ಸಂದಿವೆ. ಅಲ್ಲದೆ, ಮೂಡಬಿದಿರೆಯಲ್ಲಿ ನಡೆದ 71ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಹಂಪಿ ಕನ್ನಡ ವಿವಿ ಕೊಡಮಾಡುವ 'ನಾಡೋಜ' ಪ್ರಶಸ್ತಿ ಬಂದಿವೆ ಎಂದರು.

ಪ್ರೊ.ಕಮಲಾ ಹಂಪನಾ ಅವರ ಸಮಗ್ರ ಸಾಹಿತ್ಯವನ್ನು ಒಳಗೊಂಡ ಒಂಭತ್ತು ಬೃಹತ್ ಸಂಪುಟಗಳು ಹೊರಬಂದಿವೆ. ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನೆ ಅವರ ಮೊದಲ ಆಯ್ಕೆಯಾಗಿತ್ತು. ಅವರು ರಚಿಸಿರುವ 60ಕ್ಕೂ ಹೆಚ್ಚು ಕೃತಿಗಳಲ್ಲಿ ನಾಟಕ, ಕಥೆ– ವಚನ ಸೇರಿದಂತೆ ಪ್ರಬಂಧಗಳನ್ನು ರಚಿಸಿದ್ದಾರೆ. ಬಿಂದಲಿ, ಬುಗುಡಿ ಹಾಗೂ ಬಯಲು ಕೃತಿಗಳು ವಚನಗಳಿರುವ ಸಂಕಲನಗಳು. ಇವಲ್ಲದೆ, ಅತ್ತಿಮಬ್ಬೆ ಅಂಡ್ ಚಾಲುಕ್ಯಸ್, ಜೈನಿಸಂ ಅಂಡ್ ಅದರ್ಸ್ ಎಂಬ ಎರಡು ಇಂಗ್ಲಿಷ್ ಪುಸ್ತಕಗಳನ್ನು ರಚಿಸಿದ್ದಾರೆ ಎಂದು ಸ್ಮರಿಸಿದರು.

ಹಿರಿಯ ಸಾಹಿತಿ ಡಾ.ಲೀಲಾ ಪ್ರಕಾಶ್ ಮಾತನಾಡಿ, ಪ್ರೊ.ಕಮಲಾ ಹಂಪನಾ ಅವರು, ಕಳೆದ 60 ವರ್ಷಗಳ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿನ ದೇವನಹಳ್ಳಿಯ ಸಿ.ರಂಗಧಾಮ ನಾಯಕ್ ಮತ್ತು ಲಕ್ಷ್ಮಮ್ಮ ದಂಪತಿ ಪುತ್ರಿಯಾಗಿ ಜನಿಸಿದರು. ತುಮಕೂರು ಮತ್ತು ಮೈಸೂರಿನಲ್ಲಿ ಶಾಲಾ ಶಿಕ್ಷಣ ಪೂರ್ಣಗೊಳಿಸಿ 1956ರಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ವೃತ್ತಿ ಜೀವನ ಆರಂಭಿಸಿದ್ದರು. ಬೆಂಗಳೂರು ಮತ್ತು ಮೈಸೂರು ಮಹಾರಾಣಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಬೆಂಗಳೂರು ವಿಜಯ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲೆ ಆಗಿ ಕರ್ತವ್ಯ ನಿರ್ವಹಿಸಿದ್ದರು. ನಿವೃತ್ತಿಯಾದ ನಂತರ ಮೈಸೂರು, ಬೆಂಗಳೂರು ಹಾಗೂ ಹಂಪಿ ವಿವಿಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿ, ಜೀವಪರ ಸಂವೇದನೆ, ಸಾಮಾಜಿಕ ಬದ್ಧತೆ, ಸಾಂಸ್ಕೃತಿಕ ಕಾಳಜಿಯುಳ್ಳ ಪ್ರೊ. ಕಮಲಾ ಹಂಪನಾ ಕನ್ನಡದ ಹೆಮ್ಮೆ. ಕರ್ನಾಟಕ ಸರ್ಕಾರ ಅವರ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿದೆ. ಜಗತ್ತಿನ ಆಯ್ದ ಆದರ್ಶ ಜೋಡಿಗಳನ್ನು ಆಧರಿಸಿ ಜರ್ಮನಿಯ ಯಾಸೇಮಿನ್ ನಿರ್ದೇಶಿಸಿರುವ ಅಂತರರಾಷ್ಟ್ರೀಯ ಸಾಕ್ಷ್ಯಚಿತ್ರದಲ್ಲಿ ಇಡೀ ಭಾರತದ ಪರವಾಗಿ ಪ್ರೊ.ಕಮಲಾ ಹಂಪನಾ ಹಾಗೂ ಡಾ.ಹಂಪ ನಾಗರಾಜಯ್ಯ ಜೋಡಿ ಆಯ್ಕೆಯಾಗಿದ್ದು ಕನ್ನಡಿಗರಿಗೆ ಹೆಮ್ಮೆಯ ವಿಷಯ ಎಂದರು.

ಪ್ರೊ.ಕಮಲ ಹಂಪನಾ ರಚಿತ 'ನಕ್ಕಿತು ಹಾಲಿನ ಬಟ್ಟಲು', 'ರೆಕ್ಕೆ ಮುರಿದಿತ್ತು', 'ಚಂದನಾ', 'ಬಣವೆ', ಸಂಶೋಧನಾ ಕೃತಿಗಳಾದ 'ತುರಂಗ', 'ಭಾರತ – ಒಂದು ಅಧ್ಯಯನ', 'ಶಾಂತಿನಾಥ', 'ಆದರ್ಶ ಜೈನ ಮಹಿಳೆಯರು', 'ಅನೇಕಾಂತ ವಾದ', 'ನಾಡು ನುಡಿ ನಾವು', 'ಜೈನ ಸಾಹಿತ್ಯ ಪರಿಸರ', 'ಬದ್ದವಣ', 'ರೋಣದ ಬಸದಿ' ಸೇರಿ ಹಲವು ಕಥಾ ಕವನ ಸಂಕಲನಗಳು, ಶಿಶು ಸಾಹಿತ್ಯ, ಅನುವಾದಗಳು, ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಪ್ರಿಯರಿಗಾಗಿ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಡಾ.ಕಮಲಾ ಹಂಪನಾ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ವೇದಿಕೆಯಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜೀವನಿಧಿ ರಕ್ತಧಾರ ಕೇಂದ್ರದ ಗಿರೀಶ್, ಕೆಎಂಪಿಕೆ ಟ್ರಸ್ಟ್‌ನ ವಿಕ್ರಂ ಅಯ್ಯಂಗಾರ್, ಕಾರ್ಯಕ್ರಮದ ಆಯೋಜಕರಾದ ಚೇತನ್ ಕಾಂತರಾಜು ಮತ್ತಿತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅರನ್‌ಮನೈ–4 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಎ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಹದ್ದೂರ್ (ಕ)	4 ಪ್ರದರ್ಶನಗಳು
ಪ್ರಭಾ	
ಬಹದ್ದೂರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇನ್‌ಸೈಡ್ ಔಟ್ 2(3ಡಿ) (ಇಂ): ಬೆ.11ಕ್ಕೆ, ಪೋಕಿರಿ (ತ): ಮ.1ಕ್ಕೆ, ಹಮಾರೆ ಬಾರಹ್ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ಕ್ರಿಯೇಷನ್ಸ್ ಆಫ್ ದಿ ಗಾಡ್ಸ್ 1 (ಚೈ): ರಾ.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.25ಕ್ಕೆ, ರಾ.7.10ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಶಿವಮ್ಮ ಚಂದು ಚಾಂಪಿಯನ್ (ಹಿಂ): ಸಂ.4.10ಕ್ಕೆ, ನಡನ್ನ ಸಂಭವಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ಮಹಾರಾಜ (ತ): ಬೆ.10.30ಕ್ಕೆ, ಸಂ.4.15ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಮ.1.25ಕ್ಕೆ, ಉಲ್ಲೋಝುಕ್ಕು (ಮ): ರಾ.7.15ಕ್ಕೆ, ಜಹಂಗೀರ್ ನ್ಯಾಷನಲ್ ಯೂನಿವರ್ಸಿಟಿ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 4	ಚಿಲ್ಲಿ ಚಿಕನ್ (ಕ): ಬೆ.10.50ಕ್ಕೆ, ಕೋಟಿ (ಕ): ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೋಟಿ (ಕ): ಮ.1ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಸಂ.4.05ಕ್ಕೆ, ಚಿಲ್ಲಿ ಚಿಕನ್ (ಕ): ರಾ.7.05ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ದೇಸಾಯಿ (ಕ): ಸಂ.4.15ಕ್ಕೆ, ಕೋಟಿ (ಕ): ರಾ.7.45ಕ್ಕೆ
ಸ್ಕ್ರೀನ್ 3	ಪೋಕಿರಿ (ತ): ಮ.1.15ಕ್ಕೆ, ಲವ್ ಲಿ (ಕ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1.30ಕ್ಕೆ, ಮಹಾರಾಜ (ತ): ಸಂ.6.45ಕ್ಕೆ, ಕೋಟಿ (ಕ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜು.9ರವರೆಗೆ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ

ಶೇ.6 ಮೀರದಂತೆ ವರ್ಗಾವಣೆಗೆ ಸಂಬಂಧಪಟ್ಟ ಸಚಿವರಿಗೆ ಅಧಿಕಾರ

ಮೈಸೂರು, ಜೂ.25(ಎಸ್‌ಪಿಎನ್)– ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಗಳನ್ನು 2013ರ ಜೂ.7ರಂದು (ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013) ಜಾರಿಗೆ ತಂದಿದ್ದ ಆದೇಶವನ್ನು ರಾಜ್ಯ ಸರ್ಕಾರ ಮಂಗಳವಾರ ರದ್ದುಗೊಳಿಸಿ, 2024–25ನೇ ಸಾಲಿನಿಂದ ಹೊಸ ವರ್ಗಾವಣೆ ಮಾರ್ಗಸೂಚಿಯನ್ನು ಬಿಡುಗಡೆಗೊಳಿಸಿದೆ.

ಆಡಳಿತದಲ್ಲಿನ ನೂತನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವರ್ಗಾವಣೆ ಮಾರ್ಗಸೂಚಿಗಳನ್ನು ಪುನರಾವಲೋಕನ ಮಾಡಿ, ಈ ಹಿಂದಿನ ಆದೇಶದಲ್ಲಿ ಹೊರಡಿಸಲಾದ ಕೆಲ ಮಾರ್ಗಸೂಚಿಗಳನ್ನು ಪರಿಷ್ಕರಿಸಿ, ಹೊಸದಾದ ಮಾರ್ಗಸೂಚಿಗಳನ್ನು ಜಾರಿಗೆ ತರುವುದು ಅವಶ್ಯವೆಂದು ಪರಿಗಣಿಸಿ ಹೊಸ ಆದೇಶ ಹೊರಡಿಸಿದೆ.

ಈ ಆದೇಶದಲ್ಲಿ ಸೂಚಿಸಿರುವಂತೆ ಪರಿಷ್ಕೃತ ಮಾರ್ಗಸೂಚಿಗಳು 2024–25ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆಯಲ್ಲಿ ಜಾರಿಗೆ ಬರುತ್ತವೆ. ವರ್ಗಾವಣೆ ಉದ್ದೇಶಕ್ಕಾಗಿ ಈಗಾಗಲೇ ಹೊರಡಿಸಲಾಗಿರುವ ಪ್ರತ್ಯೇಕ ಅಧಿನಿಯಮ/ನಿಯಮಗಳು ಅನ್ವಯವಾಗುವ ಸರ್ಕಾರಿ ನೌಕರರಿಗೆ ಈ ಮಾರ್ಗಸೂಚಿ ಅನ್ವಯವಾಗುವುದಿಲ್ಲ.

ಶೇ.6ರಷ್ಟು ಮಿತಿ: ಪ್ರಸಕ್ತ 2024–25ನೇ ಸಾಲಿನಲ್ಲಿ ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್–ಸಿ, ಗ್ರೂಪ್–ಡಿ ಹುದ್ದೆಗಳಿಗೆ ಮಾಡಲಾಗುವ ವರ್ಗಾವಣೆ, ಚಲನವಲನಗಳ ಸಂಖ್ಯೆಯು ಒಂದು ಜ್ಯೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ.6ರಷ್ಟು ಮೀರದಂತೆ 25.06.2024ರಿಂದ 9.07.2024ರವರೆಗೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಆಯಾಯ ಇಲಾಖೆ ಸಚಿವರಿಗೆ ಅಧಿಕಾರ ನೀಡಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮಗಳು–1) ಅಧೀನ ಕಾರ್ಯದರ್ಶಿ ವೀರಭದ್ರ ತಿಳಿಸಿದ್ದಾರೆ.

ಇಂದು ಕೋಟೆ ಮಾರಮ್ಮ ದೇವಸ್ಥಾನದಲ್ಲಿ ಪೂಜಾ ಮಹೋತ್ಸವ

ಪಾಲಿಕೆ ಅಧಿಕಾರಿಗಳು-ಪೌರಕಾರ್ಮಿಕರ ಚರ್ಚೆ



ಕೋಟೆ ಮಾರಮ್ಮ ದೇವಿಯ ಪೂಜಾ ಮಹೋತ್ಸವದ ಪೋಸ್ಟರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪೌರಕಾರ್ಮಿಕ ಮುಖಂಡರು ಬಿಡುಗಡೆ ಮಾಡಿದರು.

ಮೈಸೂರು,ಜೂ.25(ಎಂಟಿವೈ)– ಮೈಸೂರಿನ ಗನ್‌ಹೌಸ್ ಸಮೀಪದ ಕೋಟೆ ಮಾರಮ್ಮ ದೇವಾಲಯದ ಆವರಣದಲ್ಲಿ ನಾಳೆ(ಜೂ.26) ಮಧ್ಯಾಹ್ನ 12 ಗಂಟೆಗೆ ಕೋಟೆ ಮಾರಮ್ಮ ದೇವಿಯ ಪೂಜಾ ಮಹೋತ್ಸವದ ಅಂಗವಾಗಿ ಪೌರಕಾರ್ಮಿಕರಿಗಾಗಿ ಅನ್ನಸಂತರ್ಪಣೆ, ಪಾಲಿಕೆ ಅಧಿಕಾರಿಗಳು ಹಾಗೂ ಪೌರಕಾರ್ಮಿಕರ ನಡುವೆ ಚರ್ಚೆ ಏರ್ಪಡಿಸಲಾಗಿದೆ ಎಂದು ಮೈಸೂರು ನಗರಪಾಲಿಕೆ ಕಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಅಧ್ಯಕ್ಷ ಆರ್.ನರಸಿಂಹ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಟೆ ಮಾರಮ್ಮ ದೇವಿಯ ವಿಶೇಷ ಪೂಜಾ ಮಹೋತ್ಸವದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಪಾಲಿಕೆ ಅಧಿಕಾರಿಗಳು, ಎಸಿ, ಪರಿಸರ ಅಭಿಯಂತರರು ಸೇರಿದಂತೆ ಪಾಲಿಕೆಯ ವಿವಿಧ ವಿಭಾಗಗಳ ಅಧಿಕಾರಿಗಳನ್ನು ಆಹ್ವಾನಿಸಲಾಗಿದೆ. ಈ ಸಂದರ್ಭದಲ್ಲಿ ಕರ್ತವ್ಯದ ವೇಳೆ ಪೌರಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆ, ಎದುರಾಗುತ್ತಿರುವ ಸವಾಲು ಸೇರಿದಂತೆ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಮೈಸೂರು ಮಹಾ ನಗರಪಾಲಿಕೆಯಲ್ಲಿ 170 ಪೌರಕಾರ್ಮಿಕರನ್ನು ಕಾಯಂಗೊಳಿಸಿದ್ದು, ಇನ್ನು 252 ಮಂದಿಯ ಕಾಯಂಗೊಳಿಸಬೇಕಾಗಿದೆ. ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆ ಭರ್ತಿ ಮಾಡದೇ ಇರುವುದರಿಂದ ಇರುವ ಪೌರ ಕಾರ್ಮಿಕರ ಮೇಲೆ ಒತ್ತಡ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಪೌರಕಾರ್ಮಿಕರಿಗೆ ಸಲ್ಲಬೇಕಾದ ಎಲ್ಲ ಸೌಲಭ್ಯ ದೊರಕಿಸಿಕೊಡಬೇಕು. ಮೈಸೂರು ನಗರ ಮತ್ತೆ ಸ್ವಚ್ಛ ನಗರಿ ಸ್ಥಾನ ಪಡೆಯುವ ನಿಟ್ಟಿನಲ್ಲಿ ಪಾಲಿಕೆ ಅಧಿಕಾರಿ ವರ್ಗ ಕಾಳಜಿ ವಹಿಸಬೇಕು. ಪೌರಕಾರ್ಮಿಕರು ಸಹ ಈ ಬಗ್ಗೆ ಶ್ರಮಿಸಬೇಕು ಎಂದು ಮನವಿ ಮಾಡುವುದಾಗಿ ತಿಳಿಸಿದರು.

ಪಾಲಿಕೆಯ ನೂರಾರು ಪೌರಕಾರ್ಮಿಕರು ಈಗಾಗಲೇ ನಿವೃತ್ತಿ ಹೊಂದಿದ್ದರೂ ಇವರ ಸ್ಥಾನ ಭರ್ತಿ ಮಾಡಿಲ್ಲ. ಅಲ್ಲದೆ, ಎಷ್ಟು ಜನ ಸಂಖ್ಯೆಗೆ ಓರ್ವ ಪೌರಕಾರ್ಮಿಕ ಇರಬೇಕೆಂಬ ನಿಯಮ ಪಾಲಿಸುತ್ತಿಲ್ಲ. ಇದರಿಂದಾಗಿ ಈಗಿರುವ ಪೌರಕಾರ್ಮಿಕರ ಮೇಲೆ ಹೆಚ್ಚಿನ ಒತ್ತಡ ಬಿದ್ದಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೌರಕಾರ್ಮಿಕರನ್ನು ನೇಮಕ ಮಾಡುವಂತೆ ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರಿಗೆ ಒತ್ತಾಯಿಸಲಾಗುತ್ತದೆ ಎಂದರು

ಸುದ್ದಿಗೋಷ್ಠಿಯಲ್ಲಿ ಪೌರಕಾರ್ಮಿಕರು ಮುಖಂಡರಾದ ಎನ್. ಮಾರ, ಎಂ. ವಡಿವೇಲು, ಶ್ರೀನಿವಾಸ್, ರಾಜು, ಮಂಜುನಾಥ್ ಇದ್ದರು.

ಜು.2ರಂದು ಡಾ.ಫ.ಗು.ಹಳಕಟ್ಟಿ ಜನ್ಮದಿನ

ಮೈಸೂರು, ಜೂ.25(ಎಸ್‌ಪಿಎನ್)– ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ, ಜು.2 ರಂದು 'ವಚನ ಸಾಹಿತ್ಯ ಸಂರಕ್ಷಣಾ' ದಿನಾಚರಣೆಯ ಪ್ರಯುಕ್ತ, ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಜೂನ್ 26 ರಂದು ಮಧ್ಯಾಹ್ನ 12 ಗಂಟೆಗೆ ಸಿದ್ಧಾರ್ಥನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡುವಂತೆ ಆಗ್ರಹ

ನಾಗೇಂದ್ರ ರಾಜೀನಾಮೆಯಿಂದ ತೆರವಾಗಿರುವ ಸಚಿವ ಸ್ಥಾನ ನಾಯಕ ಸಮುದಾಯಕ್ಕೆ ನೀಡಲು ಒತ್ತಾಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿದರು.

ಮೈಸೂರು,ಜೂ.25(ಎಂಟಿವೈ)– ಲೋಕೋಪಯೋಗಿ ಇಲಾಖೆ ಸಚಿವರಾಗಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸತೀಶ್ ಜಾರಕಿಹೊಳಿ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಸಚಿವ ಸತೀಶ್ ಜಾರಕಿಹೊಳಿ ಹಾಗೂ ನಾಯಕ ಸಮುದಾಯ ಬಹುಮುಖ್ಯ ಪಾತ್ರ ವಹಿಸಿದೆ. ಅಲ್ಲದೆ, ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಯಚೂರು, ಬಳ್ಳಾರಿ ಮತ್ತು ಚಿಕ್ಕೋಡಿ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸಮುದಾಯದ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿನಲ್ಲಿ ಸತೀಶ್ ಜಾರಕಿಹೊಳಿ ಪಾತ್ರವಿದೆ ಈ ಹಿನ್ನೆಲೆಯಲ್ಲಿ ಪಕ್ಷವನ್ನು ಇನ್ನಷ್ಟು ಬಲಗೊಳಿಸಲು ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಮನವಿ ಮಾಡಿದರು.

ಕೆಲ ರಾಜಕೀಯ ಕಾರಣಗಳಿಂದ ಸಚಿವ ನಾಗೇಂದ್ರ ಅವರು ರಾಜೀನಾಮೆ ನೀಡಿದ್ದು, ಆ ಸ್ಥಾನವನ್ನು ನಾಯಕ ಸಮುದಾಯದವರಿಗೆ ನೀಡುವಂತೆ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಂಜುನಾಥ್, ಶ್ರೀನಿವಾಸ್ ಕಲ್ಲಹಳ್ಳಿ, ತಿಪ್ಪೂರು ಮಹದೇವು, ಮಯೂರ ಕಲ್ಕುಣಿಕೆ, ಸ್ವಾಮಿ ಹಾಗೂ ಕಾಂಕ್ರಿಟ್ ರಾಜು ಇದ್ದರು.


ಅನಂತ್ ಕುಮಾರ್ ಹೆಗಡೆ ಮನೆಯಲ್ಲಿ ಅಗ್ನಿ ಅವಘಡ

ಶಿರಸಿ, ಜೂ.25– ಉತ್ತರ ಕನ್ನಡ ಮಾಜಿ ಸಂಸದ ಅನಂತಕುಮಾರ ಹೆಗಡೆ ಅವರ ಮನೆಯಲ್ಲಿ ಅಗ್ನಿ ಅವಘಡ ಮಂಗಳವಾರ ಸಂಭವಿಸಿದೆ.

ಶಿರಸಿಯ ಕೆ.ಎಚ್.ಬಿ. ಕಾಲೋನಿಯಲ್ಲಿರುವ ಅನಂತಕುಮಾರ್ ಹೆಗಡೆಯವರ ಮನೆಯೊಳಗಿನ ಜಿಮ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿರಬಹುದು ಎಂದು ಅಂದಾಜಿಸಲಾಗಿದೆ.

ಬೆಂಕಿಯಿಂದ ಜಿಮ್‌ನಲ್ಲಿ ಇದ್ದ ಹಲವು ಉಪಕರಣಗಳು ಸುಟ್ಟು ಹಾನಿಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸಕಾಲಕ್ಕೆ ಬಂದು ಹೆಚ್ಚಿನ ಅನಾಹುತ ತಡೆದಿದ್ದಾರೆ. ಮಾಜಿ ಸಂಸದ ಮತ್ತು ಅವರ ಕುಟುಂಬದವರು ಮನೆಯಲ್ಲಿ ಇಲ್ಲದ ಸಂದರ್ಭದಲ್ಲಿ ಘಟನೆ ನಡೆದಿದ್ದು, ಮನೆಯ ಕಾವಲುಗಾರರಿಂದ ಘಟನೆ ಬೆಳಕಿಗೆ ಬಂದಿದೆ.

ಸೋರುತ್ತಿದೆ ಅಯೋಧ್ಯೆ ರಾಮಮಂದಿರದ ಗರ್ಭಗುಡಿ



ದೇಗುಲದ ಪ್ರಧಾನ ಅರ್ಚಕರ ಆತಂಕ!

ಅಯೋಧ್ಯೆ, ಜೂ.25– ಜನವರಿ 22 ರಂದು ಪ್ರಾಣ ಪ್ರತಿಷ್ಠೆಯಾಗಿ ಲೋಕಾರ್ಪಣೆಯಾದ ಅಯೋಧ್ಯೆ ರಾಮಮಂದಿರದ ಮಾಳಿಗೆಯಲ್ಲಿ ನೀರು ಸೋರಿಕೆಯಾಗುತ್ತಿದೆ ಎಂದು ಮಂದಿರ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಆತಂಕ ವ್ಯಕ್ತಪಡಿಸಿದ್ದಾರೆ.

ರಾಮ ಮಂದಿರವು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾದ ನಂತರದಲ್ಲಿ ಸುರಿದ ಮೊದಲ ಭಾರಿ ಮಳೆಯ ಸಂದರ್ಭದಲ್ಲಿ ಗರ್ಭಗುಡಿಯಲ್ಲಿ ನೀರು ಸೋರುತ್ತಿದೆ. ಮಂದಿರದ ನಿರ್ಮಾಣದ ವೇಳೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಶನಿವಾರ ಮಧ್ಯರಾತ್ರಿ ಮಳೆ ಸುರಿಯಿತು, ಮಂದಿರದ ಆವರಣದಲ್ಲಿ ಬಿದ್ದ ಮಳೆ ನೀರು ಹರಿದುಹೋಗಲು ಸೂಕ್ತವಾದ ವ್ಯವಸ್ಥೆ ಇರಲಿಲ್ಲ, ಮಂದಿರದ ಆಡಳಿತದ ಹೊಣೆ ಹೊತ್ತಿರುವವರು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮೇಲ್ಛಾವಣಿಯಿಂದ ನೀರು ಸೋರುತ್ತಿರುವ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಾಗ, ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರು ಮಂದಿರಕ್ಕೆ ಬಂದು ಮೇಲ್ಛಾವಣಿಯ ರಿಪೇರಿಗೆ ಸೂಚನೆ ನೀಡಿದರು ಎಂದು ಮೂಲಗಳು ಹೇಳಿವೆ.

ಮಂದಿರ ನಿರ್ಮಾಣದಲ್ಲಿ ಆಗಿರುವ ಪ್ರಗತಿಯ ಬಗ್ಗೆ ಸುದ್ದಿಗಾರರೊದಿಗೆ ಮಾತನಾಡಿದ ನೃಪೇಂದ್ರ ಮಿಶ್ರಾ ಅವರು, ಮೊದಲ ಮಹಡಿಯ ಕೆಲಸ ನಡೆಯುತ್ತಿದ್ದು, ಅದು ಜುಲೈ ಅಂತ್ಯದೊಳಗೆ ಮುಕ್ತಾಯ ಆಗಲಿದೆ ಎಂದರು. ಡಿಸೆಂಬರ್ ವೇಳೆಗೆ ಮಂದಿರದ ನಿರ್ಮಾಣ ಕಾರ್ಯವು ಪೂರ್ಣಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.


ಮಂದಿರದ ಉದ್ಘಾಟನೆ ಆದ ನಂತರ ಶನಿವಾರ ರಾತ್ರಿ ಮೊದಲ ಬಾರಿಗೆ ಭಾರಿ ಮಳೆ ಸುರಿದಿದೆ. ಆಗ ಗರ್ಭಗುಡಿಯ ಮೇಲ್ಛಾವಣಿಯಿಂದ ದೊಡ್ಡ ಮಟ್ಟದಲ್ಲಿ ನೀರು ಸೋರುತ್ತಿತ್ತು. ಬಾಲರಾಮನ ಮುಂದೆ ಅರ್ಚಕರು ಕುಳಿತುಕೊಳ್ಳುವ ಸ್ಥಳದಲ್ಲಿ ಹಾಗೂ ಅತಿಗಣ್ಯ ವ್ಯಕ್ತಿಗಳು ದರ್ಶನಕ್ಕೆ ಬರುವ ಸ್ಥಳದಲ್ಲಿ ನೀರು ಸೋರುತ್ತಿತ್ತು ಎಂದು ಸತ್ಯೇಂದ್ರ ದಾಸ್ ತಿಳಿಸಿದ್ದಾರೆ.

ಶನಿವಾರ ರಾತ್ರಿ ಸುರಿದ ಮಳೆಯ ಕಾರಣದಿಂದಾಗಿ ರಾಮಪಥ ರಸ್ತೆಯಲ್ಲಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಬೀದಿಗಳಲ್ಲಿ ನೀರು ಭಾರಿ ಪ್ರಮಾಣದಲ್ಲಿ ನಿಂತಿತ್ತು. ಈ ಪ್ರದೇಶದ ಮನೆಗಳಿಗೆ ಕೊಳಚೆ ನೀರು ನುಗ್ಗಿದೆ. ರಾಮಪಥ ರಸ್ತೆ ಹಾಗೂ ಹೊಸದಾಗಿ ನಿರ್ಮಿಸಲಾದ ಕೆಲವು ರಸ್ತೆಗಳು ಅಲ್ಲಲ್ಲಿ ಕುಸಿದಿವೆ.

ಮಂದಿರ ನಿರ್ಮಾಣದಲ್ಲಿ ಹಾಗೂ ಅಯೋಧ್ಯೆಯಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಬಿಜೆಪಿ ಭ್ರಷ್ಟಾಚಾರ ಎಸಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಹುತಾತ್ಮರ ಶವಪೆಟ್ಟಿಗೆ ಇರಲಿ, ದೇವಸ್ಥಾನವೇ ಇರಲಿ ಬಿಜೆಪಿಗೆ ಇವೆಲ್ಲವೂ ಭ್ರಷ್ಟಾಚಾರ ಎಸಗಲು ಒಂದು ಅವಕಾಶವಾಗಿ ಸಿಗುತ್ತವೆ. ನಂಬಿಕೆ ಮತ್ತು ಪಾವಿತ್ರ್ಯದ ಸಂಕೇತಗಳು ಕೂಡ ಅವರಿಗೆ ಲೂಟಿ ಮಾಡಲು ಒಂದು ಅವಕಾಶ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಅಜಯ್ ರಾಯ್ ದೂರಿದ್ದಾರೆ.


ಎಲೆಕ್ಟ್ರಿಕ್ ವೈರ್‌ಗಳಿಂದ ನೀರು ಸೋರಿಕೆ



ಅಯೋಧ್ಯೆ, ಜೂ.25– ಇತ್ತೀಚೆಗಷ್ಟೇ ಉದ್ಘಾಟನೆಯಾದ ಅಯೋಧ್ಯೆ ರಾಮಮಂದಿರದ ಗರ್ಭಗುಡಿಯಲ್ಲಿ ಮಳೆ ನೀರು ಸೋರಿಕೆಯಾಗುತ್ತಿದೆ ಎಂಬ ದೇವಾಲಯದ ಮುಖ್ಯ ಅರ್ಚಕರ ಆರೋಪವನ್ನು ರಾಮಮಂದಿರ ನಿರ್ಮಾಣದ ಸಮಿತಿ ತಳ್ಳಿ ಹಾಕಿದ್ದು, ಇದು ಎಲೆಕ್ಟ್ರಿಕ್ ವೈರ್‌ಗಳಿಂದ ನೀರು ಇಳಿಯುತ್ತಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ರಾಮಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರು ಗರ್ಭಗುಡಿಯಿಂದ ಮಳೆ ನೀರು ಹರಿದು ಹೋಗುತ್ತಿರುವ ಕುರಿತು ದೇವಾಲಯದ ಮುಖ್ಯ ಅರ್ಚಕರ ಆರೋಪವನ್ನು ಮಂಗಳವಾರ ತಳ್ಳಿಹಾಕಿದ್ದು, ನೀರಿನ ಸೋರಿಕೆ ಇಲ್ಲ. ಆದರೆ ವಿದ್ಯುತ್ ವೈರ್‌ಗಳನ್ನು ಅಳವಡಿಸಲು ಜೋಡಿಸಲಾದ ಪೈಪ್‌ಗಳಿಂದ ಮಳೆ ನೀರು ಕೆಳಗೆ ಬಂದಿದೆ. ನಾನೇ ದೇವಸ್ಥಾನದ ಕಟ್ಟಡವನ್ನು ಪರಿಶೀಲಿಸಿದ್ದೇನೆ. ಎರಡನೇ ಮಹಡಿ ನಿರ್ಮಾಣ ಹಂತದಲ್ಲಿದೆ. ಎರಡನೇ ಮಹಡಿಯ ಮೇಲ್ಛಾವಣಿಯನ್ನು ಅಂತಿಮವಾಗಿ ನಿರ್ಮಿಸಿದಾಗ, ಮಳೆ ನೀರು ದೇವಾಲಯಕ್ಕೆ ಪ್ರವೇಶಿಸುವುದು ನಿಲ್ಲುತ್ತದೆ ಎಂದು ಸ್ಪಷ್ಟನೆ ನೀಡಿದ್ದಾರೆ

ನಾಲ್ವಡಿ ಪ್ರತಿಮೆ ನಿರ್ವಹಣೆ ಸಂಬಂಧ ಪಾಲಿಕೆ ಆಯುಕ್ತರ ಸ್ಪಷ್ಟನೆ



ಮೈಸೂರು, ಜೂ. 25(ಆರ್‌ಕೆ)– ಮೈಸೂರು ನಗರದಲ್ಲಿನ ಪ್ರತಿಮೆಗಳು ಮತ್ತು ಉದ್ಯಾನವನಗಳನ್ನು ಪಾಲಿಕೆ ವತಿಯಿಂದ ನಿರ್ವಹಿಸುತ್ತಿದ್ದೇವೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಗೋಪುರದ ಲೋಹ (ಮೆಟಲ್)ದ ಭಾಗ ಕಳಚಿ ಬಿದ್ದಿರುವುದಕ್ಕೆ ಸಂಬಂಧಿಸಿದಂತೆ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಈ ಹಿಂದೆ ನಗರದಲ್ಲಿರುವ ಸರ್ಕಲ್‌ಗಳ ಪ್ರತಿಮೆಗಳು, ಪಾರ್ಕ್‌ಗಳನ್ನು ನಿರ್ಲಕ್ಷ್ಯ ಮಾಡಿದ್ದರಿಂದ ಅಧೋಗತಿಗೆ ತಲುಪಿದ್ದವು. ನಾವು ಅವುಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದೇವೆ ಎಂದರು.

ಇದೀಗ ಪತ್ರಿಕೆಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಬಗ್ಗೆ ಪ್ರಕಟವಾದ ವರದಿ ನೋಡಿದ ಮೇಲೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ತುಂಡಾಗಿರುವ ಮೆಟಲ್ ಜೋಡಿಸಲು ಕ್ರಮ ವಹಿಸಿದ್ದೇನೆ ಎಂದು ಆಯುಕ್ತರು ತಿಳಿಸಿದರು.

ಸರ್ಕಲ್ ಹೊರಭಾಗ, ಲಾನ್, ಸ್ಟ್ರಕ್ಚರ್, ಗೋಪುರವನ್ನು ಪಾಲಿಕೆಯಿಂದ ನಿರ್ವಹಣೆ ಮಾಡುತ್ತೇವೆ. ಆದರೆ, ಪ್ರತಿಮೆ, ಗೋಪುರ ಸೇರಿದಂತೆ ಕೆಲ ಪರಂಪರೆಗೆ ಸಂಬಂಧಿಸಿದ ಅಂಶಗಳನ್ನು ಪಾರಂಪರಿಕ ಇಲಾಖೆ ತಜ್ಞರು ನೀಡಿದ ಸಲಹೆಯಂತೆ ನಿರ್ವಹಣೆ ಮಾಡಬೇಕಾಗುತ್ತದೆ ಎಂದು ಅಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ.

ಮೈಸೂರಿನಲ್ಲಿರುವ ಸರ್ಕಲ್, ಪಾರ್ಕ್‌ಗಳನ್ನು ನಿರ್ವಹಿಸಲು ಮುಂದೆ ಬಂದರೆ, ಖಾಸಗಿ ಸಂಘ–ಸಂಸ್ಥೆ, ಎನ್‌ಜಿಓಗಳಿಗೆ ಕೊಡಲು ಸಿದ್ಧರಿದ್ದೇವೆ. ಆಸಕ್ತಿ ಇರುವವರು ಪ್ರಸ್ತಾವನೆ ಸಲ್ಲಿಸಿದರೆ ಅವರಿಗೇ ಒಪ್ಪಿಸುತ್ತೇವೆ ಎಂದು ಅವರು ತಿಳಿಸಿದರು.

ಈ ನಡುವೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಪಾರಂಪರಿಕ ಸಮಿತಿ ಸದಸ್ಯ ಪ್ರೊ. ಎನ್.ಎಸ್. ರಂಗರಾಜು, ಪಾಲಿಕೆ ಅಧಿಕಾರಿಗಳು ಪ್ರತಿಮೆ, ಸರ್ಕಲ್‌ಗಳನ್ನು ಸರಿಯಾಗಿ ನಿರ್ವಹಿಸಬೇಕು. ನಿರಂತರ ಪರಿಶೀಲನೆ ಮಾಡಿದರೆ ಈ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಮೈಸೂರಲ್ಲಿರುವ ಹಲವು ಕಂಪನಿಗಳು, ಸಂಘ–ಸಂಸ್ಥೆಗಳು ಹಾಗೂ ಎನ್‌ಜಿಓಗಳು ನಿರ್ವಹಣೆ ಮಾಡಲು ಸಿದ್ಧವಾಗಿವೆ. ಅವರಿಗಾದರೂ ವಹಿಸಿದರೆ, ಸರಿಯಾಗಿ ನಿರ್ವಹಿಸುತ್ತಾರೆ ಎಂದು ಅಭಿಪ್ರಾಯಪಟ್ಟರು.

ನಾಡನ್ನು ಆಳಿದ, ಮರೆಯಲಾಗದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ ನೆನಪಿಗಾಗಿ ಸ್ಥಾಪಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಲೈಫ್‌ಸೈಜ್ ಮಾರ್ಬಲ್ ಪ್ರತಿಮೆಯನ್ನು ಸರ್ ಎಂ. ವಿಶ್ವೇಶ್ವರಯ್ಯ ಅವರು 1952ರ ಅಕ್ಟೋಬರ್ 16ರಂದು ಅನಾವರಣಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.


ನಾಡಿನ ಸಮಸ್ತ ಜನತೆಗೆ
ನಾಡಪ್ರಭು ಕೆಂಪೇಗೌಡರ
515ನೇ
ಜಯಂತೋತ್ಸವದ
ಶುಭಾಶಯಗಳು
ಶುಭಕೋರುವವರು
ಕೊಪ್ಪಲ್ ಶಿವಕುಮಾರ್ ಮಾಜಿ ನಗರಪಾಲಿಕ ಸದಸ್ಯರು
ವಿಕ್ರಾಂತ್. ಪಿ. ದೇವೇಗೌಡ ಮಾಜಿ ಉಪಾಧ್ಯಕ್ಷರು, ಮೈಸೂರು ಚಾಮರಾಜನಗರ ಒಕ್ಕಲಿಗರ ಸಂಘ
ಡಿ ಡಿ ಪಿ ರಮೇಶ್ ಕಾರ್ಯದರ್ಶಿ ಆದಿಶಕ್ತಿ ಬಂದಮ್ಮ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ ಕೆ.ಜಿ ಕೊಪ್ಪಲ್
ಎಲ್ ಚಂದ್ರು ಕಾರ್ಯದರ್ಶಿ, ಶ್ರೀರಾಮ ಮಂದಿರ, ಹೊಸಬೀದಿ, ಹತ್ತು ಜನಗಳ ಗರಡಿ, ಕೆ.ಜಿ.ಕೊಪ್ಪಲು, ಮೈಸೂರು
ಜಿ ಮಹದೇವ್ ಮಾಲೀಕರು ಭೈರವ ಕಾಂಪ್ಲೆಕ್ಸ್ ಜಯನಗರ
ಡಿ ಗಿರೀಶ್ ಅಧ್ಯಕ್ಷರು ಕನ್ನೆಗೌಡ ಕೊಪ್ಪಲ್ ಚಾಮುಂಡೇಶ್ವರಿ ದೇವಸ್ಥಾನ ಸಮಿತಿ
ಸಿ ರವಿ ಸರ್ಕಾರಿ ಮುದ್ರಣಾಲಯ ಜಯನಗರ
ಪೈಲ್ವಾನ್ ಮಂಜುನಾಥ್ ಕೆ.ಜಿ. ಕೊಪ್ಪಲ್ ಮಾಲೀಕರು ಹೊನ್ನಸಿರಿ ಫಂಕ್ಷನಲ್ ಹಾಲ್
ಜಿ ರೇವಣ್ಣ ರಾಜಪ್ಪ ಗಿರಿ ಗೌಡರ ಮಗ ಕೆ.ಜಿ. ಕೊಪ್ಪಲ್ ಮೈಸೂರು
ಆರ್ ಪ್ರಶಾಂತ್ ಮಾಲೀಕರು ಕೆ.ಪಿ.ಎಲ್. ಬಿಲ್ಡ್ ಮಾರ್ಟ್ ಕನ್ಸ್ಟ್ರಕ್ಷನ್ ಮೆಟೀರಿಯಲ್


ನಾಡಿನ ಸಮಸ್ತ ಜನತೆಗೆ
ನಾಡಪ್ರಭು
ಕೆಂಪೇಗೌಡರ
515ನೇ
ಜಯಂತೋತ್ಸವದ
ಶುಭಾಶಯಗಳು
ದಿನಾಂಕ: 27.06.2024, ಗುರುವಾರ
ಸ್ಥಳ : ಕಲಾಮಂದಿರ, ಮೈಸೂರು
ಸರ್ವರಿಗೂ ಸುಸ್ವಾಗತ
ಶುಭಾಶಯಗಳೊಂದಿಗೆ
ನಾರಾಯಣಗೌಡ.ಸಿ.
ಅಧ್ಯಕ್ಷರು
ಮೈಸೂರು ನಗರ ಜಿಲ್ಲಾ ಹೋಟಲು ಮಾಲೀಕರ ಸಂಘ (ರಿ) ಮೈಸೂರು
ದಕ್ಷಿಣ ಪಾಕ ವೆಜ್ ರೆಸ್ಟೋರೆಂಟ್
ತಾಲೂಕ್ ಕಛೇರಿ ಹತ್ತಿರ, ಮೈಸೂರು


VISMAYA ADVERTISERS
8050302424
ಶ್ರೀ ಉಮೇಶ್ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಮಾಲೀಕರು, ಯು.ಕೆ.ಎಂಟರ್‌ಪ್ರೈಸಸ್, ಮೈಸೂರು
ಯುವ ಮೋರ್ಚಾ ಕಾರ್ಯದರ್ಶಿ, ಬಿಜೆಪಿ